## ಅಧ್ಯಾಯ 5

# ಕರ್ತನ ದಿನ ಮತ್ತು ಬುದ್ಧಿವಾದಗಳು

### ಕ್ರಿಸ್ತನ ಎರಡನೆಯ ಬರೋಣದ ಕಾಲದ ಕುರಿತ ಬೋಧನೆ (5:1-11)

[1]ಸಹೋದರರೇ, ಈ ಸಂಗತಿಗಳು ನಡೆಯಬೇಕಾದ ಕಾಲಗಳನ್ನೂ ಗಳಿಗೆಗಳನ್ನೂ
ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ. [2]ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ
ಹಾಗೆಯೇ ಕರ್ತನ ದಿನವು ಬರುವದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ.
[3]ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ
ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವದು; ಅವರು
ಹೇಗೂ ತಪ್ಪಿಸಿಕೊಳ್ಳಲಾರರು. [4]ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ
ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ. [5]ನೀವೆಲ್ಲರು ಬೆಳಕಿನವರೂ ಹಗಲಿನವರೂ
ಆಗಿದ್ದೀರಷ್ಟೆ; ನಾವು ರಾತ್ರಿಯವರೂ ಅಲ್ಲ, ಕತ್ತಲೆಯವರೂ ಅಲ್ಲ. [6]ಆದಕಾರಣ ನಾವು
ಇತರರಂತೆ ನಿದ್ದೆಮಾಡದೆ ಎಚ್ಚರವಾಗಿರೋಣ, ಸ್ವಸ್ಥಚಿತ್ತರಾಗಿರೋಣ. [7]ನಿದ್ದೆಮಾಡುವವರು
ರಾತ್ರಿಯಲ್ಲಿ ನಿದ್ದೆಮಾಡುತ್ತಾರೆ, ಅಮಲೇರುವವರು ರಾತ್ರಿಯಲ್ಲಿ ಅಮಲೇರುತ್ತಾರಷ್ಟೆ.
[8]ನಾವಾದರೋ ಹಗಲಿನವರಾಗಿರಲಾಗಿ ವಿಶ್ವಾಸಪ್ರೀತಿಗಳೆಂಬ ವಜ್ರಕವಚವನ್ನೂ ರಕ್ಷಣೆಯ
ನಿರೀಕ್ಷೆಯೆಂಬ ಶಿರಸ್ತ್ರಾಣವನ್ನೂ ಧರಿಸಿಕೊಂಡು ಸ್ವಸ್ತಚಿತ್ತರಾಗಿರೋಣ. [9]ಯಾಕೆಂದರೆ
ದೇವರು ನಮ್ಮನ್ನು ತನ್ನ ಕೋಪಕ್ಕೆ ಗುರಿಯಾಗಬೇಕೆಂದು ನೇಮಿಸದೆ ನಾವು ನಮ್ಮ
ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಬೇಕೆಂದು
ನೇಮಿಸಿದನು. [10]ನಾವು ಎಚ್ಚರವಾಗಿದ್ದರೂ ಸರಿಯೇ ನಿದ್ದೆಯಲ್ಲಿದ್ದರೂ ಸರಿಯೇ, ತನ್ನ
ಜೊತೆಯಲ್ಲಿಯೇ ಜೀವಿಸಬೇಕೆಂದು ಆತನು ನಮಗೋಸ್ಕರ ಸತ್ತನು. [11]ಆದದರಿಂದ ನೀವು
ಈಗ ಮಾಡುತ್ತಿರುವ ಪ್ರಕಾರವೇ ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ
ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ.

**ವಚನ 1.** ಥೆಸಲೋನಿಕದವರು ತಮ್ಮ ಸತ್ತು ಹೋಗಿರುವ ಪ್ರಿಯರ ವಿಷಯದಲ್ಲಿ ಇಟ್ಟುಕೊಂಡಿದ್ದ ಮನೋಭಾವದ ಬಗ್ಗೆ ಪೌಲನು ಕಳಕಳಿಯನ್ನು ಹೊಂದಿದ್ದನು, ಆದರೆ ಅದಕ್ಕಿಂತಲೂ ಅಧಿಕವಾಗಿ ಕ್ರಿಸ್ತನ ಎರಡನೆಯ ಬರೋಣದ ಕುರಿತು ಸ್ವತಃ ಅವರಿಗಿದ್ದ ತಿಳುವಳಿಕೆಯ ಬಗ್ಗೆ ಕಳಕಳಿ ಹೊಂದಿದ್ದನು. ತತ್ಫಲಿತವಾಗಿ, ಆತನು ಆ ಬರೋಣದ "ಯಾವಾಗ" ಎಂಬುದರ ಕಡೆಗೆ ಮತ್ತು ಸಿದ್ಧರಾಗಿರುವಂತೆ ಒಂದು ಬುದ್ಧಿವಾದ ಹೇಳುವದರ ಕಡೆಗೆ ತಿರಿಗಿಕೊಳ್ಳುತ್ತಾನೆ. ಆತನು ಅವರಿಗೆ **ಕಾಲಗಳನ್ನೂ ಗಳಿಗೆಗಳನ್ನೂ ಕುರಿತು**

ಬರೆಯುವದು ಅವಶ್ಯವಿಲ್ಲ ಎಂದು ಹೇಳುತ್ತಾನೆ (ಇದೇ ರೀತಿಯ ಭಾಷೆಯ ಬಳಕೆಯನ್ನು 4:9ರಲ್ಲಿ ನೋಡಿರಿ), ಯಾಕೆಂದರೆ ಸ್ಪಷ್ಟವಾಗಿರುವಂತೆ, ಕ್ರಿಸ್ತನ ಎರಡನೆಯ ಬರೋಣದ ಕುರಿತಾದ ಕೆಲವೊಂದು ಮಾಹಿತಿಗಳು ಸ್ವತಃ ದೇವರಿಗೆ ಮಾತ್ರವೇ ಮೀಸಲಿಡಲ್ಪಟ್ಟಿರುತ್ತವೆ.

"ಕಾಲಗಳು" ಗ್ರೀಕ್ ನ χρόνος (*chronos*) ಎಂಬ ಪದದಿಂದ ಬಂದಿದ್ದು, ಆ ಪದದಿಂದಲೇ ನಮಗೆ "chronological" (ಕಾಲಾನುಕ್ರಮ) ಎಂಬುದು ಬಂದಿರುತ್ತದೆ, ಅದರ್ಥವು "ಕಾಲದ ಕ್ರಮ." *Chronos* ಎಂಬುದು ನಮ್ಮ "ಕಾಲಗಳು" ಎಂಬುದರೊಂದಿಗೆ ನಿಕಟ ಅರ್ಥವನ್ನು ಹೊಂದಿದೆ ಮತ್ತು ಅದನ್ನು ಸುಲಭವಾಗಿ ಅನುವಾದಿಸಬಹುದಾಗಿದೆ. "ಗಳಿಗೆಗಳು" ಎಂಬುದು ಗ್ರೀಕ್ ನ καιρός (*kairos*) ಎಂಬ ಪದದಿಂದ ಬಂದಿರುತ್ತದೆ ಮತ್ತು ಇದನ್ನು ಅನುವಾದಿಸುವದು ಹೆಚ್ಚು ಕಷ್ಟಕರವಾಗಿರುತ್ತದೆ. ಇದೊಂದು "ನಿಶ್ಚಿತವಾದ ಮತ್ತು ನಿರ್ದಿಷ್ಟವಾದ ಕಾಲ"ವನ್ನು ಸೂಚಿಸುತ್ತದೆ, ಅದು "ಗುಣಮಟ್ಟದ ಗಳಿಗೆ" ಆಗಿರುತ್ತದೆ, ಅದರಲ್ಲಿ ಗಾತ್ರ ಅಥವಾ ಕಾಲಾವಧಿಗಿಂತಲೂ ಗುಣಮಟ್ಟಕ್ಕೆ ಹೆಚ್ಚು ಒತ್ತು ಇರುತ್ತದೆ. ಆದದರಿಂದ, ಅದು "ಅವಕಾಶ"[1] ಎಂಬಂತಹ ಪದವನ್ನು ಹೋಲುವ ಅರ್ಥವನ್ನು ಪಡೆದುಕೊಂಡಿತು. ಈ ನಿರ್ದಿಷ್ಟವಾದ ಗ್ರೀಕ್ ಪದಗಳು ಅಪೊಸ್ತಲರ ಕೃತ್ಯಗಳು 1:7ರಲ್ಲಿ ಸಹ ಬಳಸಲ್ಪಟ್ಟಿವೆ.

**ವಚನ 2.** ಥೆಸಲೋನಿಕದವರು ಈಗಾಗಲೆ ಈ ಶ್ರೇಷ್ಟ ಘಟನೆಯ ಕುರಿತಾಗಿ ಕೆಲವು ಸತ್ಯಗಳನ್ನು **ಚೆನ್ನಾಗಿ ತಿಳಿದಿದ್ದರು**, ಸ್ಪಷ್ಟವಾಗಿರುವ ಪ್ರಕಾರ ಪೌಲನು ಅವರ ಮಧ್ಯದಲ್ಲಿದ್ದಾಗ ವೈಯಕ್ತಿಕವಾಗಿ ಬೋಧನೆಯ ಮಾಡಿದ್ದರಿಂದ ತಿಳುಕೊಂಡಿದ್ದರು. ಅವರಿಗೆ ತಾವು "ಕಾಲಗಳನ್ನೂ ಗಳಿಗೆಗಳನ್ನೂ" ತಿಳಿಯುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಮಟ್ಟಿಗೆ "ಚೆನ್ನಾಗಿ ತಿಳಿದಿದ್ದರು" ಎಂದು ಪೌಲನು ಹೇಳಿದನು (ವ. 1) ಎಂಬುದಾಗಿ A. T. Robertsonನು ನಂಬಿದನು, ಯಾಕೆಂದರೆ, ಆತನು ಅವರಲ್ಲಿದ್ದ ವೇಳೆ ಅವರಿಗೆ ಕಲಿಸಿದ್ದೇನೆಂದರೆ ಅಂಥ ಮಾಹಿತಿಯ ದೇವರಿಗೆ ಮಾತ್ರವೇ ಮೀಸಲಿಡಲ್ಪಟ್ಟಿರುವದರಿಂದ ಅವರು ಆ ವಿಷಯದಲ್ಲಿ ತಿಳಿಯದವರಾಗಿರಬೇಕು ಎಂಬದೆ.[2] Leon Morrisನ ಈ ಅರ್ಥನಿರೂಪಣೆಯು ಇರುವ ಸಾಧ್ಯತೆಯಿದೆ.[3]

"ನಿಖರವಾಗಿ, ಹೆಚ್ಚು ನಿರ್ದಿಷ್ಟವಾಗಿ" ಎಂಬ ಅರ್ಥವನ್ನು ಸಹ ಕೊಡಬಹುದಾದ "ಚೆನ್ನಾಗಿ" (ἀκριβῶς, *akribōs*) ಎಂಬುದರ ವಿಷಯದಲ್ಲಿ, Robert Jewett ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ,

> . . . ಪೌಲನು ಬಹುಶಃ ಥೆಸಲೋನಿಕದವನೊಬ್ಬನ ವಿಚಾರಣೆಯೊಂದಕ್ಕೆ ಉತ್ತರಿಸುತ್ತಿರಬಹುದಾಗಿದೆ [ಉದಾಹರಣೆಗೆ], "*parousia* ವು *ನಿಖರವಾಗಿ* ಯಾವಾಗ ಸಂಭವಿಸಲಿದೆ ಎಂಬುದನ್ನು ನಮಗೆ ಹೇಳು." ಮೇಲ್ನೋಟದ ಪ್ರಕಾರ ತೋರಿ ಬರುವದೇನೆಂದರೆ ಅಂಥ ಪ್ರಶ್ನೆಯಲ್ಲಿ ಪೌಲನು ಅವರಿಗೆ 1 ಥೆಸಲೋನಿಕ 5:1, 2ರಲ್ಲಿ (cf. 2 ಥೆಸಲೋನಿಕ 2:5 ಸಹ) ನೆನಪಿಸುತ್ತಿರುವಂಥ ಸಂಪ್ರದಾಯಿಕ ಬೋಧನೆಯನ್ನು ನಿರಾಕರಿಸುವಿಕೆ ಅಥವಾ ಅದನ್ನು ಸ್ವೀಕರಿಸಿಕೊಳ್ಳಲು ಅಶಕ್ತಿಯಿರುವಿಕೆಯು ಸೇರಿರಬಹುದಾಗಿದೆ. ಒಂದು ಸುಳ್ಳು ಅರ್ಥದ ಭದ್ರತೆಯ ಕುರಿತ ಎಚ್ಚರಿಕೆಯು

(1 ಥೆಸಲೋನಿಕ 5:3) ತೋರಿಸುವದೇನೆಂದರೆ ಸಭೆಯು ಭವಿಷ್ಯದಲ್ಲಿ ನ್ಯಾಯತೀರ್ಪಿನ ಸಾಧ್ಯತೆಯನ್ನು ಕಡೆಗಣಿಸುತ್ತಿದ್ದರೆಂದು ತೋರಿಸುವಂತೆ ಕಾಣಿಸುತ್ತದೆ. ಅವರು *parousia* ನೆರಳಿನಲ್ಲಿರುವ ಜೀವಿತಕ್ಕೆ ಅಗತ್ಯವಿದ್ದಂತ ಸಿದ್ಧತೆಯ ಸ್ಥಿತಿಯನ್ನು ಕಾಪಾಡಿಕೊಳ್ಳುವದನ್ನು ವಿರೋಧಿಸಿದ್ದರೆಂದು ಕಾಣುತ್ತದೆ (1 ಥೆಸಲೋನಿಕ 5:6-8). ಅವರು ಹೊಸ ಯುಗದ ಸದಸ್ಯರುಗಳಾಗಿ ಆರಿಸಿಕೊಳ್ಳಲ್ಪಟ್ಟಿರುವದರ ಕಾರಣದಿಂದ (1 ಥೆಸಲೋನಿಕ 1:4), ತಮಗೆ ಒಂದು ಭದ್ರವಾದ ಸ್ಥಿತಿಯಿರುತ್ತದೆಂಬದಾಗಿ ಭಾವಿಸಿದ್ದಂತೆ ತೋರುತ್ತದೆ. ಆದರೆ ಅವರು ವಿರೋಧವನ್ನು ಅನುಭವಿಸಿದ್ದು ಹೊಸ ಯುಗದ ವಾಗ್ದಾನಕ್ಕೆ ತದ್ವಿರುದ್ಧವಾಗಿರುವಂತೆ ಕಂಡಿತ್ತು. ಆದ್ದರಿಂದ, ಅವರು 1 ಥೆಸಲೋನಿಕ 5:14ರಲ್ಲಿನ "ಮನಗುಂದಿದವರು," ಆ ಮೂಲಕ ಅವರು "ಬಲಹೀನರಾಗಿದ್ದರು," "ನಿರಾಶರಾಗಿದ್ದರು," ಮತ್ತು . . . "ದ್ವಂದ್ವಾರ್ಥದಿಂದ ತಾಳ್ಮೆ ಕಳಕೊಂಡವರು" ಎಂಬ ಬಣ್ಣನೆಗೆ ಅವರು ಸರಿಹೊಂದುತ್ತಾರೆ. ಹೇಳುವದಾದಲ್ಲಿ, ನಡೆದುಹೋಗಿರುವ ಅಂತಿಮಗತಿಯ ಕುರಿತ ಅವರ ತೀಕ್ಷ್ಣವಾದ ಅನುಭವದಿಂದಾಗಿ, ಒಂದು ಭವಿಷ್ಯದ ಅಂತಿಮಗತಿಯ ಅನಿಶ್ಚಿತತೆಯೊಂದಿಗೆ ಜೀವಿಸುವದಕ್ಕೆ ಮನಸ್ಸಿಲ್ಲದಿರುವಿಕೆಯನ್ನುಂಟು ಮಾಡಿತ್ತು.[4]

**ಕರ್ತನ ದಿನ** ಎಂಬುದು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಾರಿ ಹೇಳಲ್ಪಟ್ಟಿರುತ್ತದೆ. ವಾಸ್ತವಾಂಶದಲ್ಲಿ, ಈ ಪದಗುಚ್ಛವು ಆಮೋಸನ ದಿನದಲ್ಲಿ (ಕ್ರಿ.ಪೂ. 750) ಒಂದು "ಬೆಳಕಿನ," ಅಥವಾ "ಆಶೀರ್ವಾದ"ದ ದಿನವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿತ್ತು, ಆದರೆ ಅವರ ದುಷ್ಟತನದ ಕಾರಣದಿಂದಾಗಿ ಅದು "ಕತ್ತಲೆಯ" ಅಥವಾ ಅಪರಾಧ ನಿರ್ಣಯದ ದಿನವಾಗಲಿದೆ ಎಂದು ಪ್ರವಾದಿಯು ಎಚ್ಚರಿಸುತ್ತಾನೆ (ಆಮೋಸ 5:18). ಕೆಲವು ಸಾರಿ "ಕರ್ತನ ದಿನ"ವು ಭೂಮಿಯ ಮೇಲೆ ಮನುಷ್ಯನ ಅಸ್ತಿತ್ವದ ಕಾಲದಲ್ಲಿಯೇ ಸಂಭವಿಸುವದಾಗಿತ್ತು, ಉದಾಹರಣೆಗೆ ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನ, ಆದರೆ ಈ ದಿನಗಳೆಲ್ಲವೂ ಒಂದು ಮಹಾ "ಕರ್ತನ ದಿನ"ಕ್ಕೆ-ಇತಿಹಾಸದ ಅಂತ್ಯದಲ್ಲಿ ಸಂಭವಿಸುವ ಅಂತಿಮ ನ್ಯಾಯತೀರ್ಪು, ಅದರ ಬಗ್ಗೆಯೇ ಇಲ್ಲಿ ಮಾತಾಡಲಾಗಿರುತ್ತದೆ (1 ಕೊರಿಂಥ 1:8; 5:5; ಫಿಲಿಪ್ಪಿ 1:6ನ್ನು ಸಹ ನೋಡಿರಿ) ಮುನ್ ಛಾಯೆಗಳಾಗಿದ್ದವು. ಅದು ಕೆಲವು ಜನರಿಗೆ "ಕೋಪ"ದ ಅಥವಾ ದಂಡನೆಯ ದಿನವಾಗಿರಲಿದೆ (ರೋಮಾ 2:5) ಮತ್ತು ಇನ್ನು ಕೆಲವರಿಗೆ "ವಿಮೋಚನೆಯ" ದಿನವಾಗಲಿದೆ (ಎಫೆಸ 4:30).

ಅವರು ಈ ದಿನದ ಕುರಿತು ಈಗಾಗಲೇ ಏನನ್ನು ತಿಳಿದಿದ್ದರೆಂದರೆ ಅದು **ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ** ಬರಲಿತ್ತು ಎಂಬದೆ. ಪೌಲನು ಅವರ ಜೊತೆಯಲ್ಲಿರುವ ವೇಳೆ ಈ ಸತ್ಯವನ್ನು ಕಲಿಸಿರಬಹುದೆಂಬುದು ಸ್ಪಷ್ಟವಾಗಿರುತ್ತದೆ. ಒಬ್ಬ ಕಳ್ಳನು ಅನಿರೀಕ್ಷಿತವಾಗಿ ಬರುವನು, ನಾವು ನೋಡದಿರುವಾಗ ನಮ್ಮ ಕಣ್ಣು ತಪ್ಪಿಸಿ ಬರುತ್ತಾನೆ. ಅದೇ ರೀತಿಯಲ್ಲಿಯೇ, ಯೇಸುವು ಫಕ್ಕನೆ ಮತ್ತು ಅನಿರೀಕ್ಷಿತವಾಗಿ ಬರುವನು (ಮತ್ತಾಯ 24:43, 44; 2 ಪೇತ್ರ 3:10). ಈಗಾಗಲೆ ನಾವು ಗಮನಿಸಿರುವಂತೆ, ಆತನು ಯಾವಾಗ ಬರುವನೆಂಬುದು ತಂದೆಗೆ ಮಾತ್ರವೇ ತಿಳಿದದೆ (ಮತ್ತಾಯ 24:36; ಮಾರ್ಕ 13:32), ಆದರೆ ಆತನು ಯಾವದೋ ಒಂದು ಸಮಯದಲ್ಲಿ ಬರುವನೆಂಬುದಂತೂ ನಿಶ್ಚಿತವಾಗಿದೆ, ಆದ್ದರಿಂದ ನಾವು ನಮ್ಮನ್ನು ಸಿದ್ಧತೆಯಲ್ಲಿಟ್ಟುಕೊಂಡಿರತಕ್ಕದ್ದು (ಪ್ರಕಟನೆ

16:15; ಇಬ್ರಿಯ 10:31).

I. Howard Marshallನು ಇಲ್ಲಿ ಒಂದು ಸೂಕ್ತವಾದ ಬುದ್ಧಿವಾದವನ್ನು ಸೇರ್ಪಡೆಗೊಳಿಸುತ್ತಾನೆ:

> ಇಂದು ಅನೇಕ ಜನರು ಕಡೇ ಕಾಲದ ಘಟನೆಗಳ ಕುರಿತಾದ ಕಾಲ ಮತ್ತು ಗತಿಯ ಬಗ್ಗೆ ಹೆಚ್ಚು ವಿವರಗಳಿಗಾಗಿ ಹಂಬಲಿಸುತ್ತಾರೆಂಬುದನ್ನು ಗಮನಿಸುವದು ಯೋಗ್ಯವಾಗಿರುತ್ತದೆ, ಮತ್ತು ಆ ಪ್ರಶ್ನೆಗೆ ಕ್ಷಣಕ್ಷಣದ ವಿವರಗಳನ್ನು ನೀಡುತ್ತಾ ಮತ್ತು ಸ್ವಲ್ಪವೂ ಕಲ್ಪನೆಯಿಲ್ಲದೆಯೇ ಉತ್ತರವನ್ನು ಕೊಡುವದಕ್ಕೆ ಸಿದ್ಧರಿರುವಂಥ ಬರಹಗಾರರು ಇದ್ದಾರೆ. ಎರಡನೆಯ ಬರೋಣದ "dispensational" (ದೈವವ್ಯವಸ್ಥೆ) ಬೋಧನೆಯನ್ನು ಪ್ರತಿಪಾದಿಸುವ ಕೆಲವರು ಭವಿಷ್ಯದ ಘಟನೆಗಳ ಕುರಿತ ಒಂದು ಸಮಗ್ರವಾದ ಮತ್ತು ವಿಸ್ತಾರವಾದ ವೇಳಾಪಟ್ಟಿಯನ್ನು ಒದಗಿಸುವದಕ್ಕೆ ವಿಶೇಷ ಒಲವು ಹೊಂದಿರುತ್ತಾರೆ. ಪೌಲನ [ವಿಷಯದಲ್ಲಿ] ಹಾಗಿರಲಿಲ್ಲ. ವಿವರವಾದ ಮಾಹಿತಿಯನ್ನು ಕೊಡುವಂತೆ ಆತನನ್ನು ಕೇಳಿಕೊಂಡಾಗ, ಆತನು ಈ ವಾಕ್ಯಭಾಗದಲ್ಲಿ ಏನು ಹೇಳುತ್ತಾನೋ ಅದನ್ನು ಬಿಟ್ಟರೆ ಆತನ ಬಳಿಯಲ್ಲಿ ಹೇಳುವದಕ್ಕೆ ಬೇರೆ ಇನ್ನೇನೂ ಇರಲಿಲ್ಲ. ಇಂದು ಕ್ರೈಸ್ತ ಬೋಧಕರು ಆತನ ಮಾದರಿಯನ್ನು ಅನುಸರಿಸಿದರೆ ಉತ್ತಮವಾಗಿರುತ್ತದೆ ಮತ್ತು ಹೀಗೆ "ಶಾಸ್ತ್ರದಲ್ಲಿ ಬರೆದಿರುವದನ್ನು ಮೀರಿ ಹೋಗಬಾರದು" (1 ಕೊರಿಂಥ 4:6, ಅಕ್ಷರಶಃ ತರ್ಜುಮೆಯಾಗಿರುತ್ತದೆ).[5]

**ವಚನ 3.** ಕ್ರಿ.ಪೂ ಏಳನೆಯ ಶತಮಾನದಲ್ಲಿ, ಪ್ರವಾದಿಯಾದ ಯೆರೆಮೀಯನು ಯೆರೂಸಲೇಮಿನ ನಾಶನ ಮತ್ತು ಸೆರೆಯಾಗುವಿಕೆಯ ಬಗ್ಗೆ ಮುಂತಿಳಿಸಿದಾಗ (ಯೆರೆಮೀಯ 6:1), ಕೆಲವು ಸುಳ್ಳು ಪ್ರವಾದಿಗಳು ಆತನು ಹೇಳಿದ್ದಕ್ಕೆ ವಿರುದ್ಧವಾದದ್ದನ್ನು ಹೇಳುತ್ತಿದ್ದರು, ದೃಢವಿಶ್ವಾಸದೊಂದಿಗೆ "ಮೇಲು" (ಸಮಾಧಾನ) ಎಂದು ಪ್ರವಾದಿಸುತ್ತಿದ್ದರು (ಯೆರೆಮೀಯ 6:14). ಅದೇ ರೀತಿಯಲ್ಲಿಯೇ, ಅವಿಧೇಯರಿಗೆ ದಂಡನೆಯನ್ನು ಮಾಡುವದಕ್ಕೆ ಕ್ರಿಸ್ತನ ಬರೋಣದ ಕಾಲದ ತನಕ, ಅನೇಕ ಅಪನಂಬಿಗಸ್ತರಾದ ಬೋಧಕರು "ಸಮಾಧಾನ ಮತ್ತು ನಿರ್ಭಯ" ಎಂದು ಹೇಳುತ್ತಿರುವರು. (2 ಪೇತ್ರ 3:3-9ರಲ್ಲಿನ "ಕುಚೋದ್ಯಗಾರರು" ಎಂಬುದರೊಂದಿಗೆ ಹೋಲಿಸಿರಿ.)

ಯೆರೆಮೀಯನ ದಿನದಲ್ಲಿ ಸುಳ್ಳು ಪ್ರವಾದಿಗಳು ಹೇಳಿದ್ದು ಹೇಗೆ ಸುಳ್ಳಾಗಿ, ಕ್ರಿ.ಪೂ 586ರಲ್ಲಿ ಬಾಬಿಲೋನಿನ ಕೈಯಲ್ಲಿ ಯೆರೂಸಲೇಮ್ ನಾಶಗೊಳಿಸಲ್ಪಟ್ಟಿತೋ, ಹಾಗೆಯೇ ಈ ಯುಗದಲ್ಲಿ ಸಹ ಅವರು ಸುಳ್ಳಾಗುವರು. ಯೇಸು ಅವಿಧೇಯರಿಗೆ ದಂಡನೆಯನ್ನು ಮಾಡುವದಕ್ಕೆ ಬರುವನು. ವಾಸ್ತವದಲ್ಲಿ, **ಅವರ ಮೇಲೆ ನಾಶನವು . . . ಬರುವದು.** "ನಾಶನ" ಎಂಬುದು ὄλεθρος (*olethros*) ಎಂಬ ಪದದಿಂದ ಬಂದದ್ದಾಗಿದ್ದು ಅದು ಅಸ್ತಿತ್ವದಲ್ಲಿಲ್ಲದಂತೆ ಹೋಗುವದು ಎಂದರ್ಥವನ್ನು ಕೊಡುವದಿಲ್ಲ, ಆದರೆ ಒಂದು ನಾಶನದ ಮತ್ತು ಕಾರ್ಯಮಾಡದ ಸ್ಥಿತಿಯಲ್ಲಿ ಅಸ್ತಿತ್ವವನ್ನು ಮುಂದುವರೆಸುವದು ಎಂದರ್ಥವಾಗಿದೆ. ಇದೇ ಪದವು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ "ಕರ್ತನಾದ ಯೇಸು . . . ತನ್ನ ಸುವಾರ್ತೆಗೆ ಒಳಪಡದವರು" "ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು" ಎಂಬುದನ್ನು ಸೂಚಿಸಲು ಬಳಸಲ್ಪಟ್ಟಿದೆ (2 ಥೆಸಲೋನಿಕ 1:8, 9). ಪೇತ್ರನ ಪ್ರಕಾರವಾಗಿ

ಪಾಷಂಡ ಬೋಧನೆಯಿಂದ ಉಂಟಾಗುವ "ಥಕ್ಕನೆ ನಾಶನ" ಎಂಬುದರೊಂದಿಗೆ ಹೋಲಿಸಿರಿ (2 ಪೇತ್ರ 2:1).[6]

ಪುನಃ, "ನಾಶನ" ಎಂಬುದು ಇಲ್ಲಿ ಸರ್ವನಾಶನ ಎಂಬ ಅರ್ಥವನ್ನು ಕೊಡುವದಿಲ್ಲ. ವಾಸ್ತವಾಂಶದಲ್ಲಿ *olethros* ಎಂಬುದು 1 ಕೊರಿಂಥ 5:5ರಲ್ಲಿ ಸಹ ಬಳಸಲ್ಪಟ್ಟಿದ್ದು, ಅಲ್ಲಿ ಅದು ಸರ್ವನಾಶನ ಎಂಬ ರೀತಿಯಲ್ಲಿ ನಾಶನ ಎಂದರ್ಥವನ್ನು ಕೊಡಲಾರದು, ಸರ್ವನಾಶನವೆಂಬುದರಲ್ಲಿ ಅವಿಧೇಯನ ಶಾರೀರಿಕ ಮರಣ ಸೇರುವದು. ಅಂತಹದ್ದು ಆತ್ಮವು "ಕರ್ತನ ದಿನದಲ್ಲಿ ರಕ್ಷಿಸಲ್ಪಡುವ" ಸಾಧ್ಯತೆಯನ್ನು ಹೊರಗಿಡುವದಾಗಿರುತ್ತದೆ. David J. Williams ಹೀಗೆ ಹೇಳಿದನು, "ಈ ನಾಶನವನ್ನು ದೇವರಿಂದ ಸರ್ವನಾಶಗೊಳ್ಳಲ್ಪಡುವಿಕೆ ಎಂಬುದಕ್ಕಿಂತಲೂ ದೇವರಿಂದ ಬೇರ್ಪಡುವಿಕೆ ಎಂಬರ್ಥದಲ್ಲಿ ತಿಳಿದುಕೊಳ್ಳತಕ್ಕದ್ದು."[7] (2 ಥೆಸಲೋನಿಕ 1:9ರ ಮೇಲಿನ ಚರ್ಚೆಯನ್ನು ನೋಡಿರಿ.)

ಅವಿಧೇಯರ ಮೇಲೆ "ನಾಶನವು" **ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ** ಬರುವದು. ಒಂದು ಕ್ಷಣದಲ್ಲಿ ಅಂಥ ಸ್ತ್ರೀಯು ಚೆನ್ನಾಗಿಯೇ ಇದ್ದಾಳೆಂದು ತೋರಬಹುದು, ಆದರೆ ಕೆಲವು ಸ್ತ್ರೀಯರಿಗೆ ಪ್ರಸವವೇದನೆ ಎಷ್ಟೋಂದು ವೇಗವಾಗಿ ಬರುತ್ತದೆಂದರೆ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯುವದಕ್ಕೂ ಸಹ ಸಮಯ ಇಲ್ಲದಂತಾಗುತ್ತದೆ. ಕರ್ತನ ಬರೋಣವು ಸಹ ಅನಿರೀಕ್ಷಿತವಾದದ್ದು. ಪುನಃ, ಒಂದು ಸಂಗತಿಯಂತೂ ನಿಶ್ಚಿತವಾದದ್ದು: ಆತನು ಬರುವನು, ಮತ್ತು ಆತನ ಜೊತೆಯಲ್ಲಿಯೇ ಅವಿಧೇಯರಿಗೆ "ನಾಶನವು ಬರುವದು." ಆದದರಿಂದ, ಗರ್ಭಿಣಿ ಸ್ತ್ರೀಗೆ ಪ್ರಸವವೇದನೆಯು ಖಚಿತವಾಗಿ ಬರುವಂತೆಯೇ, ಯೇಸುವು ಬರುವನು, ಮತ್ತು ಅವಿಧೇಯರು ಅಪರಾಧನಿರ್ಣಯನ್ನು ಮತ್ತು ದಂಡನೆಯಿಂದ **ತಪ್ಪಿಸಿಕೊಳ್ಳಲಾರರು** (2 ಥೆಸಲೋನಿಕ 1:6-10). ಆ ಕಾಲದಲ್ಲಿ ಅವಿಶ್ವಾಸಿಗಳು ಮತ್ತು ಅಪನಂಬಿಗಸ್ತ ಕ್ರೈಸ್ತರು ಇಬ್ಬರೂ ತಮ್ಮ ಮೇಲೆ ನಾಶನವನ್ನು ಬರಮಾಡಿಕೊಳ್ಳುವರು. ಅವರು "ತಪ್ಪಿಸಿಕೊಳ್ಳಲಾರರು."

**ವಚನ 4.** ಪುರಷಾರ್ಥಕ ಸರ್ವನಾಮ **ನಿಮ್ಮ** ಎಂಬುದಕ್ಕೆ "ಈ ವಚನದಲ್ಲಿ ಎರಡು ಕಡೆಗಳಲ್ಲಿ ಒತ್ತು ಕೊಟ್ಟಿರಲಾಗಿರುತ್ತದೆ, ಕ್ರೈಸ್ತರ ಅಂತ್ಯಾವಸ್ಥೆ ಮತ್ತು ವಿಶ್ವಾಸವಿಲ್ಲದ ಲೋಕದ ಅಂತ್ಯಾವಸ್ಥೆ ನಡುವೆ ಇರುವ ಸಂಪೂರ್ಣ ತದ್ವಿರುದ್ಧತೆಯನ್ನು ಉತ್ತಮವಾಗಿ ಗುರುತಿಸುವದಾಗಿದೆ."[8]

ಮತ್ತೊಂದು ಸಾರಿ ಪೌಲನು **ಸಹೋದರರೇ** ಎಂದು ಕರೆಯುವ ಮೂಲಕ ಅವರ ಮೇಲಿನ ತನ್ನ ಮಮತೆಯನ್ನು ಒತ್ತಿ ಹೇಳುತ್ತಾನೆ. "ಸಹೋದರ" ಮತ್ತು "ಸಹೋದರರು" ಎಂಬ ಪದಗಳು 1:4; 2:1, 9, 14, 17; 3:2, 7; 4:1, 6, 9, 10 (ಎರಡು ಸಾರಿ), 13; 5:1, 4, 12, 14, 25, 26, ಮತ್ತು 27 ವಚನಗಳಲ್ಲಿ ಒಟ್ಟು ಇಪ್ಪತ್ತು ಸಾರಿ ಕಂಡು ಬರುತ್ತದೆ.

ಪೌಲನ ಸಹೋದರರು 3ನೇ ವಚನದಲ್ಲಿನ ಅವಿಶ್ವಾಸಿಗಳ ರೀಯಿತಲ್ಲಿ **ಕತ್ತಲೆಯಲ್ಲಿರುವವರು** ಆಗಿರಲಿಲ್ಲ. ಕತ್ತಲೆಯು "ದುಷ್ಟತ್ವದ ಮಂಡಲವಾಗಿದೆ." ಅವರು "ಲೋಕದ ಬೆಳಕಾಗಿರುವ" ಯೇಸುವನ್ನು ಹಿಂಬಾಲಿಸುವದಕ್ಕೆ ತೀರ್ಮಾನಿಸಿಕೊಂಡದ್ದ ರಿಂದಾಗಿ ಅವರು ದುಷ್ಟತನದಲ್ಲಾಗಲಿ ಅಥವಾ ಕತ್ತಲೆಯಲ್ಲಾಗಲಿ ಇರಲಿಲ್ಲ. ಆತನು ಹಿಂಬಾಲಿಸುವವರು ಯಾರೇ ಆಗಿದ್ದರೂ ಅವರು ಎಂದಿಗೂ "ಕತ್ತಲೆಯಲ್ಲಿ ನಡೆಯದೆ

ಜೀವಕೊಡುವ ಬೆಳಕನ್ನು ಹೊಂದಿರುವವರು" (ಯೋಹಾನ 8:12). ಅವರು, ಕೊಲೊಸ್ಸೆಯವರ ಹಾಗೆಯೇ, "ಅಂಧಕಾರದ ಧೊರೆತನದಿಂದ ಬಿಡಿಸಲ್ಪಟ್ಟು ಆತನ ಮಗನ ರಾಜ್ಯದಲ್ಲಿ ಸೇರಿಸಲ್ಪಟ್ಟಿದ್ದರು" (ಕೊಲೊಸ್ಸೆ 1:13). ಆದದರಿಂದ, ಬರಲಿರುವ ಕ್ರಿಸ್ತನ **ದಿನವು** (ನೋಡಿರಿ ವ. 2) ಅವರ ಮೇಲೆ ಕಳ್ಳನಂತೆ "ಬರುವಂಥದಲ್ಲ." ಇದರರ್ಥವು ಅವರು ಅವಿಧೇಯರಂತಲ್ಲದೆ, ದಿನ ಮತ್ತು ಗಳಿಗೆಯನ್ನು ತಿಳಿಯುವರೆಂದೋ? ಶಾಸ್ತ್ರಗಳ ಪ್ರಕಾರವಾಗಿ ಹಾಗಿರುವದಿಲ್ಲ. ಯಾವ ಮನುಷ್ಯನೂ-ಕ್ರಿಸ್ತನು ಸಹ-"ದಿನದ ವಿಷಯದಲ್ಲಾಗಲಿ ಗಳಿಗೆಯ ವಿಷಯದಲ್ಲಾಗಲಿ" ತಿಳಿಯನು (ಮಾರ್ಕ 13:32). ವಾಸ್ತವಾಂಶದಲ್ಲಿ, ಮತ್ತಾಯ 24:39-41ರಲ್ಲಿರುವಂತೆ ಹೊಲದಲ್ಲಿರುವ ಒಬ್ಬನು "ತೆಗೆದುಕೊಳ್ಳಲ್ಪಡುವನು" ಎಂಬ ರೀತಿಯಲ್ಲಿ, ವಿಧೇಯರು ಸಹ ಆತನ ಬರೋಣದಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆಂಬದಾಗಿ ಚಿತ್ರಿಸಲ್ಪಟ್ಟಿರುತ್ತಾರೆ. ಅವರು ಆತನನ್ನು ಆ ದಿನವೇ ಬರುವನೆಂಬ ನಿರೀಕ್ಷಿಸುತ್ತಿರುತ್ತಾರೆಂಬ ಅರ್ಥದಲ್ಲಿ ಸಿದ್ಧರಾಗಿರುವದಿಲ್ಲ.

ಹಾಗಾದರೆ, ಯಾವ ಅರ್ಥದಲ್ಲಿ ಆತನ ಬರೋಣವು ಅವರ ಮೇಲೆ **ಕಳ್ಳನು** ಬರುವಂತೆ "ಬರುವದಿಲ್ಲ"? ಅವರು ಆತ್ಮೀಕವಾಗಿ ಸಿದ್ಧರಾಗಿರುವರು ಮತ್ತು ಆತನ ಬರೋಣದ ವೇಳೆಯಲ್ಲಿ "ಎಚ್ಚರ ತಪ್ಪಿದವರಾಗಿ" ಇರುವದಿಲ್ಲ. ಅವರು ಆತನ ಚಿತ್ತವನ್ನು "ಉಲ್ಲಂಗಿಸುವವರಾಗಿ" ಕಂಡು ಬರುವದಿಲ್ಲ. ಕ್ರಿಸ್ತನ ಎರಡನೆಯ ಬರೋಣದ ಕುರಿತಾದ ಬುದ್ಧಿವಾದಗಳೆಲ್ಲಾ ನಾವು ಆತನ ಬರೋಣದಲ್ಲಿ ನಾವು ಎಚ್ಚರವಾಗಿಯೂ ಸಿದ್ಧರಾಗಿಯೂ ಇರುವಂತಾಗಬೇಕೆಂಬ ಉದ್ದೇಶಕ್ಕಾಗಿಯೇ ಆಗಿವೆ (ವ. 6; ಮತ್ತಾಯ 24:42; 25:13).

**ವಚನ 5. ನೀವೆಲ್ಲರು** ಎಂಬುದು ಬಹುಶಃ ಪ್ರತಿಯೊಬ್ಬನು ಸಹ ಸೇರಿದ್ದಾನೆಂಬ ವಾಸ್ತವಾಂಶವನ್ನು ಒತ್ತಿ ಹೇಳುತ್ತದೆ. J. E. Frame ಅಭಿಪ್ರಾಯ ಪಟ್ಟಿದ್ದೇನೆಂದರೆ *πάντες* (*pantes*) ಗ್ರೀಕ್ ಪದದಿಂದ ಬಂದಿರುವ "ನೀವೆಲ್ಲರು" ಎಂಬುದು "ಒಂದು ವಿಶೇಸ ಧೈರ್ಯಪಡಿಸುವದಕ್ಕಾಗಿ ಅಂಜುಬುರುಕರನ್ನು ಪ್ರತ್ಯೇಕಗೊಳಿಸುವಾಗಿದೆ."[9] Leon Morrisನು ಇಲ್ಲಿ "ನೀವೆಲ್ಲರು" ಎಂಬುದು ದುರ್ಬಲ ಸದಸ್ಯರನ್ನು ಒಳಗೊಂಡಿರುತ್ತದೆ ಎಂದು ವ್ಯಾಖ್ಯಾನಿಸುತ್ತಾನೆ.[10]

ಹೊಸ ಒಡಂಬಡಿಕೆಯಲ್ಲಿ, ವಿಶೇಷವಾಗಿ ಯೋಹಾನನ ಬಹರಗಳಲ್ಲಿ (ಉದಾಹರಣೆಗೆ, ಯೋಹಾನ 1:1-9) ಸರ್ವಸಾಮಾನ್ಯವಾಗಿರುವಂತೆ, "ಕತ್ತಲೆ ಮತ್ತು ಬೆಳಕು" ಸಾದೃಶ್ಯದ ವಿಷಯವಾಗಿ ಈಗಾಗಲೆ ತಿಳಿಸಿರುವ ಪ್ರಕಾರ, ಕತ್ತಲೆಯೆಂದರೆ "ದುಷ್ಟತನದ ಮಂಡಲ"ವಾಗಿದ್ದರೆ, ಬೆಳಕು ನೀತಿಯ ಅಥವಾ ನೀತಿಯ ನಡಾವಳಿಯ ಸಂಕೇತವಾಗಿರುತ್ತದೆಂದು ಯೋಚಿಸಲಾಗುತ್ತದೆ. ಏಕೆ ಇದು ನಿಜವಾದದ್ದು? ಮೊದಲನೆಯದಾಗಿ, ಒಬ್ಬ ವ್ಯಕ್ತಿಯು ಕಾನೂನುಬಾಹಿರವಾದ ಯಾವದಾದರೂ ಕಾರ್ಯವನ್ನು ಮಾಡುವಾಗ, ಸಿಕ್ಕಿಕೊಳ್ಳದಂತೆ ತಪ್ಪಿಸಿಕೊಳ್ಳುವದು ರಾತ್ರಿಯಲ್ಲಿ ಸುಲಭವಾಗಿರುತ್ತದೆ. ಎರಡನೆಯದಾಗಿ, ಆ ಕಾಲಗಳಲ್ಲಿ, ಅತ್ಯಂತ ಬಂಡಾಯಗಾರರಾದ ಪಾಪಿಗಳು ಸಹ ಕುಡಿತ, ಕುಡಿತದ ಕೂಟಗಳಲ್ಲಿ ಭಾಗಿಯಾಗುವದು, ಮತ್ತು ಅನೈತಿಕತೆ ಇತ್ಯಾದಿಗಳ ಬಗ್ಗೆ ಬಹುಶಃ ಇನ್ನೂ ಸಾಕಷ್ಟು ನಾಚಿಕೆಯನ್ನು ಹೊಂದಿದ್ದರಿಂದಾಗಿ

ಅವುಗಳನ್ನು ಕತ್ತಲೆಯ ಮರೆಯಲ್ಲಿ ಮಾಡುತ್ತಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 2:15; 2 ಪೇತ್ರ 2:13). ಆದದರಿಂದ ಅವಿಶ್ವಾಸಿಗಳು **ರಾತ್ರಿಯವರೂ ಕತ್ತಲೆಯವರೂ** ಆಗಿದ್ದರು ಯಾಕೆಂದರೆ ಅವರು ಬೆಳಕನ್ನು ತಿರಸ್ಕರಿಸಿದ್ದಾರೆ. ಅವರು ಕೆಲವು ಸಾರಿ ತಾವು ರಾತ್ರಿಗಾಗಲಿ ಕತ್ತಲೆಗಾಗಲಿ ಸೇರಿದವರಲ್ಲ ಎಂದು ಹೇಳಬಹುದು, ಆದರೆ ಯೇಸು ಹೇಳಿದ್ದೇನೆಂದರೆ, "ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ" (ಮತ್ತಾಯ 12:30). ಆದದರಿಂದ, ಒಬ್ಬ ಬೆಳಕಿನ ಮಗುವಾಗಿಲ್ಲವಾದರೆ, ವಾಸ್ತವದಲ್ಲಿ ಆತನು ಕತ್ತಲೆಯ ರಾಜ್ಯದಲ್ಲಿರುವವನಾಗಿದ್ದಾನೆ, ಅದಕ್ಕೆ ಸೈತಾನನೇ ಶಿರಸ್ಸು (ಯೋಹಾನ 8:44; 12:31).

ಥೆಸಲೋನಿಕದವರು ಮತ್ತು ಎಲ್ಲಾ ಕ್ರೈಸ್ತರು, **ಬೆಳಕಿನ ಮಕ್ಕಳು ಮತ್ತು ಹಗಲಿನ ಮಕ್ಕಳು** ಆಗಿದ್ದಾರೆ ಯಾಕೆಂದರೆ ಅವರು "ಲೋಕಕ್ಕೆ ಬೆಳಕಾದವನನ್ನು" ಹಿಂಬಾಲಿಸುತ್ತಾರೆ (ಯೋಹಾನ 8:12). ಆದದರಿಂದ, ಅವರು ಬೆಳಕಿನಲ್ಲಿ ಜೀವಿಸುವ ಜನರು ಮತ್ತು ತಮ್ಮ ಜೀವಿತಗಳನ್ನು ಪರಿಶೀಲಿಸಲ್ಪಡುವಂತೆ ಬಿಡುವದಕ್ಕೆ ಸಿದ್ಧರಿರುತ್ತಾರೆ. ದುಷ್ಟರು ಕತ್ತಲೆಗೆ ಸೇರಿದವರಾಗಿರುವ ಪ್ರಕಾರವೇ ಇವರು ಬೆಳಕಿಗೆ ಸೇರಿದವರು. ಇಬ್ರಿಯದಂತಹ ಭಾಷೆಗಳಲ್ಲಿ, ಒಂದು ಕಾರ್ಯದ "ಮಗನಾಗಿರುವದು" ಎಂದರೆ ಅದರ ವಿಶಿಷ್ಟಗುಣ ಹೊಂದಿರುವದು ಎಂದರ್ಥವಾಗಿರುತ್ತಿತ್ತು. ಹೀಗೆ ಒಬ್ಬ "ಬೆಳಕಿನ ಮಗ"ನಾಗಿರುವದೆಂದರೆ ಬೆಳಕಿನನ ಗುಣಗಳನ್ನು ಹೊಂದಿರುವದು ಎಂದರ್ಥವಾಗಿದೆ. ಲೂಕ 16:8ರಲ್ಲಿ, ಯೇಸುವು ಸಹ ದೇವರ ಮಕ್ಕಳನ್ನು "ಬೆಳಕಿನ ಮಕ್ಕಳು" ಎಂದು ಕರೆಯುತ್ತಾನೆ. ಮೃತ ಸಮುದ್ರದ ಸುರುಳಿಗಳಿಗೆ ಜವಾಬ್ದಾರರಾದ ಎಸ್ಸೇನರು ಸಹ ಅದೇ ಧಾಟಿಯಲ್ಲಿಯೇ, *The War of the Children of Light with the Children of Darkness* ಎಂಬ ಸುರುಳಿಯನ್ನು ಬರೆದರು. ಹೇಗೂ, ಅವರು ಒಂದು ಅಕ್ಷರಶಃ ಯುದ್ಧದ ಬಗ್ಗೆ ಮಾತಾಡುತ್ತಾರೆ, ಆದರೆ ಯೇಸುವಾದರೋ ಶಾರೀರಿಕ ಯುದ್ಧವನ್ನು ಎಂದಿಗೂ ಸಮರ್ಥಿಸಿರುವದಿಲ್ಲ.

**ವಚನ 6.** ಅವಿಶ್ವಾಸಿಗಳು-4:13ರಲ್ಲಿನ "ಇತರರು"-ಸಿದ್ಧತೆಯಿಲ್ಲದವರು ಮತ್ತು "ಕರ್ತನ ದಿನ"ವು ಅವರಿಗೆ ದಿಗ್ಭ್ರಮೆ ಹಿಡಿಸುವದು (ನೋಡಿರಿ ವ. 2). ಆತ್ಮೀಕವಾಗಿ ಹೇಳುವದಾದರೆ, ಅವರು "ನಿದ್ದೆ ಮಾಡುತ್ತಿದ್ದಾರೆ," ಕರ್ತನ ಆಜ್ಞೆಗಳ ಸಂಪೂರ್ಣ ಅರಿವಿಲ್ಲದವರಾಗಿರುತ್ತಾರೆ. ಈ ಆತ್ಮೀಕ "ನಿದ್ರಿಸುವಿಕೆಯು" ರಾತ್ರಿಯ ಮಕ್ಕಳಿಂದ ನಿರೀಕ್ಷಿಸಲ್ಪಡುತ್ತದೆ, ಆದರೆ ಅದು "ಹಗಲಿನ ಮಕ್ಕಳಾಗಿರುವ" ಕ್ರೈಸ್ತ ಸ್ವಭಾವವಾಗಿರಕೂಡದು. ಅವರು "ಹಗಲಿನ ಮಕ್ಕಳಿಗೆ" ತಕ್ಕಂತೆ ಆತ್ಮೀಕವಾಗಿ ಎಚ್ಚರದಿಂದಿರಬೇಕು.

ತಾನು ಈಗಷ್ಟೆ ಕಲಿಸಿದ್ದರ ಆಧಾರದಲ್ಲಿ ಬುದ್ಧಿವಾದವನ್ನು ಕೊಡುವ ವೇಳೆ, ಪೌಲನು **ಎಚ್ಚರವಾಗಿರೋಣ** (γρηγορέω, *grēgoreō*) ಎಂದು ಹೇಳುತ್ತಾನೆ. "ಎಚ್ಚರವಾಗಿ" ಇರುವದೆಂದರೆ ನಿದ್ದೆ ಮಾಡುವದಕ್ಕೆ ಅಥವಾ ಅಮಲಿನಲ್ಲಿರುವದಕ್ಕೆ ವಿರುದ್ಧವಾಗಿದೆ ಮತ್ತು ಬಹುಶಃ ಒಬ್ಬನು ನಿದ್ದೆ ಮಾಡುವದರಿಂದ ಬರುವ ಅಪಾಯದ ಬಗ್ಗೆ ಅರಿವು ಉಳ್ಳವನಾಗಿರುವ ಕಾರಣದಿಂದ, ಎಚ್ಚರವಾಗಿರಬೇಕೆಂದು ದೃಢನಿಶ್ಚಯ ಮಾಡಿಕೊಳ್ಳುವದು ಎಂಬ ಯೋಚನೆಯನ್ನು ಒಳಗೊಂಡಿರುತ್ತದೆ. ಒಬ್ಬ ಕ್ರೈಸ್ತನು ತನ್ನನ್ನು ತೂಕಡಿಕೆಗೆ ಒಳಪಡಿಸಿಕೊಂಡಲ್ಲಿ, ಆತನು "ಎಚ್ಚರವಾಗಬೇಕು" (ರೋಮಾ 13:11; NIV) ಮತ್ತು ಪುನಃ ತನ್ನ ಕಾವಲು ಸ್ಥಾನವನ್ನು ತೆಗೆದುಕೊಳ್ಳಬೇಕು. ಕ್ರೈಸ್ತರು ಯಾವಾಗಲೂ

**ಸ್ವಸ್ಥಚಿತ್ತರಾಗಿ** (νήφω, *nēphō*) ಇರತಕ್ಕದ್ದು. ಸಾಮಾನ್ಯವಾಗಿ ಈ ಪದದ ಅರ್ಥವು "ಅಮಲೇರದೆ" ಎಂದಾಗಿದೆ, ಆದರೆ ಅದು ಒಬ್ಬ ವ್ಯಕ್ತಿಯು ತನ್ನ ಇಂದ್ರೀಯಗಳನ್ನು ನಿಗ್ರಹಿಸಿಕೊಳ್ಳುವುದು ಎಂಬಂತಹ ಹೆಚ್ಚು ಸಾಮಾನ್ಯವಾದ ಅರ್ಥವೊಂದನ್ನು ಸಹ ಹೊಂದಿದೆ. ವಾಸ್ತವದಲ್ಲಿ, ಒಬ್ಬನು ಇಂದ್ರೀಯಗಳನ್ನು ನಿಗ್ರಹಿಸಿಕೊಳ್ಳದಿದ್ದರೆ, ಪರಿಣಾಮಕರವಾದ ರೀತಿಯಲ್ಲಿ ಎಚ್ಚರವಾಗಿರುವದು ಅಸಾಧ್ಯವಾಗುತ್ತದೆ. ಬಹುಶಃ ಇಲ್ಲಿ ಈ ಅರ್ಥವೇ ಇರಬಹುದಾಗಿದೆ. NIVಯಲ್ಲಿ "ಸ್ವಸ್ಥಚಿತ್ತರು" ಎಂಬುದರ ಬದಲಾಗಿ "ಸ್ವಹತೋಟಿ" ಎಂದಿರುತ್ತದೆ.[11]

**ವಚನ 7.** 6ನೇ ವಚನದಲ್ಲಿನ "ನಿದ್ದೆಮಾಡುವದು" ಸಾಂಕೇತಿಕವಾಗಿದೆ, ಆತ್ಮೀಕ ನಿದ್ದೆಯಾಗಿದೆ, ಆದರೆ ಇಲ್ಲಿ, ತಾನು ಈಗಷ್ಟೆ ಬಳಸಿದ ಸಂಕೇತದ ಹಿಂದಿರುವ ಅಕ್ಷರಶಃವಾದ ವಾಸ್ತವಾಂಶದ ಕಡೆಗೆ ಸಾಗುತ್ತಾನೆ. 7ನೇ ವಚನದಲ್ಲಿ, ಆತನು **ನಿದ್ದೆಮಾಡುವದು** ಮತ್ತು **ಅಮಲೇರುವವರು** ಎಂಬದನ್ನು ಅಕ್ಷರಶಃ ಅರ್ಥದಲ್ಲಿ ಮಾತಾಡುತ್ತಿದ್ದಾನೆ. ಇದಕ್ಕೆ ಕೆಲವು ಹೊರತಾದವುಗಳಿರುತ್ತವಾದರೂ, ಸಾಮಾನ್ಯವಾಗಿ ಇವುಗಳು ರಾತ್ರಿಯ ಚಟುವಟಿಕೆಗಳೆಂದು ಪರಿಗಣಿಸಲ್ಪಡುತ್ತವೆ (ಅಪೊಸ್ತಲರ ಕೃತ್ಯಗಳು 2:15).

ಅಕ್ಷರಶಃ, ವಾಕ್ಯವು ಹೀಗಿರುತ್ತದೆ, "ಅಮಲೇರುವವರು μεθύω (*methuō*) ರಾತ್ರಿಯಲ್ಲಿ ಅಮಲೇರುತ್ತಾರೆ μεθύσκω (*methuskō*)." Robertson ಪ್ರಕಾರವಾಗಿ "*methuskō* ಮತ್ತು *methuō* ನಡುವೆ ನಿಜವಾದ ವ್ಯತ್ಯಾಸವೇನೂ ಇರುವದಿಲ್ಲ . . . ಒಂದನ್ನು ಹೊರತು ಪಡಿಸಿ, ಏನೆಂದರೆ *methuskō* ಎಂಬುದರ ಅರ್ಥವು ಅಮಲೇರು ಎಂದಾಗಿರುತ್ತದೆ."[12]

**ವಚನ 8. ಹಗಲಿನರಾಗಿ** ಎಂಬುದರ ಬಗ್ಗೆ ಈಗಾಗಲೆ ವಿವರಿಸಲಾಗಿದೆ (ನೋಡಿರಿ ವ. 5), ಅದೇ ರೀತಿ **ಎಚ್ಚರವಾಗಿರೋಣ** ಎಂಬುದನ್ನೂ ವಿವರಿಸಲಾಗಿದೆ (ನೋಡಿರಿ ವ. 6). ಪೌಲನು ಇಲ್ಲಿ ನಾವು ಹೇಗೆ ಸ್ವ-ಹತೋಟಿಯಲ್ಲಿರಬಲ್ಲೆವು ಎಂಬುದನ್ನು ವಿವರಿಸುತ್ತಾನೆ: ವಿಶ್ವಾಸ, ಪ್ರೀತಿ, ಮತ್ತು ನಿರೀಕ್ಷೆಗಳನ್ನು ಧರಿಸಿಕೊಳ್ಳುವದರಿಂದಲೇ, ಇವುಗಳು ಮೂರು ಶ್ರೇಷ್ಠವಾದ ಕ್ರೈಸ್ತೀಯ ಭೂಷಣಗಳಾಗಿವೆ (ನೋಡಿರಿ 1:3; 1 ಕೊರಿಂಥ 13:13). ಸಂಗತಿಗಳು ತಪ್ಪಾಗಿ ನಡೆಯುವಂತೆ ತೋರಿದಾಗ್ಯೂ ದೇವರಲ್ಲಿ **ವಿಶ್ವಾಸ** ಅಥವಾ ಭರವಸೆ, ಮತ್ತು ಸಹಾಯದ ಅಗತ್ಯವಿರುವವರಿಗೆ, ಅವರು ನಿಮ್ಮನ್ನು ಅಪಹಾಸ್ಯ ಮಾಡಿದ್ದಾಗ್ಯೂ ಸಹಾಯವನ್ನು ಮಾಡಬೇಕೆಂಬ ಬಲವಾದ ಬಯಕೆಯನ್ನು ಹೊಂದಿರುವ, **ಪ್ರೀತಿ** (ἀγάπη, *agapē*) ಯು, ಒಂದು **ವಜ್ರಕವಚ** (ಎದೆಕವಚದಂತೆ) ಆಗುತ್ತದೆ, ಸಾಂಕೇತಿಕವಾದ ರಕ್ಷಣಾಕವಚವಾಗುವದು, ಸೈತಾನನು ನಮ್ಮ ಮೇಲೆ "ಆಕ್ರಮಣ" ಮಾಡುವದಕ್ಕೆ ಪ್ರಯತ್ನಿಸುವಾಗ ಅದು ನಮ್ಮನ್ನು ಕಾಪಾಡಿಕೊಳ್ಳುವದಕ್ಕೆ ಒಂದು ಆತ್ಮೀಕ ಆಯುಧವಾಗುತ್ತದೆ. ಈ ಆಯುಧಗಳಲ್ಲಿರುವ ಇನ್ನೊಂದು ಭಾಗವೆಂದರೆ **ರಕ್ಷಣೆಯ** [ಅಥವಾ ರಕ್ಷಣೆಯನ್ನು ಹೊಂದಿಕೊಳ್ಳುವ ಬಲವಾದ ನಿರೀಕ್ಷೆ] **ನಿರೀಕ್ಷೆ** (ರೋಮಾ 8:22-25ರೊಂದಿಗೆ ಹೋಲಿಸಿರಿ). F. F. Bruceನು "ರಕ್ಷಣೆಯ ನಿರೀಕ್ಷೆ" ಮತ್ತು ಗಲಾತ್ಯ 5:5ರಲ್ಲಿನ "ನೀತಿವಂತರಾಗುತ್ತೇವೆಂಬ ನಿರೀಕ್ಷೆ" ನಡುವೆ ಸಾಮ್ಯತೆಯನ್ನು ಗಮನಕ್ಕೆ ತರುತ್ತಾನೆ.[13]

ಈ "ರಕ್ಷಣೆಯ ನಿರೀಕ್ಷೆ"ಯು ನಮಗೋಸ್ಕರ ಇನ್ನೊಂದು ರಕ್ಷಣಾತ್ಮಕ ಆಯುಧವನ್ನು

ರೂಪಿಸುತ್ತದೆ, ಅದು ತಲೆಯನ್ನು ಕಾಪಾಡುವದಕ್ಕಿರುವ ಶಿರಸ್ತ್ರಾಣವಾಗಿರುತ್ತದೆ. ಖಂಡಿತವಾಗಿಯೂ, ಈ ಪರಲೋಕದ ನಿರೀಕ್ಷೆಯು ನಮ್ಮ ಎದೆಗಳಲ್ಲಿ ಬಲವಾಗಿರುವದಾದರೆ ನಾವು ನಮ್ಮ ಮೇಲೆ ಸೈತಾನನು ಎಸೆಯುವ ಅತಿ ಬಲವಾದ ಶೋಧನೆಗಳನ್ನು ಹಿಮ್ಮೆಟ್ಟಿಸಬಹುದು. ನಾವು ಒಂದು ಭಕ್ತಿಯುಳ್ಳ ರೀತಿಯಲ್ಲಿ ನಡಕೊಳ್ಳುವವರಾಗಿ, ನಾವು ಕರ್ತನ ದಿನವು ನಮ್ಮ ಮೇಲೆ ಕಳ್ಳನು ಬಂದ ರೀತಿಯಲ್ಲಿ ಬಾರದಿರುವಂತಾಗಲು ನಾವು-ಒಬ್ಬ ಉತ್ತಮ ಸೈನಿಕನು ಯಾವಾಗಲೂ ಇರತಕ್ಕ ರೀತಿಯಲ್ಲಿಯೇ-ಸಿದ್ಧರಾಗಿರಬಲ್ಲೆವು.

ಪೌಲನು ಪ್ರಸ್ತಾಪಿಸಿದ ಕ್ರೈಸ್ತೀಯ ಯುದ್ಧಾಯುಧಗಳ ತುಂಡುಗಳು (ಎಫೆಸ 6:11-17) ಯಾಗಾಲೂ ಕ್ರೈಸ್ತನಲ್ಲಿರುವ ಒಂದೇ ವಿಧವಾದ ಗುಣಗಳನ್ನು ಸೂಚಿಸುವದಿಲ್ಲ. ಉದಾಹರಣೆಗೆ, ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ “ವಜ್ರಕವಚ”ವು ನೀತಿಯೆಂಬ ವಜ್ರಕವಚವಾಗಿದೆ, ಆದರೆ ಇಲ್ಲಿ ಅದು “ವಿಶ್ವಾಸಪ್ರೀತಿಗಳೆಂಬ” ವಜ್ರಕವಚವಾಗಿದೆ. ಇದರರ್ಥವು ಯಾವದೇ ವಿಧವಾದ ತದ್ವಿರುದ್ಧತೆಯು ಇರುತ್ತದೆಂಬದಾಗಿರುವದಿಲ್ಲ. ಉದಾಹರಣೆಗೆ, ನಾವು ದೇವರ ಕುಟುಂಬದಲ್ಲಿ *ಹುಟ್ಟುತ್ತೇವೆ* (ಯೋಹಾನ 3:5) ಹಾಗೂ ಅದರಲ್ಲಿ ದತ್ತು *ಸ್ವೀಕರಿಸಲ್ಪಡುತ್ತೇವೆಂದು* (ರೋಮಾ 8:15; KJV) ಸಹ ಶಾಸ್ತ್ರಗಳಲ್ಲಿ ಹೇಳಲಾಗಿರುತ್ತದೆ. ಅಕ್ಷರಶಃದಲ್ಲಿ ನೋಡುವದಾದರೆ ಇವೆರಡು ಒಂದಕ್ಕೊಂದು ವಿರುದ್ಧವೇನಿಸುತ್ತವಾದರೂ, ಸಾಂಕೇತಿಕ ಅರ್ಥದಲ್ಲಿ ಅವು ವಿರುದ್ಧವಾಗಿರುವದಿಲ್ಲ. ಅವುಗಳು ನಮ್ಮ ಪುತ್ರತ್ವ ಬೇರೆ ಬೇರೆ ಕೋನಗಳನ್ನು ಸೂಚಿಸುತ್ತವಷ್ಟೆ.

6 ರಿಂದ 8 ವಚನಗಳು ರೋಮಾ 13:11-14ರೊಂದಿಗೆ ಅನೇಕ ಸಾಮ್ಯತೆಗಳನ್ನು ಹೊಂದಿದೆ:

| *1 ಥೆಸಲೋನಿಕ 5:6-8* | *ರೋಮಾ 13:11-14* |
|---|---|
| ವ. 6 –ಎಚ್ಚರವಾಗಿರಿ (ಆತ್ಮೀಕವಾಗಿ) | ವ. 11 –ಎಚ್ಚರವಾಗತಕ್ಕ (ಆತ್ಮೀಕವಾಗಿ) |
| ವ. 8 –ಸ್ವಹತೋಟಿಯಿಂದಿರಿ (ಸ್ವಸ್ಥಚಿತ್ತರು) | ವ. 12–ದುಷ್ಕೃತ್ಯಗಳನ್ನು ಬಿಡಿರಿ (ಕತ್ತಲೆಯ) |
| ವ. 8 –ಆತ್ಮೀಕ ಆಯುಧಗಳನ್ನು ಧರಿಸಿಕೊಳ್ಳಿರಿ | ವ. 12–ಆಯುಧ ಧರಿಸಿಕೊಳ್ಳಿರಿ (ಬೆಳಕಿನ) |
| | ವ. 13, 14 –ಮಾನಸ್ಥರಾಗಿ ನಡೆದುಕೊಳ್ಳಿರಿ (ಸ್ವೇಚ್ಛಾಚಾರಕ್ಕೆ ಬಿದ್ದವರಂತಲ್ಲ) |

**ವಚನ 9.** ಈ ಸಹೋದರರು “ಕರ್ತನ ದಿನ” (ವ. 2) ದಂದು ತಮ್ಮ ಸಂರಕ್ಷಣೆಗಾಗಿ

8ನೇ ವಚನದಲ್ಲಿನ ಕ್ರೈಸ್ತತ್ವ ಈ ಮೂರು ದೊಡ್ಡ ಗುಣಗಳನ್ನು ಧರಿಸಿಕೊಳ್ಳಬೇಕು, **ಯಾಕೆಂದರೆ ದೇವರು ನಮ್ಮನ್ನು ತನ್ನ ಕೋಪಕ್ಕೆ ಗುರಿಯಾಗಬೇಕೆಂದು** [ಅನುಭವಿಸಬೇಕೆಂದು] **ನೇಮಿಸಲಿಲ್ಲ.** ದೇವರ ಯೋಜನೆಯು ನಮ್ಮನ್ನು ಆತನ "ಕೋಪ"ವನ್ನು ಅನುಭವಿಸುವಂತೆ ಕರೆಯುದಿಲ್ಲ. "ಕೋಪ"ವು ಆ ದಿನದಲ್ಲಾಗುವ ದಂಡನೆಯನ್ನು ಸೂಚಿಸುತ್ತದೆ (1:10; ರೋಮಾ 2:5-11). ದೇವರ ಯೋಜನೆಯು ಅವಿಧೇಯರನ್ನು ಕೋಪಕ್ಕೆ ಗುರಿಯಾಗುವಂತೆ ಕರೆಯುವದು ನಿಜವೇ, ಆದರೆ ನಂಬಿಗಸ್ತರಾದ ಕ್ರೈಸ್ತರು ಅಂತಿಮ **ರಕ್ಷಣೆಯನ್ನು** ಹೊಂದುವರು ಮತ್ತು ಪರಲೋಕದಲ್ಲಿ ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಡುವರು (ರೋಮಾ 8:22-25). ಇದು **ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ** ಸಾಧ್ಯವಾಗಿಸಲ್ಪಟ್ಟಿರುತ್ತದೆ (ನೋಡಿರಿ ಎಫೆಸ 1:7). ಆತನು ಶಿಲುಬೆಯ ಮೇಲೆ ಮರಣಿಸಿದೆ ಇದ್ದರೆ, ನಮಗೆ ರಕ್ಷಣೆ ಹೊಂದುವದಕ್ಕೆ ಸಂದರ್ಭವೇ ಸಿಕ್ಕುತ್ತಿರಲಿಲ್ಲ.[14]

**ವಚನ 10.** ನಾವು ಯೇಸುವಿನ ಮೂಲಕವಾಗಿ ರಕ್ಷಿಸಲ್ಪಟ್ಟಿದ್ದೇವೆ, ಮತ್ತು **ಆತನು ನಮಗೋಸ್ಕರ ಸತ್ತನು** ಕಾರಣ ಆ ರಕ್ಷಣೆಯು ಸಾಧ್ಯವಾಗಿರುತ್ತದೆ. ಯಾವ "ಬಹುಜನರಿಗೋಸ್ಕರ" ತನ್ನ ರಕ್ತವು "ಸುರಿಸಲ್ಪಡಬೇಕು" ಎಂದು ಯೇಸು ಹೇಳಿದನೋ, ಆ ಬಹುಜನರಲ್ಲಿ ಪೌಲ ಮತ್ತು ಥೆಸಲೋನಿಕದ ಸಹೋದರರು ಸೇರಿದ್ದರು (ಮತ್ತಾಯ 26:28). ಥೆಸಲೋನಿಕದಲ್ಲಿರುವ ವೇಳೆ, ಪೌಲನು ಮನುಷ್ಯನ ರಕ್ಷಣೆಗೋಸ್ಕರ "ಕ್ರಿಸ್ತನು ಬಾಧೆಯನ್ನನುಭವಿಸ"ಬೇಕಾಯಿತು ಎಂದು ಸಾರಿದ್ದನು (ಅಪೊಸ್ತಲರ ಕೃತ್ಯಗಳು 17:3; ನೋಡಿರಿ 1 ಪೇತ್ರ 2:24). ನಾವು **ಆತನ ಜೊತೆಯಲ್ಲಿಯೇ ಇರಬೇಕೆಂದು** ಆತನು ಬಾಧೆಯನ್ನನುಭವಿಸಿದನು ಎಂದು ಪೌಲನು ಹೇಳುತ್ತಾನೆ. ಅಂದರೆ, ನಮ್ಮನ್ನು ತನಗೆ ಸಂಧಾನಪಡಿಸಿಕೊಳ್ಳಲು ಶಕ್ತನಾಗುವಂತೆ (2 ಕೊರಿಂಥ 5:18, 19) ಮತ್ತು ನಾವು ಆತನೊಂದಿಗೆ ಜೀವಿಸುವವರಾಗುವಂತೆ (4:17) ನಮ್ಮನ್ನು ಆತನಿಂದ ಅಗಲಿಸುವಂತ ಪಾಪವನ್ನು ತೆಗೆದು ಹಾಕುವದಕ್ಕಾಗಿ ಕ್ರಿಸ್ತನು ಬಾಧೆಯನ್ನನುಭವಿಸಿದನು. ಗಮನಕ್ಕೆ Bruce ತರುವದೇನೆಂದರೆ, ಇಲ್ಲಿರುವ "ζήσωμεν [*zēsōmen, "ನಾವು ಜೀವಿಸಬೇಕೆಂದು"*] ಎಂಬ ಅನಿಶ್ಚಿತ ಭೂತಕಾಲವು ಸೂಚಿಸುವದೇನೆಂದರೆ ಕ್ರಿಸ್ತನ ಜನರು ಪಡೆದುಕೊಳ್ಳುವ ಜೀವನವು . . . ಆತನ parousiaದಲ್ಲಿ ಪ್ರವೇಶಿಸಲಿರುವ ಪುನರುತ್ಥಾನದ ಜೀವನ ಆಗಿರುತ್ತದೆ."[15] ಈ ಪ್ರಯೋಜನಗಳು ಕರ್ತನ ದಿನವು ಬರುವಾಗ, **ನಾವು ಎಚ್ಚರವಾಗಿದ್ದರೂ ಸರಿಯೇ ನಿದ್ರೆಯಲ್ಲಿದ್ದರೂ ಸರಿಯೇ,** "ಕರ್ತನ ದಿನದಲ್ಲಿ" ನಮಗೆ ಸಿಕ್ಕುವವು. "ಎಚ್ಚರ" ಎಂದರೆ ಶಾರೀರಿಕವಾಗಿ ಬದುಕಿರುವದು, ಮತ್ತು "ನಿದ್ರೆಯಲ್ಲಿ" ಅಂದರೆ ಶಾರೀರಿಕ ಸತ್ತವರಾಗಿರುವದು ಎಂದರ್ಥವಾಗಿದೆ. ಪೌಲನಿಗೆ ತಾನು ಕ್ರಿಸ್ತನ ಬರೋಣದ ವೇಳೆಯಲ್ಲಿ ಇನ್ನೂ ಬದುಕಿರುವನೋ ಎಂಬುದು ಗೊತ್ತಿರಲಿಲ್ಲ, ಮತ್ತು ಅದರ ಬಗ್ಗೆ ಆತನು ಚಿಂತಿಸಲೂ ಇಲ್ಲ. ಯಾವ ವಿಧದಲ್ಲಿದ್ದರೂ ಸರಿಯೇ, ತಾನು ಮತ್ತು ಇತರ ಕ್ರೈಸ್ತರು ಒಟ್ಟಾಗಿ ಆತನ ಬರೋಣದ ಸುತ್ತ ಸಂಭವಿಸುವ ಮಹಿಮಾಕರವಾದ ಘಟನೆಗಳಲ್ಲಿ ಪಾಲುಗಾರರಾಗುವರೆಂಬದನ್ನು ಬಲ್ಲವನಾಗಿದ್ದನು. ಥೆಸಲೋನಿಕದವರಿಗೆ ಮರಣಿಸಿರುವ ತಮ್ಮ ಪ್ರಿಯ ಬಗ್ಗೆ ಚಿಂತೆ ಮಾಡುವದಕ್ಕೆ ಯಾವ ಕಾರಣವೂ ಇರಲಿಲ್ಲ.

**ವಚನ 11.** ಇವುಗಳು ಕ್ರಿಸ್ತನ ಬರೋಣದ ಕುರಿತ ವಾಸ್ತವಾಂಶಗಳಾಗಿರುವದರಿಂದ, ಪೌಲನು ಹೀಗೆ ಹೇಳುತ್ತಾನೆ, **ಆದದರಿಂದ ನೀವು ಈಗ ಮಾಡುತ್ತಿರುವ ಪ್ರಕಾರವೇ ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ** ["ಉತ್ಸಾಹಗೊಳಿಸಿರಿ"; NEB] **ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸಿಕೊಳ್ಳುತ್ತಾ ಇರ್ರಿ**. ಅವರು ಈಗಾಗಲೆ ಅದನ್ನು ಮಾಡುತ್ತಿದ್ದರು, ಆದರೆ ಅವರು ಈ ಚಟುವಟಿಕೆಯನ್ನು ಇನ್ನೂ ಹೆಚ್ಚಾಗಿ ಮಾಡಬೇಕೆಂಬುದು ಪೌಲನ ಬಯಕೆಯಾಗಿತ್ತು (ನೋಡಿರಿ 4:1). "ಭಕ್ತಿ ವೃದ್ಧಿಪಡಿಸುತ್ತಾ" ಎಂಬುದರ ಅನುವಾದಿತ ಗ್ರೀಕ್ ಪದ οἰκοδομέω (*oikodomeō*) ಎಂಬುದು ಮತ್ತು ಅದು "ಕಟ್ಟಡಗಳನ್ನು ಕಟ್ಟುವದು ಎಂಬಂತಹ ಕಾರ್ಯಗಳಿಗೆ ಅನ್ವಯಿಸುತ್ತದೆ, ಆದರೆ ಪೌಲನು ಅದನ್ನು ರೂಢಿಯಂತೆ ಸಾಂಕೇತಿಕವಾಗಿ, ಕ್ರೈಸ್ತೀಯ ನಂಬಿಕೆಯನ್ನು ಕಟ್ಟುವದಕ್ಕೆ ಬಳಸುತ್ತಾನೆ."[16]

ಪೌಲನು ಈ ಪತ್ರಿಕೆಯಲ್ಲಿ ಸಹೋದರರಿಗೆ ಬುದ್ಧಿವಾದ ಹೇಳಿದ್ದು ಇದೇ ಮೊದಲ ಸಾರಿ ಆಗಿರುವದಿಲ್ಲ, ಮತ್ತು ಆ ಮೂಲಕ ಆತನು, "ಒಬ್ಬರನ್ನೊಬ್ಬರು ಸಂತೈಸುವಂತೆ" ನಮಗೆ ಪರೋಕ್ಷವಾಗಿ ಬುದ್ಧಿವಾದ ಹೇಳುತ್ತಾನೆ (ನೋಡಿರಿ 4:18). ಇದು ನಾವು ಪರಸ್ಪರರ ಕಡೆಗೆ ಹೊಂದಿರುವ ನಮ್ಮ ಕ್ರೈಸ್ತೀಯ ಜವಾಬ್ದಾರಿಗಳನ್ನು ಕುರಿತು ಒತ್ತಿ ಹೇಳುತ್ತದೆ. ಒಬ್ಬ ಸಹೋದರನು ಕುಂದಿ ಹೋಗಿರುವಾಗ, ಅದು ನಮ್ಮ ಸಮಸ್ಯೆ ಸಹ ಆಗಿರುವದು, ಮತ್ತು ನಮಗೆ ಆತ್ಮೀಕ ಅಗತ್ಯತೆಯು ಇರುವಾಗ, ಅದು ಆತನ ಸಮಸ್ಯೆಯು ಸಹ ಆಗುವದು. ದೇವರ ಪ್ರೇರಿತ ವಾಕ್ಯವನ್ನ ಗಂಭೀರವಾಗಿ ತೆಗೆದುಕೊಳ್ಳುವ ಪ್ರತಿಯೊಬ್ಬ ಕ್ರೈಸ್ತನು ತನ್ನ ಸಹೋದರನ ಕಡೆಗೆ ತನಗಿರುವ ಜವಾಬ್ದಾರಿಯನ್ನು ಸಹ ಗಂಭೀರವಾಗಿ ತೆಗೆದುಕೊಳ್ಳುವನು.

## ಕಾರ್ಯರೂಪದ ಬುದ್ಧಿವಾದಗಳು (5:12-22)

**12ಸಹೋದರರೇ, ಯಾರು ನಿಮ್ಮಲ್ಲಿ ಪ್ರಯಾಸ ಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ**
**ಮೇಲೆ ಮುಖ್ಯಸ್ಥರಾಗಿದ್ದು 13ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸದ**
**ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನಮಾಡಬೇಕೆಂದು ನಿಮ್ಮನ್ನು**
**ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ.**

**14ಸಹೋದರರೇ, ಅಕ್ರಮವಾಗಿ ನಡೆಯುವವರಿಗೆ ಬುದ್ಧಿಹೇಳಿರಿ, ಮನಗುಂದಿದವರನ್ನು**
**ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ, ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ**
**ಎಂದು ನಿಮ್ಮನ್ನು ಪ್ರಬೋಧಿಸುತ್ತೇವೆ. 15ಯಾರೂ ಅಪಕಾರಕ್ಕೆ ಅಪಕಾರಮಾಡದಂತೆ**
**ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು**
**ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ.**

**16ಯಾವಾಗಲೂ ಸಂತೋಷಿಸಿರಿ; 17ಎಡೆಬಿಡದೆ ಪ್ರಾರ್ಥನೆಮಾಡಿರಿ;**
**18ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ**
**ತೋರಿ ಬಂದ ದೇವರ ಚಿತ್ತ. 19ಪವಿತ್ರಾತ್ಮನನ್ನು ನಂದಿಸಬೇಡಿರಿ; 20ಪ್ರವಾದನೆಗಳನ್ನು**
**ಹಿನೈಸಬೇಡಿರಿ; ಆದರೆ 21ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ;**
**22ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ.**

**ವಚನಗಳು 12, 13a.** ಈ ವಚನಗಳು ಕಾರ್ಯರೂಪದ ಹಲವಾರು ಬುದ್ಧಿವಾದಗಳ ಸರಣಿಯ ಆರಂಭವಾಗಿದ್ದು 22ನೇ ವಚನದ ತನಕ ವಿಸ್ತರಿಸುವದಾಗಿದೆ. ಪೌಲನು ಅವರಿಗೆ ಆಜ್ಞಾಪಿಸಿರಬಹುದಿತ್ತು, ಆದರೆ ಆತನು **ಬೇಡಿಕೊಳ್ಳುತ್ತೇವೆ** ಎಂದು ಹೇಳುವದನ್ನು ಆಯ್ಕೆ ಮಾಡಿಕೊಂಡನು, ಯಾಕೆಂದರೆ ಆತನು **ಸಹೋದರರ** ಜೊತೆಯಲ್ಲಿ ಮಾತಾಡುತ್ತಿದ್ದಾನೆ (5:4ರ ಮೇಲಿನ ಚರ್ಚೆಯನ್ನು ನೋಡಿರಿ).

ಆತನು ಬೇಡಿಕೊಂಡ ಮೊದಲ ಕಾರ್ಯವೆಂದರೆ ಅವರು ತಮ್ಮ ನಾಯಕರನ್ನು **ಸನ್ಮಾನಿಸಬೇಕು** ಎಂಬದೆ. "ಸನ್ಮಾನಿಸಬೇಕು" ಎಂಬುದರ ಅನುವಾದಿತ ಗ್ರೀಕ್ ಪದವು οἶδα (*oida*) ಎಂದಾಗಿದೆ. *Oida* ಎಂಬುದರ ಅಕ್ಷರಶಃ ಅರ್ಥವು "ತಿಳಿಯಿರಿ" (KJV), ಅಲ್ಲದೆ ಅದು ತನ್ನಲ್ಲಿ, ಈ ಸನ್ನಿವೇಶದಲ್ಲಿ, "ಸನ್ಮಾನ" ಮತ್ತು "ಗೌರವ" (NIV) ಗಳನ್ನು ಕೊಡುವದಕ್ಕೋಸ್ಕರ "ತಿಳುಕೊಳ್ಳುವದು" ಎಂಬ ಯೋಚನೆಯನ್ನು ಸಹ ಒಳಗೊಂಡಿದೆ.

ಅವರು "ತಿಳಿದುಕೊಳ್ಳಬೇಕು" ಮತ್ತು "ಗೌರವಿಸಬೇಕು" ಎಂದು ಪೌಲನು ಇಚ್ಛಿಸಿದ ವ್ಯಕ್ತಿಗಳು ಈ ಕೆಳಗಿನ *ಎಲ್ಲಾ* ಕಾರ್ಯಗಳನ್ನು ಮಾಡಿದವರು ಎಂದು ಬಣ್ಣಿಸಲ್ಪಟ್ಟಿದ್ದಾರೆ, ಯಾಕೆಂದರೆ ಅಲ್ಲಿ ಕೇವಲ ಒಂದು ಗ್ರೀಕ್ ಗುಣವಾಚಿ ಮಾತ್ರವೇ ಇರುತ್ತದೆ.

ಆ ವ್ಯಕ್ತಿಗಳು [ಅವರಲ್ಲಿ] **ಪ್ರಯಾಸ ಪಟ್ಟ** ವ್ಯಕ್ತಿಗಳಾಗಿದ್ದರು. "ಪ್ರಯಾಸ" ಎಂಬುದಕ್ಕೆ ಬಳಸಲ್ಪಟ್ಟಿರುವ ಮೂಲ ಪದವು (κοπιάω, *kopiaō*) ಕಠಿಣವಾದ ಪರಿಶ್ರಮವನ್ನು ಸೂಚಿಸುತ್ತದೆ. ಎಲ್ಲಕ್ಕಿಂತ ಮೇಲಾಗಿ, ಈ ವ್ಯಕ್ತಿಗಳು ಕೇವಲ ನಿರ್ಣಯಗಳನ್ನು ಮಾಡುವವರಾಗಿರಲಿಲ್ಲ. ಅವರು ಹೋಗುತ್ತಿದ್ದರು, ಸಂಚರಿಸುತ್ತಿದ್ದರು, ಮತ್ತು ಕೆಲಸ ಮಾಡುತ್ತಿದ್ದರು, ಅವರ ಸಮಯ ಮತ್ತು ತಮ್ಮನ್ನು ತ್ಯಾಗಮಾಡುವವರಾಗಿದ್ದರು.

ಅವರು **ಕರ್ತನ ಕಾರ್ಯಗಳಲ್ಲಿ** [ಅವರ] **ಮೇಲೆ ಮುಖ್ಯಸ್ಥರಾಗಿದ್ದರು.** NEB ಯಲ್ಲಿ "ನಿಮ್ಮ ನಾಯಕರು" ಎಂದಿದೆ. "ಮೇಲೆ ಮುಖ್ಯಸ್ಥರಾಗಿರುವ" ಎಂಬುದು ಗ್ರೀಕ್ (προΐστημι, *proistēmi*) ದಿಂದ ಬರುತ್ತದೆ, ಮತ್ತು ಅದರರ್ಥವು "ಆಳು, ನಿರ್ದೇಶಿಸು, ಶಿರಸ್ಸಾಗಿರು."[17] ಈ ನಾಯಕರು ಸಭೆಗಳಿಗೆ ಮಾರ್ಗದರ್ಶನವನ್ನು ಕೊಡುವ ಜವಾಬ್ದಾರಿ ಹೊಂದಿದ್ದರೆಂಬುದನ್ನು ಈ ಪದಗುಚ್ಛವು ಸ್ಪಷ್ಟಗೊಳಿಸುತ್ತದೆ. "ಕರ್ತನ ಕಾರ್ಯಗಳಲ್ಲಿ" ಎಂಬುದು ಈ ನಾಯಕರು ಜವಾಬ್ದಾರಿಯನ್ನು ಕ್ರಿಸ್ತನ ಆತ್ಮೀಕ ದೇಹವಾದ, ಸಭೆಯಲ್ಲಿ ಹೊಂದಿದ್ದರೆಂಬುದನ್ನು ತೋರಿಸುತ್ತದೆ (ಎಫೆಸ 1:22, 23).

ಆ ವ್ಯಕ್ತಿಗಳು [ಅವರಿಗೆ] **ಬುದ್ಧಿ ಹೇಳುವವರಾಗಿದ್ದರು.** "ಬುದ್ಧಿ ಹೇಳು" ಎಂಬುದಕ್ಕಿರುವ ಗ್ರೀಕ್ ಪದವು νουθετέω (*noutheteō*), ಮತ್ತು ಅದು ತನ್ನಲ್ಲಿ ಹಿರಿಯ, ನಾಯಕನಾಗಿ ಒಬ್ಬ ಯುವ ಸಹೋದರನಿಗೆ ಸಹೋದರತ್ವದಿಂದ ಬುದ್ಧಿ ಹೇಳುವದು ಎಂಬ ಯೋಚನೆಗಳನ್ನೊಳಗೊಂಡಿರುತ್ತದೆ. 1 ಕೊರಿಂಥ 4:14ನೇ ವಚನವು ಸಹ ಅದೇ ಪದವನ್ನು ("ಎಚ್ಚರಿಸು"; NIV) ಬಳಸುತ್ತದೆ ಮತ್ತು ಆ ಪದಕ್ಕೆ ಸ್ವಾದವನ್ನು ಒದಗಿಸುತ್ತದೆ.

ಈ ಮೂರು ಕರ್ತವ್ಯಗಳನ್ನು ನಡಿಸುವದಕ್ಕೆ ಸಭೆಯಲ್ಲಿನ ಯಾವ ವ್ಯಕ್ತಿಗಳ ಗುಂಪು ಜವಾಬ್ದಾರಿಯನ್ನು ಹೊಂದಿರುತ್ತದೆ? ಬೇರೆಯವರ ಮೇಲೆ "ಮುಖ್ಯಸ್ಥರಾಗಿರುವದು" ಕೇವಲ ಹಿರಿಯರಿಗೆ ಮಾತ್ರವೇ ಸರಿ ಹೊಂದುವಂತೆ ತೋರುತ್ತದೆ (ಅಪೊಸ್ತಲರ ಕೃತ್ಯಗಳು 20:28; 1 ತಿಮೊಥೆ 5:17), ಮತ್ತು "ಪ್ರಯಾಸ"ಹಾಗೂ "ಬುದ್ಧಿ ಹೇಳುವದು" ಸಹ ಹಿರಿಯರಿಗೆ

ಮಾತ್ರವೇ ಸರಿ ಹೊಂದುತ್ತವೆ. Morris ಇದಕ್ಕೆ ಒಮ್ಮತವನ್ನು ವ್ಯಕ್ತಪಡಿಸುತ್ತಾನೆ:

> ಇಲ್ಲಿ ಗ್ರೀಕ್ ವಾಕ್ಯರಚನೆಯು ಒಂದೇ ಗುಣವಾಚಿಯ ಬಳಿಕ ಮೂರು ಕೃದಂತಗಳನ್ನು ಹೊಂದಿದೆ. ಇದರಲ್ಲಿರುವ ಅಂಶವೇನೆಂದರೆ ಎಲ್ಲಾ ಮೂರು ಕಾರ್ಯಗಳನ್ನು ನಡಿಸುವವರು ಒಂದು ಗುಂಪು ಜನರಾಗಿರುತ್ತಾರೆ, ಮತ್ತು ಅವರು ಮೂರು ಬೇರೆ ಬೇರೆ ಗುಂಪುಗಳಲ್ಲ. ಬೇರೆ ಯಾವದಕ್ಕಿಂತಲೂ ಈ ವಿಷಯವೇ ನಮಗೆ ಇಲ್ಲಿ ಸಭೆಯ ಹಿರಿಯರನ್ನುದ್ದೇಶಿಸಿ ಹೇಳಲಾಗಿದೆಯೆಂದು ಯೋಚಿಸುವಂತೆ ಮಾಡುತ್ತದೆ. ಅಂಥ ಮೂರು ಕ್ರಿಯೆಗಳನ್ನು ನೆರವೇರಿಸುವವರು ಬೇರೆ ಯಾರೆಂದು ಯೋಚಿಸುವದಕ್ಕೆ ಸಾಧ್ಯ?[18]

Raymond C. Kelcy ನಂಬುವದೇನೆಂದರೆ ಈ ವ್ಯಕ್ತಿಗಳು "ಪ್ರವಾದಿಗಳಾಗಿದ್ದರೆಂಬುದನ್ನು ಬಲವಾದ ಸಾಧ್ಯತೆಯಿರುತ್ತದೆ,"[19] ಅಂದರೆ, 20ನೇ ವಚನದಲ್ಲಿನ "ಪ್ರವಾದಿಸುವವರು." ಈ ವ್ಯಕ್ತಿಗಳು ಹಿರಿಯರಾಗಿದ್ದರು ಎಂಬದಾಗಿ J. W. McGarvey ಮತ್ತು Philip Y. Pendleton ನಂಬುತ್ತಾರೆ, ಅದೇ ರೀತಿಯಲ್ಲಿ Robertson ಸಹ ನಂಬುತ್ತಾನೆ.[20] ಈ ಕಡೆಯ ಅಭಿಪ್ರಾಯವು ಹೆಚ್ಚುಕಡಿಮೆ ಖಂಡಿತವಾಗಿಯೂ ಸರಿಯಾಗಿರುತ್ತದೆ.

ಹೇಗೂ, ಸಭೆಯು ಕೇವಲ ಐದು ಅಥವಾ ಆರು ತಿಂಗಳಷ್ಟು ಹಳೆಯದಾಗಿದ್ದಿರಬಹುದಾದ್ದರಿಂದ, ಅವರು ಹೇಗೆ ಹಿರಿಯರನ್ನು ಹೊಂದಿರುವದಕ್ಕೆ ಸಾಧ್ಯ? ನಮಗೆ ನಿಜಕ್ಕೂ ಇಲ್ಲಿ ಯಾವ ಮಾಹಿತಿಯೂ ಇರುವದಿಲ್ಲ. ಬಹುಶಃ ಪರಿವರ್ತನೆಗೊಂಡವರಲ್ಲಿ ಕೆಲವರು ಪರಿವರ್ತನೆಗೆ ಮುಂಚೆ ಪರಿಪಕ್ವವುಳ್ಳ ಯೆಹೂದ್ಯರಾಗಿದ್ದಿರಬಹುದು, ಮತ್ತು ಆ ಕಾರಣದಿಂದ ಅವರಿಗೆ ಕೇವಲ ಯೇಸುವೇ ಮೆಸ್ಸೀಯನೆಂದು ಮತ್ತು ಪರಿಪಕ್ವವುಳ್ಳ ಕ್ರೈಸ್ತರಾಗುವದಕ್ಕಾಗಿ ಸುವಾರ್ತೆಗೆ ವಿಧೇಯರಾಗಬೇಕೆಂದು ಮನವರಿಕೆಯನ್ನಷ್ಟೆ ಮಾಡಿಕೊಡಬೇಕಾಗಿದ್ದಿರಬಹುದು.

ಇಲ್ಲಿ ಬಣ್ಣಿಸಲ್ಪಟ್ಟಿರುವಂತೆ ಹಿರಿಯರ ಕೆಲಸದ ಬಗ್ಗೆ ಮತ್ತೊಮ್ಮೆ ನೋಡಿರಿ. ಮೊದಲು ಅದು ಕಠಿಣ ಪ್ರಯಾಸ ಎಂದು ಬಣ್ಣಿಸಿರುವಂತೆ ತೋರುತ್ತದೆ. ಅವರು ಬಳಲಿ ಹೋಗುವಷ್ಟರ ಮಟ್ಟಿಗೆ ಪ್ರಯಾಸ ಪಡುವದಕ್ಕೆ ಮನಸ್ಸುಳ್ಳವರಾಗಿದ್ದರು. ಮುಂದೆ ಬರುವಂತ ಪದಗುಚ್ಛಗಳು ಬಹುಶಃ ಆ ಕೆಲಸದ ವಿವರಣೆಗಳಾಗಿರಬಹುದಾಗಿದೆ. ಅದು ಭಾಗಶಃ ಮಂದೆಯ ಮೇಲೆ "ಮುಖ್ಯಸ್ಥರು" ಆಗಿರುವದು, ಅಂದರೆ ಕಾರ್ಯರೂಪದ ವ್ಯವಹಾರಗಳಲ್ಲಿ ನಾಯಕತ್ವವನ್ನು ಒದಗಿಸುವದು, ಮತ್ತು ಕುರಿಯು ನಡೆಯತಕ್ಕ ರೀತಿಯಲ್ಲಿ ನಡೆಯದಿದ್ದಾಗ "ಬುದ್ಧಿ ಹೇಳುವದಕ್ಕೆ" ಅಥವಾ ಪ್ರೀತಿಯಿಂದ ತಿದ್ದುವದಕ್ಕಾಗಿ ಮಂದೆಯನ್ನು ನೋಡಿಕೊಳ್ಳುವದು ಆಗಿತ್ತು. ಪೌಲನು ಈ ಮುಂಚೆಯೇ ಅವರಿಗೆ ಪ್ರೀತಿಯು ಒಬ್ಬನನ್ನು ದೇವರ ರಾಜ್ಯದಲ್ಲಿ "ಪ್ರಯಾಸ" ಪಡುವಂತೆ ಮಾಡುವದೆಂದು ಅವರಿಗೆ ಹೇಳಿದ್ದನು (1:3).

ನಾಯಕರನ್ನು **ಬಹಳವಾಗಿ ಸನ್ಮಾನಮಾಡತಕ್ಕದ್ದು** (ἡγέομαι, *hēgeomai*), Morris ಪ್ರಕಾರವಾಗಿ ಈ ಪದದ ಅರ್ಥವು, "ಅವರು ಲೆಕ್ಕಕ್ಕಿಲ್ಲದವರೆಂದು ತಳ್ಳಿಹಾಕಲ್ಪಡುವವರಲ್ಲ"[21] ಎಂದಾಗಿರುತ್ತದೆ. ಈ "ಸನ್ಮಾನವು" ಎಲ್ಲಿರುತ್ತದೋ, ಅಲ್ಲಿ ಅವರ

ಮನವಿಗಳು ತಿರಸ್ಕರಿಸಲ್ಪಡುವದಿಲ್ಲ.

Williams ಹೀಗೆ ವ್ಯಾಖ್ಯೆ ನೀಡುತ್ತಾನೆ:

> [ἡγέομαι] *hēgeomai* ["ಸನ್ಮಾನಿಸು" ಎಂಬುದಕ್ಕಿರುವ ಪದ] ಎಂಬ ಕ್ರಿಯಾಪದವು ಸಾಮಾನ್ಯವಾಗಿ ಆ ಪದದ ತಟಸ್ಥ ಅರ್ಥದಲ್ಲಿ "ಪರಿಗಣಿಸು" ಅಥವಾ "ಎಣಿಸು" ಎಂದು ಅರ್ಥವನ್ನು ಕೊಡುತ್ತದೆ (cf. 2 ಥೆಸಲೋನಿಕ 2:15), ಆದರೆ ಇಲ್ಲಿ ಅದಕ್ಕೆ [ὑπερεκπερισσῶς] *hyperekperissōs* ಎಂಬ ಕ್ರಿಯಾವಿಶೇಷಣ (3:10ರ ಮೇಲಿನ ಚರ್ಚೆಯನ್ನು ನೋಡಿರಿ), ಮತ್ತು ಕ್ರಿಯಾವಿಶೇಷಣಾತ್ಮಕ ಪದಗುಚ್ಛ "ಪ್ರೀತಿಯಲ್ಲಿ" ಎಂಬ ಎರಡೂ ನಿರ್ದೇಶನದಿಂದಾಗಿ ಹೆಚ್ಚು ಸಕಾರಾತ್ಮಕ ವಿಷಯವನ್ನೊಳಗೊಂಡಿರುತ್ತದೆ. ಸಭೆಯ ಸದಸ್ಯರಿಗೆ ತಮ್ಮ ನಾಯಕರನ್ನು ಹೀಗೆ ಪರಿಗಣಿಸಬೇಕೆಂದು ಹೇಳಲಾಗಿರುವದಕ್ಕೆ ಕಾರಣವು, ಅವರಿಗಿರಬಹುದಾದ ಯಾವದೇ ವೈಯಕ್ತಿಕ ಗುಣಗಳಿಂದಾಗಿಯಲ್ಲ, ಅಂದರೆ ಅವರ ಕೆಲಸದ ನಿಮಿತ್ತದಿಂದಲೇ, ಅವರಲ್ಲಿ ಪ್ರೀತಿಗೆ ಪಾತ್ರರಾದವರೆಂಬ ಭಾವನೆಯನ್ನುಂಟು ಮಾಡುವಾಗ, ಸಭೆಯಲ್ಲಾಗಲಿ ಅಥವಾ ಸಭೆಯನ್ನು ವಿಸ್ತರಿಸುವದರಲ್ಲಾಗಲಿ ಅವರು ಉತ್ತಮವಾಗಿ ಕೆಲಸ ಮಾಡುವರು.[22]

ಸದಸ್ಯರು ಅವರ ಅಧಿಕಾರಕ್ಕೆ ಭಯ ಪಟ್ಟ ಕಾರಣದಿಂದಾಗಿ ಅವರಿಗೆ ಈ "ಸನ್ಮಾನವು" ಕೊಡಲ್ಪಟ್ಟಿರಲಿಲ್ಲ ಎಂದು ಪೌಲನು ಹೇಳುತ್ತಾನೆ; ಬದಲಾಗಿ, ಅದು ಅವರಿಗೆ **ಪ್ರೀತಿಯಿಂದ** ತೋರಿಸಲ್ಪಟ್ಟದ್ದಾಗಿತ್ತು. **ಅವರ ಕೆಲಸದ ನಿಮಿತ್ತ** ಅವರಿಗೆ ಈ ಪ್ರೀತಿಯನ್ನು ತೋರಿಸತಕ್ಕದ್ದಾಗಿತ್ತು. ಒಬ್ಬ ಅರ್ಹನಾದ ಹಿರಿಯನು ರಾಜ್ಯದ ಅಭಿವೃದ್ಧಿಯಾಗುವಂತೆ ನೋಡುವದಕ್ಕೆ ಮತ್ತು ಸದಸ್ಯರು ಪಾಪದಿಂದ ದೂರವಿರುವಂತೆ ಹಾಗೂ ಆತ್ಮೀಕವಾಗಿ ಬೆಳೆಯುವಂತೆ ನೋಡಿಕೊಳ್ಳಲು ತನ್ನನ್ನೇ ಸಂಪೂರ್ಣವಾಗಿ ಒಪ್ಪಿಸಿಕೊಂಡವನಾಗಿ ಕೆಲಸ ಮಾಡುವವನಾಗಿರುತ್ತಾನೆಂಬುದು ಪೂರ್ವಕಲ್ಪನೆಯಾಗಿರುತ್ತದೆ. ಇದರಿಂದ ಖಂಡಿತವಾಗಿಯೂ ಸ್ಪಷ್ಟವಾಗತಕ್ಕದ್ದೇನೆಂದರೆ ಹಿರಿಯರು ಮಾತ್ರವೇ ಅಥವಾ ಪ್ರಾಥಮಿಕವಾಗಿ ತೀರ್ಮಾನಗಳನ್ನು ಮಾಡುವವರು ಆಗಿರುವದಿಲ್ಲ ಎಂಬದೆ. ಬದಲಾಗಿ, ಅವರು ಪ್ರೀತಿಯಿಂದ ಕೂಡಿದ ಸಭಾಪಾಲಕರಾಗಿದ್ದು ಸಭೆಯ ಒಳತಿಗಾಗಿ ತಮ್ಮದೆಲ್ಲವನ್ನೂ ಕೊಡುವವರು ಮತ್ತು ಒಂದು ತಾವು ಈ ಕೆಲಸವನ್ನು ಎಷ್ಟು ಉತ್ತಮವಾಗಿ ಮಾಡಿದ್ದಾರೆಂಬುದಕ್ಕೆ ಲೆಕ್ಕವನ್ನು ಕೊಡುವವರು ಆಗಿದ್ದಾರೆ (ಇಬ್ರಿಯ 13:17). ಒಬ್ಬನು ತನ್ನ ಜೊತೆಯ ಕ್ರೈಸ್ತರ ಮೇಲೆ ಆ ವಿಧವಾದ ಆಸಕ್ತಿಯನ್ನು ಮತ್ತು ಪ್ರೀತಿಯನ್ನು ಈಗಾಗಲೇ ತೋರಿರುವ ಹೊರತು ಯಾವನೊಬ್ಬನನ್ನೂ ಈ ಹುದ್ದೆಗೆ ಆಯ್ಕೆ ಮಾಡಬಾರದು ಎಂಬುದನ್ನು ಇದು ಸ್ಪಷ್ಟಗೊಳಿಸುತ್ತದೆ (ತೀತನಿಗೆ 1:8 ರೊಂದಿಗೆ ಹೋಲಿಸಿರಿ).

**ವಚನ 13b. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ.** ಈ ಬುದ್ಧಿವಾದವು ಅವರ ನಾಯಕರನ್ನು ಬಹುವಾಗಿ ಸನ್ಮಾನಿಸಬೇಕು ಎಂದು ಕೊಟ್ಟ ಆಜ್ಞೆಯೊಂದಿಗೆ ಸಂಬಂಧವನ್ನು ಹೊಂದಿರುವ ಸಾಧ್ಯತೆಯಿರುತ್ತದೆ. ಅವರು ಇದನ್ನು ಮಾಡುವದಕ್ಕೆ ವಿಫಲರಾಗಿದ್ದರೆಂಬದು ಕಂಡು ಬರುತ್ತದೆ ಮತ್ತು ಅದರಿಂದಾಗಿ, ಟೀಕಾತ್ಮಕ ಮತ್ತು ಅಗೌರವವಾದ ಮನೋಭಾವದಿಂದ ಯಾವಾಗಲೂ ಉಂಟಾಗುವ ಹಾಗೆಯೇ, ಅವರಲ್ಲಿ ಸ್ವಲ್ಪ ಮಟ್ಟಿಗೆ ಕಲಹ ಉಂಟಾಗಿತ್ತು. ವಾಸ್ತವಾಂಶದಲ್ಲಿ, ಪರಿಣಾಮಕಾರಿ ನಾಯಕತ್ವವು ಮನಸ್ಸುಳ್ಳ ಮತ್ತು

ಸಮರ್ಥರಾದ ನಾಯಕರ ಮೇಲೆ ಆಧಾರವಾಗಿರುವದು ಮಾತ್ರವಲ್ಲದೆ, ಅದಕ್ಕೆ ಮನಸ್ಸುಳ್ಳ ಹಿಂಬಾಲಕರ ಅಗತ್ಯವೂ ಇರುತ್ತದೆ. ಹಿರಿಯರು ಸೇರಿದಂತೆ ಪ್ರತಿಯೊಬ್ಬ ಸಹೋದರರನ ಸಂಗಡ ಸಮಾಧಾನದಿಂದ ಬಾಳುವದಕ್ಕೆ ನಿಜವಾಗಿಯೂ ಪ್ರಯತ್ನಿಸುವಂಥ ಸದಸ್ಯರ ಅಗತ್ಯವೂ ಅದಕ್ಕೆ ಇರುತ್ತದೆ (ಮಾರ್ಕ 9:50; ರೋಮಾ 12:18; 2 ಕೊರಿಂಥ 13:11). ನಾಯಕರೊಂದಿಗೆ ಅಥವಾ ಇತರರೊಂದಿಗೆ ಭಿನ್ನಾಭಿಪ್ರಾಯವಿದ್ದಾಗ, ಸಮಾಧಾನದಿಂದ ಬಾಳುವದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿರುವ ವ್ಯಕ್ತಿಯು ತನ್ನ ನಾಲಿಗೆಯನ್ನು ಹಿಡಿದಿಟ್ಟುಕೊಳ್ಳುವನು ಮತ್ತು ತನಗೆ ಭಿನ್ನಾಭಿಪ್ರಾಯವಿರುವ ಸಹೋದರ ಅಥವಾ ಸಹೋದರಿಯ ಬಳಿಗೆ ಹೋಗುವನು. ಸಾಮಾನ್ಯವಾಗಿ, ಒಂದು ಸಂಧಾನಕ್ಕೆ ಬರಲಾಗುವದು. ಅಷ್ಟುಮಾತ್ರವಲ್ಲದೆ, ತನ್ನಿಷ್ಟದಂತೆ ನಡೆಯದ ಎಲ್ಲದಕ್ಕಾಗಿಯೂ ಸಾರ್ವಜನಿಕವಾಗಿ ಟೀಕಿಸುವದರಿಂದ ದೂರವಿರುವನು. ಪ್ರತಿಯೊಬ್ಬ ಕ್ರೈಸ್ತನು ಸಹ ತಾನು ಸದಸ್ಯನಾಗಿರುವ ಸಭೆಯಲ್ಲಿ ತನ್ನಿಂದ ಸಾಧ್ಯವಾದಷ್ಟರ ಮಟ್ಟಿಗೆ ಸಮಾಧಾನವನ್ನು ಬೆಂಬಲಿಸುವದಕ್ಕೆ ಹೊಣೆಗಾರನಾಗಿರುತ್ತಾನೆ.

**ವಚನ 14.** ಪೌಲನು ಇನ್ನೊಂದು ಬುದ್ಧಿವಾಗಳ ಗುಂಪಿಗೆ ಸಾಗಿದಂತೆ ತೋರುತ್ತದೆ. **ಸಹೋದರರೇ, ಅಕ್ರಮವಾಗಿ ನಡೆಯುವವರಿಗೆ ಬುದ್ಧಿಹೇಳಿರಿ . . . ಎಂದು ನಿಮ್ಮನ್ನು ಪ್ರಬೋಧಿಸುತ್ತೇವೆ** ["ಪ್ರಬೋಧೀಸುತ್ತೇವೆ"; RSV] ಅಥವಾ ಸಭೆಯಲ್ಲಿ "ಸೋಮಾರಿಗಳಾಗಿರುವವನ್ನು ಎಚ್ಚರಿಸಿರಿ" (NIV). "ಬುದ್ಧಿಹೇಳಿರಿ" ಎಂಬುದು νουθετέω (*noutheteō*) ಎಂಬ ಪದದಿಂದ ಬರುತ್ತದೆ, ಮತ್ತು ಅದರರ್ಥವು "ಬುದ್ಧಿಹೇಳು, ಎಚ್ಚರಿಸು, ಬೋಧಿಸು" (ವ. 12ನ್ನು ಸಹ ನೋಡಿರಿ).[23] "ಅಕ್ರಮಕಾರರು" (ಆಶಿಸ್ತುವುಳ್ಳವರು) ಎಂಬುದಕ್ಕಿರುವ ಗ್ರೀಕ್ ಪದವು ἄτακτος (*ataktos*), ಇದು ಪೌಲನು ಈ ಮುಂಚೆ ಬಳಸಿದ್ದ ಸೈನಿಕನ ಸಾದೃಶ್ಯವನ್ನು ನೆನಪಿಸುತ್ತದೆ (5:8) ಮತ್ತು ಪಥಸಂಚಲನೆ ಮಾಡುವಾ ಮಿಕ್ಕ ಸೈನಿಕರೊಂದಿಗೆ ಸಮನಾಗಿ ಚಲಿಸದಿರುವ ಒಬ್ಬ ಸೈನಿಕನನ್ನು ಚಿತ್ರಿಸುತ್ತದೆ. ಆತನು ಹಿಂದೆ ಆಗುತ್ತಾನೆ ಮತ್ತು ಹೆಜ್ಜೆಯನ್ನಿಡುವದಕ್ಕೆ ಪ್ರಯತ್ನವನ್ನು ಮಾಡುವದಿಲ್ಲ. George Milligan ತೋರಿಸಿ ಕೊಡುವ ಪ್ರಕಾರ, *ataktos* ಪದು ಬಹಳಷ್ಟು ಸಾರಿ ಪೋಲಿಯಾಗಿ ಕಾಲಹರಣ ಮಾಡುವವರನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು,[24] ಮತ್ತು ಥೆಸಲೋನಿಕದವರ ಮಧ್ಯದಲ್ಲಿ ಇಂತಹ ಕೆಲವರಿದ್ದರು (2 ಥೆಸಲೋನಿಕ 3:11).

ಆ ಪದದ ಸಾಮಾನ್ಯ ಅರ್ಥನಿರೂಪಣೆಯೆಂದರೆ "ಕ್ರಮವಿಲ್ಲದವರು," ಆದರೆ, Marshallನು ಸರಿಯಾಗಿಯೇ ಹೇಳಿರುವ ಪ್ರಕಾರ, "ಇಲ್ಲಿ ಮನಸ್ಸಿನಲ್ಲಿ ಒಂದು ವಿಧವಾದ ಅಕ್ರಮವಾಗಿರುವಿಕೆಯಾಗಿದ್ದು ಕೆಲಸ ಮಾಡುವದಕ್ಕೆ ಮತ್ತು ಉದ್ಯೋಗಿಗಳಿಗಿರುವ ವಾಡಿಕೆಯ ಜೀವನವನ್ನು ಅಳವಡಿಸಿಕೊಳ್ಳಲು ನಿರಾಕರಿಸುವದು ಸೇರಿತ್ತು."[25]

ಕೆಲವರು ಸ್ಪಷ್ಟವಾಗಿರುವಂತೆ ಕ್ರಿಸ್ತನ ಬರೋಣವು ಬಹಳ ಹತ್ತಿರವಿದ್ದು ಉದ್ಯೋಗದಂತಹ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮುಂದುವರೆಯುವದು ನಿಷ್ಪ್ರಯೋಜವಾದದ್ದೆಂದು ನಂಬಿದ್ದರು, ಆದ್ದರಿಂದ ಅವರು ಕೆಲಸ ಮಾಡುವದನ್ನು ನಿಲ್ಲಿಸಿ ಬಿಟ್ಟಿದ್ದರು ಮತ್ತು ಪರಜನರನ್ನು ಅವಲಂಭಿಸಿದ್ದರು. ಈ ಅಭ್ಯಾಸವನ್ನು ಪೌಲನು ಸ್ಪಷ್ಟವಾಗಿ ಖಂಡಿಸುತ್ತಾನೆ. ಕ್ರೈಸ್ತರು ತಮಗೆ ಸಹಾಯ ಮಾಡಿಕೊಳ್ಳುವದಕ್ಕಾಗಿ ಮತ್ತು ನಂತರ

ಬೇರೆಯವರಿಗೆ ಸಹಾಯ ಮಾಡುವದಕ್ಕಾಗುವಷ್ಟು ಸಂಪಾದಿಸುವದಕ್ಕಾಗಿ ಕೆಲಸ ಮಾಡುವಂಥ ಜನರಾಗಿದ್ದಾರೆ (ಎಫೆಸ 4:28 ಸಹ ನೋಡಿರಿ). ಸೋಮಾರಿತನದಿಂದಾಗಿ ಇನ್ನು ಅನೇಕ ಕೆಟ್ಟತನಗಳನ್ನು ಹುಟ್ಟು ಹಾಕುತ್ತದೆ, ಆದ್ದರಿಂದ ಪೌಲನು ದೇವರ ಚಿತ್ತವನ್ನ ಬಿಟ್ಟು ಅಡ್ಡದಾರಿಯನ್ನು ಹಿಡಿದಿರುವ ಮತ್ತು ಸೋಮಾರಿಗಳಾಗಿರುವವರನ್ನು "ಎಚ್ಚರಿಸಿರಿ" ಮತ್ತು "ಬುದ್ಧಿ ಹೇಳಿರಿ," ಅಥವಾ ಒಂದು ಗಂಭೀರ ರೀತಿಯಲ್ಲಿ ಅವರೊಂದಿಗೆ ಮಾತಾಡಿರಿ ಎಂದು ಬೇಡಿಕೊಳ್ಳುತ್ತಾನೆ. ಪುನಃ, ಇದು ಬೇರೆ ಪ್ರತಿಯೊಬ್ಬ ಸಹೋದರನ ಕಡೆಗೆ ಪ್ರತಿಯೊಬ್ಬೊಬ್ಬ ಸಹೋದರನಿಗೆ ಇರುವ ಜವಾಬ್ದಾರಿಯನ್ನು ತೋರಿಸುತ್ತದೆ.

ಅದೇ ಧಾಟಿಯಲ್ಲಿಯೇ, ಅವರು **ಮನಗುಂದಿದವರನ್ನು ಧೈರ್ಯಪಡಿಸ**ತಕ್ಕದ್ದು ಎಂದು ಪೌಲನು ಹೇಳಿದನು. ತರ್ಜುಮೆಗಳಲ್ಲಿರುವ ವ್ಯತ್ಯಾಸಗಳಲ್ಲಿ ಕಾಣಬಹುದಾದ ರೀತಿಯಲ್ಲಿಯೇ, ಈ ಗ್ರೀಕ್ ಮಾತನ್ನು ಅನುವಾದಿಸುವದಕ್ಕೆ ಕಷ್ಟಕರವಾಗಿರುತ್ತದೆ, ಆದರೆ NASBಯು ಅತ್ಯುತ್ತಮವಾದ ಅನುವಾದವನ್ನು ನೀಡುತ್ತದೆಂದು ತೋರುತ್ತದೆ. ಕೆಲವರು "ಅಂಜುಬುರುಕರು,"ಯಾಕೆಂದರೆ, ಕೆಲವರು ತಮ್ಮ ಸತ್ತಿರುವ ಪ್ರಿಯರು ಕ್ರಿಸ್ತನ ಎರಡನೆಯ ಬರೋಣದ ಘಟನೆಯಲ್ಲಿ ಪಾಲುಗಾರರಾಗುವದಿಲ್ಲವೇನೋ ಎಂದು ಹೆದರಿದ್ದರು ಎಂಬುದನ್ನು ನಾವು ನೋಡಿದ್ದೇವೆ (4:13-18). ಪೌಲನ ಬೋಧನೆಗಳನ್ನು ನಿರಾಶೆಗೊಂಡಿರುವವರೊಂದಿಗೆ ಚರ್ಚಿಸಿರಿ ಮತ್ತು ಅವರನ್ನು "ಸಂತೈಸುವದಕ್ಕೆ" ಪ್ರಯತ್ನಿಸಿರಿ (4:18) ಎಂದು ಪೌಲನು ಸಹೋದರರಿಗೆ ಸಲಹೆ ಕೊಡುತ್ತಾನೆ.

ಅಲ್ಲದೆ ಅವರು **ಬಲಹೀನರಿಗೆ ಆಧಾರವಾಗಿರ**ಬೇಕಿತ್ತು. "ಆಧಾರವಾಗಿರು" (ಸಹಾಯ ಮಾಡು) ಎಂಬುದು ἀντέχω (*antechō*) ಎಂಬ ಗ್ರೀಕ್ ಪದದಿಂದ ಬಂದಿರುತ್ತದೆ ಮತ್ತು ಯಾರೋ ಒಬ್ಬರಲ್ಲಿ ಅಥವಾ ಯಾವದೋ ಒಂದರಲ್ಲಿ "ಉತ್ಕಟವಾದ ಆಸಕ್ತಿ" ಹೊಂದಿರುವದನ್ನು ಸೂಚಿಸುತ್ತದೆ.[26] ಪೌಲನು ಆತ್ಮೀಕವಾಗಿ "ಬಲಹೀನ"ವಾಗಿದ್ದ ಮತ್ತು "ಸಹಾಯ"ದ ಅಗತ್ಯತೆಯಲ್ಲಿದ್ದವರ ಬಗ್ಗೆ ಕಾಳಜಿ ಹೊಂದಿದ್ದನು. ಅವರು ಬಲಗೊಂಡು ಬೆಳೆಯಬೇಕಿದ್ದರೆ, ಅವರಿಗೆ ಜೊತೆಯಲ್ಲಿಯೇ ಇದ್ದ ಮುಂದಿನ ದಾರಿಯುದ್ದಕ್ಕೂ ಅವರಿಗೆ ಪ್ರೋತ್ಸಾಹವನ್ನು ಮಾಡುವಂತಹ ಸಹೋದರರ ಅಗತ್ಯವಿತ್ತು. ಬಲವಾಗಿರುವವರು ಬಲಹೀನರ ಕಡೆಗೆ ಸ್ಪಷ್ಟವಾದ ಜವಾಬ್ದಾರಿಗಳನ್ನು ಹೊಂದಿದ್ದಾರೆ (ರೋಮಾ 15:1).

ವಿವಿಧ ವರ್ಗದ ಜನರಿಗೆ ಬುದ್ಧಿವಾದಗಳನ್ನು ಹೇಳುವದರ ಕಡೆಯಿಂದ ತಿರುಗಿಕೊಂಡು, ಪೌಲನು ಇಡೀ ಸಭೆಯಲ್ಲಿ ಅಗತ್ಯವಿದ್ದಂಥ ಒಂದು ಕಾರ್ಯವನ್ನು ಎತ್ತಿ ತೋರಿಸುತ್ತಾನೆ. ಆತನು ಹೀಗೆ ಹೇಳುತ್ತಾನೆ, **ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ**. ಅಂದರೆ, "ಎಲ್ಲಾ ಮನುಷ್ಯರ" ಕಡೆಗೆ ಸೌಮ್ಯವಾಗಿರಿ, ಸಹನೆಯಿಂದಿರಿ ಮತ್ತು ದೀರ್ಘಶಾಂತಿಯುಳ್ಳವರಾಗಿರಿ. ನಮ್ಮ ಸ್ವಂತ ಅಹಂಗಳನ್ನು ತೃಪ್ತಿ ಪಡಿಸಿಕೊಳ್ಳುವದಕ್ಕಿಂತಲೂ ಪಕ್ವವಿಲ್ಲದವರಿಗೆ ಸಹಾಯ ಅಥವಾ ಸೇವೆಯನ್ನು ಒದಗಿಸುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ.

**ವಚನ 15.** ಅವರಲ್ಲಿ **ಯಾರೂ ಅಪಕಾರಕ್ಕೆ ಅಪಕಾರವನ್ನು ಮಾಡದಂತೆ ನೋಡಿಕೊಳ್ಳಬೇಕು** ಎಂದು ಪೌಲನು ಹೇಳುತ್ತಾನೆ. ಈ ಬುದ್ಧಿವಾದವು ನಮ್ಮಲ್ಲಿರುವ ಪ್ರತೀಕಾರವನ್ನು ಸಲ್ಲಿಸಬೇಕೆಂಬ ಸ್ವಾಭಾವಿಕವಾದ ಪ್ರವೃತ್ತಿಯನ್ನು ನಿಷೇಧಿಸುತ್ತದೆ (ರೋಮಾ 12:17 ರೊಂದಿಗೆ ಹೋಲಿಸಿರಿ).ಈ ಬೋಧನೆಯ ಇನ್ನೊಂದು ಅಂಶವನ್ನು

“ನೋಡಿಕೊಳ್ಳಿರಿ” ಎಂದು ಅನುವಾದಿಸಲ್ಪಟ್ಟಿರುವ ὁρᾶτε (*horate*, ὁράω, *horaō ಎಂಬುದರಿಂದ ಬಂದದ್ದು*) ಎಂಬದು ಬಹುವಚನವಾಗಿದೆ ಎಂಬ ವಾಸ್ತವಾಂಶದಲ್ಲಿ ಕಾಣಬುದಾಗಿದೆ, ಇದು ಒಂದು ಗುಂಪನ್ನು ಉದ್ದೇಶಿಸಿ ಹೇಳಲಾಗುತ್ತಿದೆಯೆಂಬುದನ್ನು ಸೂಚಿಸುತ್ತದೆ. Frame ಹೀಗೆ ಹೇಳುತ್ತಾನೆ, “ಯಾವದೇ ಒಬ್ಬ ಸದಸ್ಯನು (τις) ತಾಳ್ಮೆಯನ್ನೆಲ್ಲಾ ಕಳೆದುಕೊಂಡು ಪ್ರತೀಕಾರವನ್ನು ಮಾಡುವದಕ್ಕೆ ಸಿದ್ಧನಾದರೆ ಅದಕ್ಕೆ ಇಡೀ ಸಭೆಯು ಹೊಣೆಯಾಗುತ್ತದೆ. . . .”[27]

ಇಬ್ಬರು ಸಹೋದರರು ಅಪಕಾರಕ್ಕೆ ಅಪಕಾರವನ್ನು ವಿನಿಮಯ ಮಾಡಿಕೊಳ್ಳುವದರೊಳಗೆ “ಭಾಗಿಯಾಗದ” ಹಾಗೆ ನೋಡಿಕೊಳ್ಳುವದು ಸಭೆಯ ಕೆಲಸವಾಗಿತ್ತು. ಅದು ನಡೆಯುವದಕ್ಕೆ ಆರಂಭಗೊಳ್ಳುವಾಗ, ಅಂತಹದ್ದು ಮುಂದುವರೆಯದಂತೆ ಜಾಗ್ರತೆಯನ್ನು ವಹಿಸುವದು ಒಬ್ಬೊಬ್ಬ ಸಹೋದರರು ಮತ್ತು ನಾಯಕನು ಅದು ಮುಂದುವರೆಯದಂತೆ ನೋಡಿಕೊಳ್ಳಬೇಕು. ಈ ವಿಧವಾಗಿ ನಡಕೊಳ್ಳುವ ಬದಲಾಗಿ, ಕ್ರೈಸ್ತನು **ಒಬ್ಬರಿಬೊಬ್ಬರು ಹಿತವನ್ನು ಮಾಡಿಕೊಂಡಿರುವ**ವರಾಗಿರಬೇಕು. “ಹಿತ”ವು, ಖಂಡಿತವಾಗಿಯೂ ಅದನ್ನು ಪಡಕೊಳ್ಳುವವನಿಗೆ ಪ್ರಯೋಜನಕರವಾದದ್ದೇ. ಇದು ಕಠಿಣವೆಂದು ತೋರುವದಾದರೂ, ಯಾರಾದರೂ ನಮಗೆ ಕೆಟ್ಟದ್ದನ್ನು ಮಾಡಿದರೆ, ಆತನ “ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಡುವ” ಮೂಲಕ ಅವನು ತನ್ನ ತಪ್ಪನ್ನು ಅರಿತುಕೊಳ್ಳುವಂತೆ ಸಹಾಯ ಮಾಡುವದಕ್ಕೋಸ್ಕರ ನಾವು ಅವನಿಗೆ ಹಿತವನ್ನೇ ಮಾಡಬೇಕು (ರೋಮಾ 12:20; ನೋಡಿರಿ ಜ್ಞಾನೋಕ್ತಿ 25:21, 22). ಅವನನ್ನು ಸುಟ್ಟು ಬಿಡಬೇಕೆಂಬುದಕ್ಕಾಗಿ ಈ ಕೆಂಡಗಳನ್ನು ಬಳಸಬಾರದು, ಆದರೆ ಆತನ ಕಠಿಣತನವನ್ನು “ಕರಗಿ ಹೋಗುವಂತೆ” ಮಾಡುವದಕ್ಕೆ ಮತ್ತು ಘರ್ಷಣೆಯು ಕರಗಿ ಹೋಗುವಂತಾಗುವ ಹಾಗೆ ಅವನಲ್ಲಿ ನಾಚಿಕೆಯು ಉಂಟಾಗುವಂತೆ ಮಾಡುವ ಬಯಕೆಯೊಂದಿಗೆ ಕೆಂಡಗಳನ್ನು ಹಾಕಬೇಕು. ಕ್ರೈಸ್ತರು ಯಾವಾಗಲೂ ಕ್ರೈಸ್ತೇತರರು ಸೇರಿದಂತೆ, **ಎಲ್ಲಾ ಮನುಷ್ಯರ** ಕಡೆಗೆ ಈ ವಿಧದಲ್ಲಿಯೇ ನಡೆದುಕೊಳ್ಳಬೇಕು. (ಈ ಪತ್ರಿಕೆಯಲ್ಲಿ [3:12; 4:12] ಮತ್ತು ಗಲಾತ್ಯ 6:10ರಲ್ಲಿನ ಆತನ ಹೇಳಿಕೆಯಲ್ಲಿ ಪೌಲನು ಕ್ರೈಸ್ತೇತರರ ಕಡೆಗೆ ಹೊಂದಿರುವ ಕಳಕಳಿಯನ್ನು ಗಮನಿಸಿರಿ. ಅಲ್ಲದೆ 1 ಪೇತ್ರ 3:9ರಲ್ಲಿನ ಪೇತ್ರನ ಹೇಳಿಕೆಯನ್ನು ಮತ್ತು ಮತ್ತಾಯ 5:38–41ರಲ್ಲಿನ ಯೇಸುವಿನ ಹೇಳಿಕೆಯನ್ನು ಹೋಲಿಕೆ ಮಾಡಿರಿ.)

**ವಚನಗಳು 16, 17.** ಅವರು ಒಬ್ಬರೊಬ್ಬರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಅವರಿಗೆ ಬೋಧನೆಯನ್ನು ನೀಡಿದ ಬಳಿಕ, ಪೌಲನು ಅವರಿಗೆ ಜೀವನದ ಕಡೆಗೆ ಅವರ ಮನೋಭಾವವು ಹೇಗಿರಬೇಕೆಂದು ಬುದ್ಧಿವಾದ ಹೇಳುತ್ತಾನೆ, ಏನೆಂದರೆ ಅದು ಅವರನ್ನು ಯಾವಾಗಲೂ **ಸಂತೋಷಿಸುವಂತೆ** ಮತ್ತು ಸಂತೋಷದಿಂದ ತುಂಬಿರುವಂತೆ ಮಾಡತಕ್ಕದ್ದು. ದೇವರು ನಮ್ಮ ಹಿಂದಿನ ಪಾಪಗಳಿಂದ ಬಿಡಿಸಿ ನಮಗೆ ರಕ್ಷಣೆಯನ್ನು ಒದಗಿಸಿದ್ದಾನೆ ಮತ್ತು ನಮ್ಮನ್ನು ಆತನು ನಿತ್ಯವಾಗಿ ರಕ್ಷಿಸುವನೆಂಬುದಕ್ಕೆ ನಮಗೆ ಪವಿತ್ರಾತ್ಮನನ್ನು ಸಂಚಕಾರವಾಗಿ ಕೊಟ್ಟಿದ್ದಾನೆ (ಎಫೆಸ 1:13, 14; ರೋಮಾ 8:32). ನಮ್ಮ ತೊಂದರೆಗಳ ಹೊರತಾಗಿಯೂ, ಸಂತೋಷದಿಂದಿರುವದಕ್ಕೆ ಕ್ರೈಸ್ತರಿಗೆ ಹಲವಾರು ಕಾರಣಗಳನ್ನು ಹೊಂದಿದ್ದಾರೆ.

ನಿಜವಾದ ಕ್ರೈಸ್ತನ ಸಂತೋಷವು ಹೆಚ್ಚಾದ ಪ್ರಾರ್ಥನೆ ಮತ್ತು ದೇವರಿಗೆ ಕೃತಜ್ಞತಾಸ್ತುತಿ ಮಾಡುವದರಲ್ಲಿ ತುಂಬಿ ಹರಿಯಬೇಕು. ಅದೇ ರೀತಿಯಲ್ಲಿ, ಸಮಸ್ಯೆಗಳ ಮಧ್ಯದಲ್ಲಿ ನಿಜವಾದ ಕ್ರೈಸ್ತನು ದೇವರೊಂದಿಗೆ ಸಹವಾಸವನ್ನಿಟ್ಟುಕೊಳ್ಳಲು ಬಯಸುವನು. ಹೀಗೆ ಆತನು **ಎಡೆಬಿಡದೆ ಪ್ರಾರ್ಥನೆ ಮಾಡುವನು**. ಪೌಲನು ದೇವರ "ಬದಲಾಗಿ ಒಬ್ಬನ ಕಷ್ಟದ ಮೇಲೆಯೇ ಗಮನವನ್ನು ನೆಲೆಗೊಳಿಸುವ δέομαι [*deomai*] ಎಂಬ ಪದದ ಬದಲಾಗಿ, προσεύχεσθε [*proseuchesthe*] ಎಂಬ ಪದವನ್ನು ಬಳಸುತ್ತಾನೆ, ಅದು ಭಕ್ತಿ, ದೇವರ ಕಡೆಗಿನ ದೃಷ್ಟಿ ಆಗಿರುತ್ತದೆ. . . . Προσεύχομαι [*proseuchomai*] ಎಂಬುದು ಹೆಚ್ಚು ಸಮಗ್ರವಾದ ಪದವಾಗಿದೆ, ಮತ್ತು ಪ್ರಾರ್ಥನೆಯೆಂಬುದಕ್ಕಿರುವ ಇತರ ಪದಗಳನ್ನು ಒಳಗೊಂಡಿರಬಲ್ಲದು."[28]

ಕ್ರೈಸ್ತನು ಯಾವಾಗಲೂ ಮೊಣಕಾಲುಗಳಲ್ಲಿರಬೇಕು ಮತ್ತು ಸದಾ ತುಟಿಗಳನ್ನು ಕದಲಿಸುತ್ತಲೇ ಇರಬೇಕೆಂಬುದು ಪೌಲನ ತಾತ್ಪರ್ಯವಾಗಿರಲಿಲ್ಲ. ಬದಲಾಗಿ, ಒಬ್ಬ ಕ್ರೈಸ್ತನು ನಿರಂತರವಾಗಿ ದೇವರ ಪ್ರಸನ್ನತೆಯ ಭಾವನೆಯನ್ನು ಮತ್ತು ದೇವರನ್ನೇ ಅವಲಂಭಿಸಿರುವ ಭಾವನೆಯನ್ನು ಹೊಂದಿರಬೇಕು, ಅದು ಆತನನ್ನು ನಿತ್ಯಕ್ರಮದಂತೆ ಪರಲೋಕದಲ್ಲಿರುವ ಆತನ ತಂದೆಯೊಂದಿಗೆ ಮಾತಾಡುವಂತೆ ನಡಿಸುವದು, ಸಂಭಾವ್ಯವಾಗಿ ದಿನದಲ್ಲಿ ಹಲವಾರು ಸಾರಿ ಎನ್ನಬಹುದು (ರೋಮಾ 12:12; ಎಫೆಸ 6:18; ಲೂಕ 18:1).

**ವಚನ 18.** ಪೌಲನು 17ನೇ ವಚನದಲ್ಲಿ ಮಾತಾಡಿದ ಪ್ರಾರ್ಥನೆಯು ಎಲ್ಲಕ್ಕಿಂತಲೂ ಮೇಲಾಗಿ **ಕೃತಜ್ಞತಾಸ್ತುತಿ** ಮಾಡುವದಾಗಿದೆ ಅಥವಾ ಒಬ್ಬನು ಯಾವದೇ ಪರಿಸ್ಥಿತಿಯಲ್ಲಿದ್ದಾಗ್ಯೂ, **ಎಲ್ಲಾದರಲ್ಲಿಯೂ** ಕೃತಜ್ಞತಾಭಾವನೆಯನ್ನು ವ್ಯಕ್ತಪಡಿಸುವದು ಆಗಿರುತ್ತದೆ. Morrisನು ಗಮನಕ್ಕೆ ತರುವದೇನೆಂದರೆ "ಇಲ್ಲಿರುವ ἐν παντὶ [*en panti*] ಎಂಬ ಮಾತು, 'ಎಲ್ಲಾ ಸಮಯದಲ್ಲಿ' ಎಂದರ್ಥವನ್ನು ಕೊಡುವದಿಲ್ಲ, ಮತ್ತು ಖಂಡಿತವಾಗಿಯೂ, II ಪೂರ್ವಕಾಲವೃತ್ತಾಂತ 9:8ರಲ್ಲಿನ πάντοτε [*pantote*] ಎಂಬ ಪದಕ್ಕಿಂತ ವ್ಯತ್ಯಾಸವಾಗಿರುತ್ತದೆಂದು ತೋರುತ್ತದೆ. ಬದಲಾಗಿ ಅದರರ್ಥವು 'ಎಲ್ಲಾದರಲ್ಲಿ,' ಅಂದರೆ, 'ಎಲ್ಲಾ ಪರಿಸ್ಥಿತಿಗಳಲ್ಲಿಯೂ' ಎಂದಾಗಿರುತ್ತದೆ."[29] ಅದೇ ರೀತಿಯಲ್ಲಿ, ಪೌಲನು "ಯಾವ ತರದ ಸ್ಥಿತಿಯಲ್ಲಿರುವವನಾದರೂ" ಸಂತೃಪ್ತನಾಗಿರುವದಕ್ಕೆ ಕಲಿತುಕೊಂಡಿದ್ದೇನೆಂದು ಹೇಳುತ್ತಾನೆ (ಫಿಲಿಪ್ಪಿ 4:12).

ಎಲ್ಲವೂ ಸರಿಯಾಗಿ ನಡೆಯುವಾಗ ನಾವು ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡಬೇಕು (2:13), ಆದರೆ ನಾವು ಸಂಕಷ್ಟಗಳಲ್ಲಿ ಸಹ ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡಬೇಕು, ಯಾಕೆಂದರೆ "ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟುಮಾಡುತ್ತದೆ" (ಯಾಕೋಬ 1:3). **ಇದೇ ನಿಮ್ಮ ವಿಷಯವಾಗಿ . . . ದೇವರ ಚಿತ್ತ**, ಅಥವಾ ಅದನ್ನೇ ನೀವು ಮಾಡಬೇಕೆಂದು ಆತನ ಬಯಕೆಯಾಗಿದೆ. ಈ ಹೇಳಿಕೆಯು ಬಹುಶಃ ಕೇವಲ "ಕೃತಜ್ಞತಾಸ್ತುತಿ ಮಾಡುವದು" ಎಂಬುದನ್ನು ಸೂಚಿಸುವದಿಲ್ಲ, ಆದರೆ "ಯಾವಾಗಲೂ ಸಂತೋಷಿಸಿರಿ" ಮತ್ತು "ಎಡೆಬಿಡದೆಪ್ರಾರ್ಥಿಸಿರಿ" ಎಂಬದನ್ನು ಸಹ ಸೂಚಿಸುತ್ತದೆ. ಈ ವಿಧವಾದ ಜೀವಿಸುವಿಕೆ ಮತ್ತು ಮನೋಭಾವವು **ಕ್ರಿಸ್ತ ಯೇಸುವಿನಲ್ಲಿ,**

ಅಂದರೆ ಆತನ ದೇಹದಲ್ಲಿ (ರೋಮಾ 6:3, 4; ಎಫೆಸ 1:22, 23 ರೊಂದಿಗೆ ಹೋಲಿಸಿರಿ), ಆತನ ಕುಟುಂಬದ ಭಾಗವಾಗಿ, ನಾವು ನಡೆದುಕೊಳ್ಳಬೇಕೆಂದು ಆತನು ಬಯಸುವ ದಾರಿಯಾಗಿರುತ್ತದೆ. ನಾವು ಹೃದಯದಲ್ಲಿ ಕೃತಜ್ಞತೆಯನ್ನು ಹೊಂದಿದ್ದರೆ ಸಾಕಾಗುವದಿಲ್ಲ. ನಾವು ಆ ಭಾವವನ್ನು ವ್ಯಕ್ತಪಡಿಸಬೇಕೆಂದು ದೇವರ ಬಯಕೆಯಾಗಿದೆ.

**ವಚನ 19.** ಇಲ್ಲಿ ದೇವತ್ವದ ಮೂರನೆಯ ವ್ಯಕ್ತಿಯಾದ **ಪವಿತ್ರಾತ್ಮನನ್ನು** ಸೂಚಿಸಿ ಹೇಳಲಾಗಿದೆ, ಆತನು ದೇವರಿಗೆ ವಿಧೇಯರಾಗುವವರಾಗಿ ತನಗೆ ವಿಧೇಯರಾಗುವವರ ಹೃದಯಗಳಲ್ಲಿ ಬರುವವನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 5:32). ಪೌಲನು ನಮ್ಮೊಳಗಿರುವ ಪವಿತ್ರಾತ್ಮನನ್ನು ಅಗ್ನಿಗೆ ಹೋಲಿಸಿದನು, ಅದು ಬೇರೆ ಕಡೆಗಳಲ್ಲಿ ಪವಿತ್ರಾತ್ಮನಿಗೆ ಬಳಸಲಾಗಿರುವ ಸಾದೃಶ್ಯವಾಗದೆ (ನೋಡಿರಿ ಅಪೊಸ್ತಲರ ಕೃತ್ಯಗಳು 2:3; 2 ತಿಮೊಥೆ 1:6), ಮತ್ತು ಆತನು ನಮಗೆ **ನಂದಿಸಬೇಡಿರಿ,** ಅಥವಾ ಪವಿತ್ರಾತ್ಮನ ಬೆಂಕಿಯನ್ನು "ಆರಿಸಬೇಡಿರಿ" (NIV) ಎಂದು ಹೇಳುತ್ತಾನೆ. "ನಂದಿಸು" ಎಂಬುದು ಸಾಮಾನ್ಯವಾಗಿ ಬೆಂಕಿಯನ್ನು ಆರಿಸುವ ಎಂಬುದಕ್ಕೆ ಬಳಸುವ ಪದವಾಗಿರುತ್ತದೆ (ನೋಡಿರಿ ಮತ್ತಾಯ 25:8; ಮಾರ್ಕ 9:48).

"ನಂದಿರು" (σβέννυμι, *sbennumi*) ಎಂಬ ಪದದ ಬಗ್ಗೆ ವ್ಯಾಖ್ಯಾನಿಸುತ್ತಾ Robertsonನು ಹೀಗೆ ಹೇಳುತ್ತಾನೆ, "ವರ್ತಮಾನಕಾಲ ಆಜ್ಞಾರ್ಥಕವನ್ನು ಹೊಂದಿರುವ *mē* ಎಂಬುದರ ಅರ್ಥವು ಅದನ್ನು ಮಾಡುವದನ್ನು ನಿಲ್ಲಿಸು ಅಥವಾ ಅದನ್ನು ಮಾಡುವ ರೂಢಿಯನ್ನು ಹೊಂದದಿರು ಎಂದಾಗಿದೆ."[30]

"ಪವಿತ್ರಾತ್ಮನನ್ನು ನಂದಿಸುವದು" ಎಂದರೆ ಅರ್ಥವೇನು? McGarvey, Pendleton, Morris, ಮತ್ತು ಇತರರು ನಂಬುವದೇನೆಂದರೆ ಪೌಲನು ಒಂದು ವಿಸ್ತಾರವಾದ ಅರ್ಥದಲ್ಲಿ ನಮ್ಮೊಳಗೆ ಪವಿತ್ರಾತ್ಮನು ಕಾರ್ಯಮಾಡುವದನ್ನು ಕುರಿತು ಮಾತಾಡುತ್ತಿರಬಹುದಾಗಿದೆ. ಅಂದರೆ, ನಮ್ಮ ವಿಧೇಯತೆಯ ಸಮಯದಲ್ಲಿ (ಅಪೊಸ್ತಲರ ಕೃತ್ಯಗಳು 5:32), ನಾವು ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಮತ್ತು ದೇವರ ಮಕ್ಕಳಾದಾಗ (ರೋಮಾ 6:3, 4; ಗಲಾತ್ಯ 4:6, 7) ಎಲ್ಲಾ ಕ್ರೈಸ್ತರಿಗೂ ಪವಿತ್ರಾತ್ಮನು ಆದ್ಭುತಕರವಲ್ಲದ ಅಳತೆಯಲ್ಲಿ ಕೊಡಲ್ಪಡುವಿಕೆ ಎಂದು ಅವರು ಸೂಚಿಸುತ್ತಾರೆ. ಆದದರಿಂದ, ಯಾವದೇ ಅನೈತಿಕತೆ, ಕ್ರೋಧ, ಕೆಲಸ ಮಾಡುವದನ್ನು ಬಿಟ್ಟು ಪೋಲಿಯಾಗಿ ತಿರುಗಾಡುವದು, ಅಥವಾ ಪವಿತ್ರಾತ್ಮನಿಂದ ತರಲ್ಪಟ್ಟ (ಯೋಹಾಣ 16:13) ಉಪದೇಶಕ್ಕೆ ವಿರುದ್ಧವಾದ ಪಥವು ಕ್ರೈಸ್ತನೊಳಗೆ ವಾಸಿಸುವ ಪವಿತ್ರಾತ್ಮನನ್ನು ಒಂದು ಅರ್ಥದಲ್ಲಿ "ಆರಿಸುತ್ತದೆ" ಅಥವಾ "ನಂದಿಸುತ್ತದೆ." ಪೌಲನು ಈ ಸನ್ನಿವೇಶದಲ್ಲಿ ಪವಿತ್ರಾತ್ಮನ ಅದ್ಭುತಕರ ಕ್ರಿಯೆಯನ್ನು ಸೂಚಿಸುವಂತೆ ತೋರುತ್ತಾನಾದರೂ, ದೇವರ ವಾಕ್ಯಕ್ಕೆ ವಿರುದ್ಧವಾಗಿರುವ ಯಾವದೇ ಜೀವನ ಶೈಲಿಯು ಒಂದು ಅರ್ಥದಲ್ಲಿ ನಮ್ಮ ಜೀವಿತಗಳಲ್ಲಿರುವ ಪವಿತ್ರಾತ್ಮನನ್ನು "ಆರಿಸುವದು" ಅಥವಾ "ನಂದಿಸುವದು."

ಪೌಲನು ಇಲ್ಲಿ ಮೊದಲ ಶತಮಾನದಲ್ಲಿ ಕೆಲವೊಂದು ವ್ಯಕ್ತಿಗಳಿಗೆ ಮಾತ್ರವೇ ಅನುಗ್ರಹಿಸಲ್ಪಟ್ಟಿದ್ದಂಥ (ನೋಡಿರಿ 1 ಕೊರಿಂಥ 29:12), ಅನ್ಯಭಾಷೆಗಳನ್ನಾಡುವದು, ಸ್ವಸ್ಥತೆಯ ವರಗಳು, ಮತ್ತು ಇತರ ಮಹತ್ಕಾರ್ಯಗಳಂತಹ ಅದ್ಭುತಕರವಾದ ವರಗಳ

(1 ಕೊರಿಂಥ 28:12) ಕುರಿತಾಗಿ ಮಾತಾಡುತ್ತಿದ್ದಾನೆ ಎಂಬದಾಗಿ Kelcy, Milligan ಮತ್ತು ಇತರರು ಭಾವಿಸುತ್ತಾರೆ. ಬಹಳ ಮಟ್ಟಿಗೆ ಬೆಂಕಿಯ ಮೇಲೆ ಮರಳನ್ನು ಸುರಿಯುವ ರೀತಿಯಲ್ಲಿಯೇ, ಇಲ್ಲಿ ಯೋಚನೆಯು ಏನೆಂದರೆ ಪೌಲನ ಕೈಯಿಂದ ಒಂದು ಅದ್ಭುತಕರವಾದ ವರವನ್ನು ಪಡೆದುಕೊಂಡಿದ್ದ (ಅಪೊಸ್ತಲರ ಕೃತ್ಯಗಳು 8:18 ರೊಂದಿಗೆ ಹೋಲಿಸಿರಿ) ಥೆಸಲೋನಿಕದವರು ಆ ವರದ ಜ್ವಾಲೆಗಳನ್ನು ಬಳಸಿಕೊಳ್ಳುವದರ ಬದಲಾಗಿ ಅವುಗಳನ್ನು ನಂದಿಸುತ್ತಿದ್ದರು. 20ನೇ ವಚನದೊಂದಿಗೆ ಸರಿಯಾಗಿ ಹೊಂದಿಕೊಳ್ಳುವ ಈ ದೃಷ್ಟಿಕೋನವು, ಅತ್ಯಂಥ ಸಾಧ್ಯತೆಯುಳ್ಳ ಅರ್ಥನಿರೂಪಣೆ ಎಂಬಂತೆ ತೋರುತ್ತದೆ. ಇದು ಸರಿಯಾದ ಅರ್ಥನಿರೂಪಣೆಯಾಗಿದ್ದಲ್ಲಿ, ನಾವು ಇಂದು ಅದೇ ರೀತಿಯಲ್ಲಿಯೇ ಪವಿತ್ರಾತ್ಮನ ಜ್ವಾಲೆಗಳನ್ನು "ನಂದಿಸುವ"ದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಅಪೊಸ್ತಲರ ಕೈಗಳಿಂದ ಬಂದ ಆ ಅದ್ಭುತಕರವಾದ ವರಗಳನ್ನು ನಾವು ಹೊಂದಿರುವದಿಲ್ಲ.

**ವಚನ 20.** 19ನೇ ವಚನದಲ್ಲಿನನ ಸಾಮಾನ್ಯ ಬುದ್ಧಿವಾದವನ್ನು ಹೇಳಿ, ಪೌಲನು ಸ್ವಲ್ಪ ತಡೆದು ವಿಶೇಷವಾಗಿ ಪ್ರವಾದನೆಯ ವರವನ್ನು ಕುರಿತು ಮಾತಾಡುತ್ತಾನೆ. ಎಫೆಸ 4:11ರಲ್ಲಿ ಪೌಲನು ಹೀಗೆ ಬರೆದನು, "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ . . . ಅನುಗ್ರಹಿಸಿದನು." ಮೊದಲ ಶತಮಾನದ ಸಭೆಯಲ್ಲಿ, ಅಪೊಸ್ತಲರು ಆರಂಭದಲ್ಲಿ ದೇವರ ಚಿತ್ತವನ್ನು ಪ್ರಕಟಗೊಳಿಸಿದರು, ಆದರೆ ಪ್ರವಾದಿಗಳು ಸಹ "ಪ್ರಕಟನೆಗಳನ್ನು" ಪಡಕೊಳ್ಳುತ್ತಿದ್ದರು (ನೋಡಿರಿ 1 ಕೊರಿಂಥ 14:29-32, ವಿಶೇಷವಾಗಿ ವ. 30), ಬಹುಶಃ ಅದು ಈಗಾಗಲೇ ಅಪೊಸ್ತಲರು ಪ್ರಟಕಗೊಳಿಸಿದ್ದನ್ನೇ ಮತ್ತುಷ್ಟು ವಿವರಣೆಯೊಂದಿಗೆ ಹೇಳುವದಕ್ಕಾಗಿ ಆಗಿದ್ದಿರಬಹುದು. ಯಾವದೇ ಪ್ರಮಾಣದಲ್ಲಾಗಲಿ, ದೇವರು ಈ ಪ್ರೇರಿತ ವ್ಯಕ್ತಿಗಳ ಮುಖಾಂತರ ಕಿಸ್ತನು ಅವರಿಗೆ ಅನುಗ್ರಹಿಸಿದ್ದ ವರಗಳ ಮೂಲಕವಾಗಿ ಮಾತಾಡಿದನು. ಆದದರಿಂದ, ಅವರ **ಪ್ರವಾದನೆಗಳನ್ನು ಹೀನೈಸಬಾರದಾಗಿತ್ತು,** ಅಕ್ಷರಶಃ "ಅವುಗಳನ್ನು ಶೂನ್ಯವೆಂದಾಗಿಸಬಾರದು."

*προφητεία* (*prophēteia*) ಎಂಬ ಪದದಿಂದ ಬಂದಿರುವ "ಪ್ರವಾದನೆಗಳ"ನ್ನು (ಪ್ರವಾದನಾ ನುಡಿಗಳನ್ನು), ಥೆಸಲೋನಿಕದಲ್ಲಿದ್ದ ಕೆಲವರು "ಹೀನೈಸುತ್ತಿದ್ದರು." Bruce ಹೀಗೆ ಹೇಳುತ್ತಾನೆ, "ಅನಂತರದಲ್ಲಿ ಕೊರಿಂಥದಲ್ಲಿ ಕಂಡು ಬಂದ ಪ್ರಕಾರವೇ, ಥೆಸಲೋನಿಕದಲ್ಲಿ ಪ್ರವಾದನೆಯ ವರಕ್ಕಿಂತಲೂ ಹೆಚ್ಚು ಪ್ರದರ್ಶನಾತ್ಮಕ (ನಯನಮನೋಹರವಾದ) ವರಗಳಿಗೆ ಹೆಚ್ಚು ಬೆಲೆಯನ್ನು ಕೊಡುವ ಪ್ರವೃತ್ತಿಯು ಇದ್ದಿರಬಹುದಾಗಿದೆ."[31] Morris ಅಭಿಪ್ರಾಯ ಪಟ್ಟದ್ದೇನೆಂದರೆ, ಇನ್ನೂ ಪ್ರವಾದಿಗಳೆಂದು ಗುರುತಿಸಲ್ಪಡದವು "ಪ್ರವಾದನೆಗಳನ್ನು" ನುಡಿದಿರಬಹುದು, ಆದ್ದರಿಂದ ಅವುಗಳು ದೇವರಿಂದ ಬಂದವುಗಳಾಗಿದ್ದಾಗ್ಯೂ, ಅವುಗಳನ್ನು ತಿರಸ್ಕರಿಸುವ ಒಲವು ಇದ್ದಿರಬಹುದು.[32] ಈ ಅರ್ಥನಿರೂಪಣೆಯು ಸಂದೇಹಾತ್ಮಕವಾಗಿದೆ.

ಈ ಪ್ರವಾದನೆಗಳನ್ನು ತಿರಸ್ಕರಿಸುವದೆಂದರೆ ಅವುಗಳನ್ನು ಪ್ರಕಟಗೊಳಿಸಿದ್ದ ದೇವರನ್ನೇ ತಿರಸ್ಕರಿಸಿದಂತಾಗಿತ್ತು. ಪೌಲನ ಪ್ರಕಾರವಾಗಿ, ಈ 'ಪ್ರವಾದನೆಗಳನ್ನು" (ಅವುಗಳು ಸಾಮಾನ್ಯವಾಗಿ ವರ್ತಮಾನದ ಕುರಿತ ಬೋಧನೆಗಳು ಮತ್ತು ಈಗೊಮ್ಮೆ ಆಗೊಮ್ಮೆ ಭವಿಷ್ಯದ ಕುರಿತು ಒಂದು ಮುಂತಿಳಿಸುವಿಕೆ ಆಗಿರುತ್ತಿದ್ದವು; ಅಪೊಸ್ತಲರ

ಕೃತ್ಯಗಳು 11:27, 28 ಓದಿರಿ) ಗರಿಷ್ಠ ಪ್ರಾಮುಖ್ಯತೆಯೊಂದಿಗೆ ಕಾಣತಕ್ಕದ್ದು, ಅನ್ಯಭಾಷೆಗಳನ್ನಾಡುವ ವರಕ್ಕಿಂತ ಅತ್ಯಂಥ ಹೆಚ್ಚು ಪ್ರಾಮುಖ್ಯತೆಯೆಂದು ಎಣಿಸಬೇಕಾಗಿತ್ತು. ಪೌಲನು ಹೀಗೆ ಬರೆಯುತ್ತಾನೆ, "ಪವಿತ್ರಾತ್ಮನಿಂದುಂಟಾಗುವ ವರಗಳನ್ನು, ಅವಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ" (1 ಕೊರಿಂಥ 14:1). ಬಳಿಕ ಆತನು ಹೇಳಿದ್ದೇನೆಂದರೆ "ಪ್ರವಾದಿಸುವವನು ಸಭೆಗೆ ಭಕ್ತಿವೃದ್ಧಿ ಮಾಡುತ್ತಾನೆ. ವಾಣಿಗಳನ್ನಾಡುವವನಿಗಿಂತಲೂ . . . ಪ್ರವಾದಿಸುವವನು ಶ್ರೇಷ್ಠ" (1 ಕೊರಿಂಥ 14:4, 5).

ಥೆಸಲೋನಿಕದವರು ತಮ್ಮ ಪ್ರವಾದಿಗಳ ಮಾತುಗಳನ್ನು ಕೇಳಿಸಿಕೊಳ್ಳುವದಕ್ಕೆ ವಿಫಲರಾಗಿದ್ದ, ಅವುಗಳನ್ನು ಧಿಕ್ಕಾರ ಮಾಡಿದ್ದ ಕಾರಣದಿಂದ ಅವರಲ್ಲಿ ಸ್ವಲ್ಪ ಮಟ್ಟಿಗೆ ನೈತಿಕ ಅಸಡ್ಡೆತನ (4:1ರ ಮೇಲಿನ ಚರ್ಚೆಯನ್ನು ನೋಡಿರಿ) ಮತ್ತು ಕ್ರಿಸ್ತನ ಎರಡನೆಯ ಬರೋಣದ ಕುರಿತು ಸುಳ್ಳು ಕಲ್ಪನೆಗಳು ವ್ಯಾಪಕವಾಗಿದ್ದಿರುವ ಸಾಧ್ಯತೆಯಿದೆ (4:13-5:11). ಅದು ತಪ್ಪು ಎಂದು ಪೌಲನು ಹೇಳಿದನು. ಅವರು ಎಷ್ಟೋ ಸುಳ್ಳು ಪ್ರವಾದಿಗಳೊಂದಿಗೆ ಅನುಭವಗಳನ್ನು ಹೊಂದಿದ್ದರಿಂದಾಗಿ ಎಲ್ಲಾ ಪ್ರವಾದಿಗಳನ್ನೂ ಸಂದೇಹದಿಂದ ನೋಡುವಂತವರಾಗಿರುವ ಸಾಧ್ಯತೆಯಿದೆ (1 ಯೋಹಾನ 4:1; 2 ಥೆಸಲೋನಿಕ 2:1-3).

ನಾವು ಈಗಾಗಲೇ ಕಲಿತ ಪ್ರಕಾರ, ಇಂದು ಸಭೆಯಲ್ಲಿ ನಮಗೆ ಇನ್ನು ಯಾವದೇ ಪ್ರೇರಿತ "ಪ್ರವಾದಿಗಳು" ಇಲ್ಲವಾದರೂ, ದೇವರ ವಾಕ್ಯವನ್ನು ಸಾರಬೇಕೆಂದು ಹೊಣೆಯನ್ನು ಹೊಂದಿಕೊಂಡಿರುವ ಬೋಧಕರು ಅಥವಾ ಸುವಾರ್ತಿಕರು ನಮಗಿರುತ್ತಾರೆ. ಒಬ್ಬ ಸುವಾರ್ತಿಕನು ಹೇಳುವಂತದ್ದು ದೇವರ ಪ್ರಕಟನೆಗನುಗುಣವಾಗಿ ಇಲ್ಲವೆಂಬುದನ್ನು ನಾವು ಸಾಭಿತುಗೊಳಿರುವ ಹೊರತು, ನಾವು ಅದನ್ನು "ಹೀನೈಸಬಾರದು." ಅಂಥ ಬೋಧನೆಯನ್ನು ಅಂಗೀಕರಿಸಿಕೊಳ್ಳುವ ಒಂದು ಗಂಭೀರ ಜವಾಬ್ದಾರಿಯು ನಮಗಿರುತ್ತದೆ.

**ವಚನ 21.** ಪುನಃ, ಈ ಥೆಸಲೋನಿಕದ ಕ್ರೈಸ್ತರು ತಮಗೆ ಮೋಸ ಮಾಡಿದ್ದ ಕೆಲವು ಸುಳ್ಳು ಪ್ರವಾದಿಗಳ ವಿಷಯದಲ್ಲಿ ನಕಾರಾತ್ಮಕವಾದ ಅನುಭವಗಳಾಗಿರಬಹುದು. 1 ಯೋಹಾನ 4:1ರಲ್ಲಿ, ಯೋಹಾನನು ತನ್ನ ವಾಚಕರನ್ನು "ಅನೇಕರ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನ ನಂಬದೆ ಆಯಾ ನುಡಿಗಳು ದೇವರಿಂದ ಬಂದವುಗಳೋ ಅಲ್ಲವೋ ಎಂದು ಪರೀಕ್ಷಿಸಬೇಕು" ಎಂದು ಬೇಡಿಕೊಳ್ಳುತ್ತಾನೆ. 2 ಥೆಸಲೋನಿಕ 2:1-3ರಲ್ಲಿ, ಪೌಲನು ಕೆಲವೊಂದು ವಂಚನೆಗಳ ಬಗ್ಗೆ ಎಚ್ಚರಿಸುತ್ತಾನೆ. ಒಂದು ಅವರು ಹಾಗೆ ವಂಚನೆಗೊಳಗಾಗಿದ್ದಲ್ಲಿ, ತಾವು ಪುನಃ "ಕೈ ಸುಟ್ಟುಕೊಳ್ಳುವದರಿಂದ" ದೂರವರುವ ಉದ್ದೇಶದಿಂದ ಅದ್ಭುತಕರ ವರಗಳಿವೆಯೆಂದು ಹೇಳಿಕೊಳ್ಳುವವರನ್ನೆಲ್ಲಾ ತಿರಸ್ಕರಿಸುವ ಪ್ರವೃತ್ತಿಯುಳ್ಳವರನ್ನಾಗಿ ಅದು ಮಾಡಿರಬಹುದಾದ ಸಾಧ್ಯತೆಯಿದೆ. ಅವರು ಎಲ್ಲಾ "ಪ್ರವಾದನೆಗಳನ್ನು" ಹೀನೈಸುವದಕ್ಕೆ ಕಾರಣವು ಇದೇ ಆಗಿರಬಹುದಾಗಿದೆ. ಅದರೆ ಅದು ಸರಿಯಲ್ಲ ಎಂದು ಪೌಲನು ಹೇಳಿದನು. ಬದಲಾಗಿ, **ಎಲ್ಲವನ್ನೂ ಪರಿಶೋಧಿಸಿರಿ** ಎಂದು ಅಥವಾ "ಎಲ್ಲವನ್ನು ಸಾಭಿತುಪಡಿಸಿಕೊಳ್ಳಿರಿ" (KJV), ಮತ್ತು ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಂಡು ಸುಳ್ಳಾದದ್ದನ್ನು ತ್ಯಜಿಸಿ ಬಿಡಿರಿ ಎಂದು ಬೇಡಿಕೊಳ್ಳುತ್ತಾನೆ. Bruce ಗಮನಕ್ಕೆ ತರುವದೇನೆಂದರೆ ಇಲ್ಲಿ *πάντα* (*panta*)

ಎಂಬುದು "ದ್ವಿತೀಯಾ ವಿಭಕ್ತಿಯಾ ಏಕವಚನದ ಬದಲಾಗಿ ನಪುಂಸಕಲಿಂಗ ಬಹುವಚನದಲ್ಲಿರುತ್ತದೆ" ಮತ್ತು ಈ ಕಾರಣದಿಂದ ಅದನ್ನು "ಎಲ್ಲವನ್ನೂ" ಎಂದು ಅನುವಾದಿಸಬೇಕೇ, ಹೊರತು "ಪ್ರತಿಯೊಬ್ಬನನ್ನು" ಎಂದಲ್ಲ.[33]

ಥೆಸಲೋನಿಕದವರು ಎರಡೂ ಕಡೆಗಳಲ್ಲಿಯೂ ಅತೀರೇಕಕ್ಕೆ ಹೋಗದಂತೆ, ಆದರೆ ತಮ್ಮ ಬುದ್ಧಿಯ ಅಂಗಗಳನ್ನು ಬಳಸಿ ಯಾರು ಸುಳ್ಳು ಪ್ರವಾದಿಗಳು ಮತ್ತು ಯಾರು ಸತ್ಯ ಪ್ರವಾದಿಗಳು ಎಂಬ ವ್ಯತ್ಯಾಸವನ್ನು ಮಾಡುವದಕ್ಕೆ ಕಲಿತುಕೊಳ್ಳಬೇಕಿತ್ತು. ಸ್ಪಷ್ಟವಾಗಿರುವಂತೆ, ಅವರು ಪೌಲನ ಅದ್ಭುತಗಳ ಮೂಲಕ ಮತ್ತು ಆತನ ಬೋಧನೆಗಳಲ್ಲಿ ಸತ್ಯವನ್ನು ಕೇಳಿದ್ದರು ಹಾಗೂ ಕಂಡಿದ್ದರಾದ್ದರಿಂದ, ಅವುಗಳಿಗೆ ವಿರುದ್ಧವಾದದ್ದೆಲ್ಲವೂ ಸುಳ್ಳು ಆಗಿತ್ತು ಮತ್ತು ಅವರು ಅದನ್ನು ತಿರಸ್ಕರಿಸಬೇಕಿತ್ತು. ಅಷ್ಟುಮಾತ್ರವಲ್ಲದೆ, ಯಾವದು ಸತ್ಯ ಅಥವಾ ಯಾವದು ಸುಳ್ಳು ಎಂಬುದರ ವ್ಯತ್ಯಾಸವನ್ನು ಗುರುತಿಸುವದಕ್ಕೆ ಸಹಾಯ ಮಾಡುವಂತಹ ಒಂದು ಅದ್ಭುತಕರವಾದ ವರವು ಇತ್ತು (1 ಕೊರಿಂಥ 12:10; 14:29). ಬಹುಶಃ ಪೌಲನು ಆ ವರವನ್ನು ಬಳಸಿಕೊಳ್ಳತಕ್ಕದ್ದೆಂದು ಸಹ ಸಲಹೆಯನ್ನು ಮಾಡುತ್ತಿರಬಹುದಾಗಿದೆ. ವ್ಯತ್ಯಾಸವನ್ನು ಗುರುತಿಸಿದ ಬಳಿಕ, ಒಳ್ಳೇದನ್ನು ಹಿಡಿದುಕೊಳ್ಳಬೇಕೆಂದು ಅವರಿಗೆ ಹೇಳಲಾಯಿತು. ಅಂದರೆ, ಅದನ್ನು ಆದರದಿಂದ ಸ್ವೀಕರಿಸಿಕೊಳ್ಳಿರಿ, ಅಭ್ಯಾಸಿಸಿರಿ, ಮತ್ತು ಅದನ್ನು ಬೇರೆಯವರಿಗೆ ಕಲಿಸಿರಿ.

ಇಂದು ನಮಗೆ ಪವಿತ್ರಾತ್ಮನಿಂದ ಸಿಕ್ಕುವ ಯಾವದೇ ಅದ್ಭುತಕರವಾದ ವರಗಳಿರುವಿಲ್ಲ, ಇವುಗಳು ಅಪೊಸ್ತಲರ ಕೈಗಳಿಂದ ಕೊಡಲ್ಪಡುತ್ತಿದ್ದವಾದ್ದರಿಂದ (ಅಪೊಸ್ತಲರ ಕೃತ್ಯಗಳು 8:17, 18) ಮತ್ತು ಅಪೊಸ್ತಲರು ಈಗ ಮರಣಿಸಿರುತ್ತಾರಾದ್ದರಿಂದ ಇವುಗಳು ಇಂದು ಇರುವದಿಲ್ಲ. ಹೇಗೂ, "[ಪೌಲನು] ಬಳಸುವ ಪದಗಳು ಬಹಳ ಸಾಮಾನ್ಯವಾದವುಗಳು, ಮತ್ತು ಅವುಗಳನ್ನು ಎಲ್ಲಾ ರೀತಿಯ ಸಂಗತಿಗಳು ಎಂಬುದಕ್ಕೆ ಅನ್ವಯವಾದವುಗಳೆಂದು ತಿಳಿಯತಕ್ಕದ್ದು, ಮತ್ತು ಅವುಗಳು ಕೇವಲ ಆತ್ಮೀಕ ವರಗಳಿ ಹಕ್ಕು ಸಾಧಿಸುವವುಗಳಂತಷ್ಟೆ ಅಲ್ಲ."[34] ಬೇರೆ ಮಾತುಗಳಲ್ಲಿ ಹೇಳುವದಾದರೆ, "ಎಲ್ಲವನ್ನೂ" ದೇವರ ಮಾನದಂಡದಿಂದ, ಆತನ ಚಿತ್ತದಿಂದ ಪರಿಶೋಧಿಸುವದು ಕ್ರೈಸ್ತನ ನಿರಂತರವಾದ ಕರ್ತವ್ಯವಾಗಿರುತ್ತದೆ.

**ವಚನ 22.** KJVಯು "ಸಕಲ ವಿಧವಾದ ಕೆಟ್ಟತನನ ತೋರಿಕೆಗೆ ದೂರವಾಗಿರಿ" ಎಂದು ಅನುವಾದಿಸಿರುವ ಕಾರಣದಿಂದ, ಪೌಲನು ಕೆಟ್ಟದ್ದನ್ನು ಮಾತ್ರವೇ ಅಲ್ಲ, ಆದರೆ ಕೆಟ್ಟದ್ದೆಂದು ತೋರುವಂತದ್ದನ್ನು ಸಹ ಖಂಡಿಸುತ್ತಿದ್ದಾನೆಂಬದಾಗಿ ಕೆಲವರು ನಿರ್ಧಾರಕ್ಕೆ ಬರುತ್ತಾರೆ. ಈ ಭಾವನೆಯು ಶಾಸ್ತ್ರಗಳೊಳಗೆ ಬೇರೊಂದು ಕಡೆಯಲ್ಲಿ ಕಲಿಸಲ್ಪಟ್ಟಿರುತ್ತದೆ (2 ಕೊರಿಂಥ 8:19–21), ಆದರೆ ಅದು ಪೌಲನ ಯೋಚನೆಯಾಗಿರಲಿಲ್ಲ.

Henry Alford ಗಮನಕ್ಕೆ ತರುವ ಪ್ರಕಾರ, KJVಯು ಇಲ್ಲಿ ಸರಿಯಾದ ಅನುವಾದವಾಗಿರಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಯೋಚನೆಯು "ಎಲ್ಲಾ ವಿಧವಾದ ಕೆಟ್ಟತನದಿಂದ ದೂರವಿರಿ" ಎಂದಾಗಿದೆ. Alford ಮುಂದುವರೆದು ಹೇಳುವದೇನೆಂದರೆ, "ಈ ಮಾತುಗಳಿಗೆ ಯಾವದೇ ಸಂಭಾವ್ಯತೆಯಿಂದಲೂ . . . '*ಸಕಲವಿಧವಾದ ಕೆಟ್ಟತನ ತೋರಿಕೆಗೆ ದೂರವಿರಿ*' ಎಂದು ಅನುವಾದಿಸುವದಕ್ಕೆ ಸಾಧ್ಯವಿಲ್ಲ. ಯಾಕೆಂದರೆ (1) εἶδος [*eidos,* 'ರೂಪ' ಎಂಬ

ಅರ್ಥ] ಎಂಬುದು ಈ ಅರ್ಥದಲ್ಲಿ *'ತೋರಿಕೆ'* ಎಂಬದನ್ನು ಸೂಚಿಸುವದಕ್ಕೆ ಸಾಧ್ಯವಿಲ್ಲ; (2) ವಾಕ್ಯದ ಎರಡು ಅಂಗಗಳು ಒಂದಕ್ಕೊಂದು ತಾರ್ಕಿಕವಾಗಿ ಸಂಬಂಧವನ್ನು ಹೊಂದಿರುವದಿಲ್ಲ. . . ."[35] Robertson ಕೂಡ ಅದಕ್ಕೆ ಸಹಮತ ವ್ಯಕ್ತಪಡಿಸುತ್ತಾನೆ.[36]

ಈ ವಚನದ ಹಿನ್ನಲೆಯು ಈ ಮುಂಚೆ ನಾವು 21ನೇ ವಚನದಲ್ಲಿ ನೋಡಿದ ಅದೇ ಹಿನ್ನಲೆ ಆಗಿದೆ, "ಎಲ್ಲವನ್ನೂ ಪರಿಶೋಧಿಸಿರಿ. ಒಳ್ಳೇದನ್ನು ಹಿಡಿದುಕೊಂಡಿರಿ" (NIV). ಇಲ್ಲಿ, ಪೌಲನು ನಾವು **ಸಕಲವಿಧವಾದ ಕೆಟ್ಟತನಕ್ಕೆ** ದೂರವಾಗಿರಬೇಕು ಎಂಬುದನ್ನು ಸೇರ್ಪಡೆಗೊಳಿಸುತ್ತಾನೆ. "ಕೆಟ್ಟತನ" ಯಾವದೆಂದರೆ ದೇವರ ವಾಕ್ಯದ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಸಂಗತಿಯಾಗಿದೆ; ಮೊಟ್ಟ ಮೊದಲನೆಯದಾಗಿ ಸುಳ್ಳು ಪ್ರವಾದನೆ (ಮತ್ತಾಯ 7:15), ಮತ್ತು ನಂತರ, ಅದಕ್ಕೆ ಮುಂದುವರೆದ ಭಾಗವಾಗಿ, ಇತರ ಯಾವದೇ ಸುಳ್ಳು ಸಂಗತಿ ಅಥವಾ ಭಾವನೆ.

ಆ ದಿನದಲ್ಲಿ, ಅವರು ದೂರವಿರಬೇಕಾಗಿದ್ದ ಕೆಟ್ಟತನಗಳಲ್ಲಿ "ಜಾರತ್ವ (ಲೈಂಗಿಕ ಅನೈತಿಕತೆ) ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೇಕಿಚ್ಚು ಸಿಟ್ಟು ಕಕ್ಷಭೇದ ಭಿನ್ನಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ" (ಗಲಾತ್ಯ 5:19-21; NIV).

ಇಂದು ಪ್ರಾಮಾಣಿಕರಾದ ಕ್ರೈಸ್ತರು ದೂರವಿರಬೇಕಾದ ಕೆಟ್ಟತನಗಳು ಅಂದು ಪೌಲನು ಗಲಾತ್ಯದವರಿಗಾಗಿ ಹೆಸರಿಸಿದಂಥ ಕೆಟ್ಟತನಗಳ ಅತಿವ್ಯಾಪನೆ ಆಗಿರುತ್ತವೆ. ಜಾರತ್ವ, ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೇಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಮುಂತಾದವುಗಳು ಈಗಲೂ ಸರ್ವಸಾಮಾನ್ಯವಾಗಿ ಕಂಡು ಬರುತ್ತವೆ, ಮತ್ತು ನಾವು ಸಹ, ಅವುಗಳಿಗೆ ದೂರವಾಗಿರಬೇಕು. ಅಷ್ಟುಮಾತ್ರವಲ್ಲದೆ, ಸಲಿಂಗಕಾಮ, ಮಾದಕದ್ರವ್ಯದ ದುರುಪಯೋಗ, ಮತ್ತು ಕಾಮಪ್ರಚೋದಕ ಸಾಹಿತ್ಯ, ಸಿನಿಮಾಗಳು, ಅವುಗಳಲ್ಲಿ ಕೆಲವು ಉದಾಹರಣೆಯಾಗಿವೆ, ಇವುಗಳನ್ನು ಸಹ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು. ಇವೆಲ್ಲವೂ "ಕೆಟ್ಟತನವಾಗಿವೆ" ಯಾಕೆಂದರೆ ಅವುಗಳು ದೇವರ ವಾಕ್ಯದ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಿಲ್ಲ.

**ದೂರವಾಗಿರಿ** ಎಂಬುದರ ಅನುವಾದಿತ ಗ್ರೀಕ್ ಪದವು ἀπέχω (apechō), ಇದು ಕ್ರೈಸ್ತನು ಮತ್ತು ಸುಳ್ಳು ಆಗಿರುವ ಮಿಕ್ಕ ಎಲ್ಲದರ ನಡುವೆ ಬೇರ್ಪಡುವಿಕೆ ಇರಬೇಕೆಂಬುದನ್ನು ಒತ್ತಿ ಹೇಳುವ ಒಂದು ಬಲವಾದ ಪದವಾಗಿರುತ್ತದೆ. ನಿಜವಾದ ಕ್ರೈಸ್ತನು ಕೆಟ್ಟತನವನ್ನು ಸಹಿಸಿಕೊಳ್ಳುವದಿಲ್ಲ. ವಾಸ್ತವದಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ" (ಗಲಾತ್ಯ 5:21).

## ಮುಕ್ತಾಯದ ಹೇಳಿಕೆಗಳು (5:23-28)

**23 ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು**

**ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ. [24]ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು.**

**[25]ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ. [26]ಪವಿತ್ರವಾದ ಮುದ್ದಿಟ್ಟು ಸಹೋದರರೆಲ್ಲರನ್ನೂ ವಂದಿಸಿರಿ. [27]ಈ ಪತ್ರಿಕೆಯನ್ನು ಸಹೋದರರೆಲ್ಲರಿಗೂ ಓದಿ ಹೇಳಬೇಕೆಂದು ನಿಮಗೆ ಕರ್ತನ ಆಣೆ ಇಡುತ್ತೇನೆ.**

**[28]ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ.**

**ವಚನ 23.** ಪೌಲನು ಥೆಸಲೋನಿಕದವರ ಅಂತಿಮ ರಕ್ಷಣೆಯ ವಿಷಯವಾಗಿ ಒಂದು ಸುಂದರವಾದ ಪ್ರಾರ್ಥನೆಯನ್ನು ಸೂತ್ರೀಕರಿಸುತ್ತಾನೆ. ಆತನು ಥೆಸಲೋನಿಕದವರಿಗೆ ಇದುವರೆಗೆ ಕೆಲವೊಂದು ಕಾರ್ಯಗಳನ್ನು ಮಾಡುವಂತೆ ಬೇಡಿಕೊಳ್ಳುತ್ತಾ ಇದ್ದನು (ಉದಾಹರಣೆಗೆ ಕೆಟ್ಟತನಕ್ಕೆ ದೂರವಾಗಿರುವದು). ಇಲ್ಲಿ ಆತನು ಶಕ್ತಿಯ ನಿಜವಾದ ಮೂಲವು ದೇವರೇ ಎಂಬುದನ್ನು ಸೂಚಿಸುತ್ತಾನೆ, ಆದ್ದರಿಂದ ಪೌಲನು ದೇವರಿಗೆ ಥೆಸಲೋನಿಕದವರ ಪರವಾಗಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತಾನೆ. ಹಾಗೆ ಮಾಡುವದರಲ್ಲಿ, ಆತನು ದೇವರನ್ನು **ಶಾಂತಿದಾಯಕನಾದ ದೇವರು** ಎಂದು ಕರೆಯುತ್ತಾನೆ. ಬೇರೆ ಸ್ಥಳಗಳಲ್ಲಿ ಆತನು "ಶಾಂತಿದಾಯಕನಾದ ದೇವರು" ಎಂದು ಕರೆಯಲ್ಪಟ್ಟಿದ್ದಾನೆ (ರೋಮಾ 15:33; ನೋಡಿರಿ 2 ಕೊರಿಂಥ 13:11).

ನಿಶ್ಚಯವಾಗಿಯೂ ಇಲ್ಲಿ 12 ರಿಂದ 22 ವಚನಗಳ ಒಂದು ಉಲ್ಲೇಖವಿರುತ್ತದೆ, ಅಲ್ಲಿ ಆತನು ತಮ್ಮ ನಾಯಕರನ್ನು ಪ್ರೀತಿಸಬೇಕು ಹಾಗೂ ಸನ್ಮಾನಿಸಬೇಕು ಮತ್ತು "ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ" (ವ. 13) ಎಂದು ಅವರನ್ನು ಬೇಡಿಕೊಂಡನು. ಇಲ್ಲಿ ಆತನು ಅವರಿಗೆ ದೇವರು "ಶಾಂತಿದಾಯಕನಾದ ದೇವರು" ಎಂದು ಹೇಳುತ್ತಾನೆ, ಅಥವಾ ಆತನು ಸಮಾಧಾನ ಸ್ವಭಾವದವನು, ಅದರಿಂದಾಗಿಯೇ ಆತನು ತನಗೆ ವೈರಿಯಾಗಿದ್ದ ತನ್ನ ಸೃಷ್ಟಿಕರ್ತನನ್ನ ದೂಷಿಸುತ್ತಿದ್ದಂಥ ಮನುಷ್ಯನನ್ನು ತನಗೆ ಸಂಧಾನ ಪಡಿಸಿಕೊಂಡನು ಎಂಬುದಾಗಿ ಬಿಂಬಿಸಲ್ಪಡುತ್ತಿದ್ದಾನೆ (ರೋಮಾ 5:8). ಎರಡನೆಯ ಕೊರಿಂಥ 5:19ನೇ ವಚನು ದೇವರು "ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಂಡನು" ಎಂಬ ಕುರಿತು ಹೇಳುತ್ತದೆ. ಆತನು ಕ್ರೈಸ್ತರನ್ನು ತನಗೆ ಸಮಾಧಾನ ಪಡಿಸಿಕೊಂಡಿದ್ದಾನಾದ್ದರಿಂದ, ನಾವು ಒಬ್ಬರೊಬ್ಬರ ವಿಷಯದಲ್ಲಿ ಅದೇ ಸಮಾಧಾನ ಪಡಿಸಿಕೊಳ್ಳುವ ಮನೋಭಾವವನ್ನು ಹೊಂದಿರಬೇಕೆಂದು ಆತನು ಬಯಸುತ್ತಾನೆಂಬ ಮುಕ್ತಾಯಕ್ಕೆ ಬರುವದು ತಾರ್ಕಿಕವಾದದ್ದು. ನಾವು ಆತನ ಸಂಧಾನಪಡಿಸಿಕೊಳ್ಳುವ ಮಾದರಿಯನ್ನು ಅನುಸರಿಸುವದಾದರೆ, ನಾವು "ಎಲ್ಲಾ ಮನುಷ್ಯರೊಂದಿಗೆ ಸಮಾಧಾನದಿಂದಿರುವದಕ್ಕೆ" ಪ್ರಯತ್ನಿಸುತ್ತಿರುವ ವೇಳೆ ನಮ್ಮ ಮತ್ತು ಬೇರೆ ವ್ಯಕ್ತಿಗಳ ಮಧ್ಯದಲ್ಲಿರುವ ಇರುವ ಎಲ್ಲಾ ಉದ್ವಿಗ್ನತೆಯನ್ನು ತೆಗೆದು ಹಾಕುವವರಾಗುತ್ತೇವೆ (ರೋಮಾ 12:18).

ಈ "ಶಾಂತಿದಾಯಕನಾದ ದೇವರು" ಥೆಸಲೋನಿಕದವರನ್ನು **ಪವಿತ್ರಮಾಡಲಿ** (ἁγιάζω, *hagiazō*) ಎಂಬುದು ಪೌಲನ ಪ್ರಾರ್ಥನೆಯಾಗಿತ್ತು. "ಪವಿತ್ರಗೊಳಿಸುವದು" ಎಂದರೆ ಒಂದು ನಿರ್ದಿಷ್ಟವಾದ ಸೇವೆ ಅಥವಾ ಉದ್ದೇಶಕ್ಕೆ "ಪ್ರತ್ಯೇಕಿಸುವದು" ಅಥವಾ "ಪರಿಶುದ್ಧತೆಗೆ ಹೊಂದಿಕೆಯಾಗದ್ದನ್ನು ನಿರ್ಮೂಲನಗೊಳಿಸುವದು"[37] ಎಂದರ್ಥವಾಗಿದೆ.

ಕ್ರೈಸ್ತರು ತಮ್ಮ ಪರಿವರ್ತನೆಯ ವೇಳೆಯಲ್ಲಿ ಪರಿಶುದ್ಧಗೊಳಿಸಲ್ಪಡುವದಕ್ಕೆ ಆರಂಭಿಸುತ್ತಾರೆ (1 ಕೊರಿಂಥ 6:11; 1:2), ಆದರೆ ನಾವು ಪರಿಪಕ್ವತೆಯ ಉಚ್ಛ ಘಟ್ಟಗಳಿಗೆ ಹೋದ ಹಾಗೆ ಆ ಪ್ರಕ್ರಿಯೆಯು ನಮ್ಮ ಜೀವಿತ ಕಾಲವೆಲ್ಲಾ ಮುಂದುವರೆಯುತ್ತದೆ (4:3). ಈ ಪರಿಶುದ್ಧಗೊಳಿಸಲ್ಪಡುವ ಪ್ರಕ್ರಿಯೆಯು ಮುಂದುವರೆಯುವಂತಾಗಬೇಕೆಂದು, ಅವರು **ಸಂಪೂರ್ಣವಾಗಿ** ಪರಿಶುದ್ಧಗೊಳಿಸಲ್ಪಡಬೇಕೆಂಬದು ಪೌಲನ ಪ್ರಾರ್ಥನೆಯಾಗಿತ್ತು. ಈ ವಿಧದಲ್ಲಿ ಮಾತ್ರವೇ ಕ್ರಿಸ್ತನ ಎರಡನೆಯ ಬರೋಣದಲ್ಲಿ ಒಬ್ಬನ ರಕ್ಷಣೆಯು ಖಚಿತ ಪಡಿಸಲ್ಪಡುತ್ತದೆ.

ಥೆಸಲೋನಿಕದವರು "ಒಂದಿಷ್ಟೂ ಬಿಡದಂತೆ" (NIV) ಪರಿಶುದ್ಧಗೊಳಿಸಲ್ಪಡಲಿ ಎಂದು ಪ್ರಾರ್ಥಿಸಿದ ಬಳಿಕ, ಪೌಲನು ತನ್ನ ಪ್ರಾರ್ಥನೆಯನ್ನು ಬೇರೆ ಮಾತುಗಳಲ್ಲಿ ಹೇಳುತ್ತಾನೆ: ಅವರು **ದೋಷವಿಲ್ಲದೆ,** ಅಥವಾ ನ್ಯಾಯವಾದ ದೋಷಾರೋಪಣೆಯಿಲ್ಲದವರು ಆಗಬೇಕು ಮತ್ತು ಆ ಮೂಲಕ ಅವರ ಆತ್ಮ, ಪ್ರಾಣ, ಮತ್ತು ದೇಹಗಳಿಗೆ ಸಂಬಂಧಿಸಿದಂತೆ ನೀತಿವಂತರೆಂದು ನಿರ್ಣಯಿಸಲ್ಪಟ್ಟವರಾಗಲಿ ಎಂಬುದು ಪೌಲನ ಬಯಕೆಯಾಗಿತ್ತು. ಗ್ರೀಕ್‌ರು ಮನುಷ್ಯನನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದರು: **ಆತ್ಮ**-ಮಾನವನ ವಿಶಿಷ್ಟವಾದ ನಿರ್ಲಯವಾದಂಥ ಭಾಗ, ಅದು ದೇವರೊಂದಿಗೆ ಸಂಬಂಧ ಹೊಂದಿದೆ; **ಪ್ರಾಣ**-ಆತನ ಅಭಿಲಾಷೆಗಳು ಸೇರಿದಂತೆ ಕೆಳಮಟ್ಟದ ಪ್ರಾಣಿ ಸ್ವಭಾವ; ಮತ್ತು **ದೇಹ**. ಪೌಲನು ಆ ಯೋಚನೆಯೊಂದಿಗೆ ಇಲ್ಲಿ ಸಹಮತ ವ್ಯಕ್ತಪಡಿಸುತ್ತಿದ್ದಾನೆಂಬದಾಗಿ ತೋರುವದಿಲ್ಲ. Morris ಹೀಗೆ ವ್ಯಾಖ್ಯಾನಿಸುತ್ತಾನೆ, "ಪೌಲನು ಈ ಹಂತದಲ್ಲಿ ಮಾನವನ ಸ್ವಭಾವದ ವರ್ಣನೆಯನ್ನು ಮಾಡುತ್ತಿಲ್ಲ, ಆದರೆ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾನೆ. ಆತನು ಕೆಲವು ಭಾಗಗಳು ಮಾತ್ರವೇ ಅಲ್ಲ, ಆದರೆ ಇಡೀ ದೇಹವು ಪಾಲ್ಗೊಳ್ಳಬೇಕೆಂಬುದನ್ನು ಒತ್ತಿ ಹೇಳುವದಕ್ಕೆ ಆತನು ಈ ಚಿತ್ರಣದ ರೂಪವನ್ನು ಬಳಸುತ್ತಾನೆ."[38]

ಮೂಲಭೂತವಾಗಿ, ಪೌಲನ ಪ್ರಕಾರ, ಗತಿಸಿ ಹೋಗುವಂತ "ದೇಹ" (ಬಾಹ್ಯ ಮನುಷ್ಯ), ಮತ್ತು "ಆಂತರ್ಯ" ಎಂಬ ಎರಡು ಭಾಗಗಳಿದ್ದವು, ಈ ಆಂತರ್ಯವು ಕ್ರೈಸ್ತನ ವಿಷಯದಲ್ಲಾಗಿದ್ದಲ್ಲಿ, "ದಿನೇದಿನೇ ಹೊಸದಾಗುತ್ತಾ ಬರುತ್ತದೆ" (2 ಕೊರಿಂಥ 4:16). ಆದ್ದರಿಂದ, ಪ್ರತಿಯೊಬ್ಬ ಕ್ರೈಸ್ತನ ವಿಷಯದಲ್ಲಿ ತನ್ನ ಬಯಕೆಯು ಆತನು "ದೋಷವಿಲ್ಲದವನು," ಅಥವಾ ಎಲ್ಲಾ ನ್ಯಾಯವಾದ ಆರೋಪಗಳನ್ನು ಅತೀತನು ಆಗಿರಬೇಕೆಂಬುದೇ ಆಗಿದೆ ಎಂಬುದನ್ನು ಒತ್ತಿ ಹೇಳುವದಕ್ಕಾಗಿ, ಆತನು ಆ ಕಾಲದಲ್ಲಿ ಮನುಷ್ಯನ ಭಾಗಗಳನ್ನು (ಆತ್ಮ, ಪ್ರಾಣ, ಶರೀರ) ಬಣ್ಣಿಸುವದಕ್ಕೆ ಬಳಸಲ್ಪಡುತ್ತಿದ್ದ ಪ್ರತಿಯೊಂದು ಪದವನ್ನು ಬಳಸುತ್ತಿದ್ದಾನಷ್ಟೆ ಎಂದು ತೋರುತ್ತದೆ. ಇದನ್ನು ಮಾರ್ಕ 12:30, 31 ರೊಂದಿಗೆ ಹೋಲಿಸಿರಿ, ಅಲ್ಲಿ "ಹೃದಯ," "ಪ್ರಾಣ," "ಬುದ್ಧಿ," ಮತ್ತು "ಬಲ" ಗಳು ಸ್ಪಷ್ಟವಾಗಿ ಬೇರೆ ಬೇರೆ ಮಾಡಲ್ಪಟ್ಟಿವೆಯೋ ಎಂಬುದು ಖಚಿತವಾಗುವದಿಲ್ಲ. ಯೇಸುವು ಸಂಪೂರ್ಣತೆಯನ್ನು ಒತ್ತಿ ಹೇಳುವದಕ್ಕೆ ಈ ಪದಗಳನ್ನು ಬಳಸಿದನು.

ಪೌಲನು ಸಂಪೂರ್ಣವಾದ ಶುದ್ಧೀಕರಣಕ್ಕಾಗಿ, ಅಥವಾ ದೋಷಹಿತತೆಗಾಗಿ ಮಾಡಿದ ಪ್ರಾರ್ಥನೆಯು ಆತನು ಈಗಾಗಲೇ ಸವಿಸ್ತಾರವಾಗಿ ಚರ್ಚೆಸಿದ ಆ ಕ್ಷಣದ ಸುತ್ತಲು (4:13-

5:11)-**ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವ** ಕ್ಷಣ-ಮುಖ್ಯ ಗಮನವನ್ನು ಹೊಂದಿತ್ತು. ಆತನು ತನ್ನ ಎರಡನೆಯ ಬರೋಣದ ಕ್ಷಣದಲ್ಲಿ ಸತ್ತವರನ್ನೆಲ್ಲಾ ಎದ್ದಬರುವಂತೆ ಕರೆಯುವನು, ಶುದ್ಧೀಕರಿಸಲ್ಪಟ್ಟವರನ್ನು ನೀತಿವಂತರೆಂದು ನಿರ್ಣಯಿಸುವನು, ಮತ್ತು ದುಷ್ಟರಿಗೆ ದಂಡನೆಯನ್ನು ವಿಧಿಸುವನು (ಯೋಹಾನ 5:25-29). ಥೆಸಲೋನಿಕದವರು ಯೇಸುವಿನ ಬಲಗಡೆಯಲ್ಲಿರುವ ನೀತಿವಂತರೆಂದು ನಿರ್ಣಯಿಸಲ್ಪಟ್ಟವರು (ಮತ್ತಾಯ 25:33) ಆಗಿರಬೇಕು ಮತ್ತು ಪರಲೋಕದೊಳಗೆ ಸ್ವಾಗತಿಸಲ್ಪಡುವವರಾಗಬೇಕು ಎಂಬುದು ಪೌಲನ ಪ್ರಾರ್ಥನೆಯಾಗಿತ್ತು.

ಪೌಲನು ಅಕ್ಕರೆಯಿಂದ ಆತನನ್ನು "ನಮ್ಮ ಕರ್ತನಾದ ಯೇಸು ಕ್ರಿಸ್ತನು" ಎಂದು ಕರೆದನು. ಒಂದು ಅರ್ಥದಲ್ಲಿ, "ನಮ್ಮ ಕರ್ತನು" ಆಗಿರುವದು ಆತನ ಬರೋಣದ ದಿನದಲ್ಲಿ ದೊಡ್ಡ ನಿರೀಕ್ಷೆಯನ್ನು ಕೊಡುವದಾಗಿದೆ, ಅದು ಕೆಲವರಿಗೆ ಕೋಪದ ದಿನವಾಗುವದು (5:9), ಅದು ಕ್ರೈಸ್ತರಿಗೆ ಆ ರೀತಿಯಲ್ಲಿರದೆ, ಅದೊಂದು "ವಿಮೋಚನೆಯ" ಒಂದು ಮಹಾ ದಿನವಾಗಿರಲಿದೆ (ಎಫೆಸ 4:30). ಈ ಯೋಚನೆಯು ಈ ಪತ್ರಿಕೆಯಲ್ಲಿ ಪೌಲನಿಗಿದ್ದ ಉದ್ದೇಶವನ್ನು ಸಾರಾಂಶಗೊಳಿಸುತ್ತದೆ: ಏನೆಂದರೆ ಈ ಥೆಸಲೋನಿಕದಲ್ಲಿನ ಪರಿವರ್ತನೆಗೊಂಡವರು ಕ್ರಿಸ್ತನ ಎರಡನೆಯ ಬರೋಣದ ವೇಲೆ "ದೋಷವಿಲ್ಲದವರು" ಆಗಿ ಕಾಣಿಸುವ ರೀತಿಯಲ್ಲಿ ಜೀವಿಸುವವರಾಗಬೇಕು.

**ವಚನ 24.** ಮುಂಚಿನ ವಚನದಲ್ಲಿ, ಯೇಸು ಹಿಂದಿರುಗಿ ಬಂದಾಗ ನ್ಯಾಯತೀರ್ಪಿನಲ್ಲಿ ಥೆಸಲೋನಿಕದವರು ನಂಬಿಗಸ್ತರಾಗಿಯೂ "ದೋಷವಿಲ್ಲದೆ" ಇರುವವರಾಗಿಯೂ ಕಂಡು ಬರುವಂತೆ ದೇವರು ಮಾಡಲಿ ಎಂಬ ಪ್ರಾರ್ಥನೆಯನ್ನು ಪೌಲನು ವ್ಯಕ್ತಗೊಳಿಸಿದನು. ಆ ರೀತಿಯಲ್ಲಿಯೇ ಆಗುವಂತೆ ದೇವರು ತನ್ನ ಪಾತ್ರವನ್ನು ಮಾಡುವನು ಎಂದು ಪೌಲನು ಹೇಳುತ್ತಾನೆ. ದೇವರು **ನಿಮ್ಮನ್ನು ಕರೆಯುವವನು** ಎಂದು ಹೇಳುವ ಮೂಲಕ ಆರಂಭಿಸಿದನು. ಇದೇ ರೀತಿಯ ಮಾತು 2:12ರಲ್ಲಿ ಕಂಡು ಬರುತ್ತದೆ, ಅಲ್ಲಿ ಪೌಲನು "ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರು" ಎಂದು ಬರೆಯುತ್ತಾನೆ. ದೇವರು ಹೇಗೆ ಕರೆಯುತ್ತಾನೆ? ಪೌಲನಿಗೆ ಸಂಭವಿಸಿದ ರೀತಿಯಲ್ಲಿ ಆತನು ಪ್ರತಿಯೊಬ್ಬನನ್ನು ಒಂದು ನೇರವಾದ ದರ್ಶನವನ್ನು ನೀಡುವ ಮೂಲಕ ಕರೆಯುವನೋ (ಅಪೊಸ್ತಲರ ಕೃತ್ಯಗಳು 9)? ಇಲ್ಲ. ಥೇಸಲೋನಿಕದವರಿಗೆ ಬರೆದ ಎರಡನೆಯ ಪತ್ರಿಕೆಯಲ್ಲಿ, ಪೌಲನು "ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" ಎಂದು ಹೇಳುತ್ತಾನೆ (2 ಥೆಸಲೋನಿಕ 2:14). ಆದ್ದರಿಂದ, ಅವರ "ಕರೆಯಲ್ಪಟ್ಟ" ಗಳಿಗೆ ಮತ್ತು ನಾವು ಕರೆಯಲ್ಪಟ್ಟ ಗಳಿಯು ಯಾವದೆಂದರೆ, ನಾವು ಸುವಾರ್ತೆಯನ್ನು ಆಲಿಸುವ ಆ ಗಳಿಗೆಯೇ ಆಗಿದೆ. ಇಂದು ಸುವಾರ್ತೆಯು ಸಾರಲ್ಪಡುವದನ್ನು ಒಬ್ಬನು ಕೇಳಿಸಿಕೊಳ್ಳುವಾಗ, ಆತನು ತನ್ನ ಬಳಿಗೆ ಬರುವಂತೆ ಮತ್ತು ಆತನ ಸೇವೆಯನ್ನು ಮಾಡುವಂತೆ ಹಾಗೂ ವಿಧೇಯತೆಯ ಮೂಲಕ ಪಾಪಪರಿಹಾರವನ್ನು ತನ್ನದಾಗಿಸಿಕೊಳ್ಳುವಂತೆ ದೇವರು ಅವನನ್ನು ಪರೋಕ್ಷವಾಗಿ ಕರೆಯುವವನಾಗಿರುತ್ತಾನೆ.

ದೇವರು ತನ್ನ ಕೆಲವು ಖಯಾಲಿಗಳ ಮೂಲಕ "ಕರೆದು" ನಂತರ ತನ್ನ ಚಂಚಲತೆ ರೀತಿಯಲ್ಲಿ ಅದರ ಬಗ್ಗೆ ಮರೆತು ಹೋಗುವವನಲ್ಲ ಎಂಬುದನ್ನು ಪೌಲನು ಇಲ್ಲಿ ಒತ್ತಿ

ಹೇಳುತ್ತಾನೆ. ಆತನು ಕೇವಲ "ಕರೆಯುವದು" ಮಾತ್ರವೇ ಅಲ್ಲ, ಆದರೆ ಕಾರ್ಯರೂಪಕ್ಕೆ ತರುವನು. ಆತನು **ತನ್ನ ಕಾರ್ಯವನ್ನು ಸಾಧಿಸುವನು**. ಆತನು ಕಾರ್ಯ ಮಾಡುತ್ತಾನೆ. ಆತನು ತನ್ನ ವಾಗ್ದಾನವನ್ನು ಕಾರ್ಯರೂಪದಲ್ಲಿ ತರುವನು. ಬಿಳಾಮನು ಅರಣ್ಯಕಾಂಡ 23:19ರಲ್ಲಿ ಹೇಳಿದ ಹಾಗೆ, "ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾಣವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ; ಮಾತುಕೊಟ್ಟನಂತರ ನೆರವೇರಿಸುವದಿಲ್ಲವೋ." ಉತ್ತರವು ಇಲ್ಲಿ ಸ್ಪಷ್ಟವಾಗಿ ಸೂಚಿಸಲ್ಪಟ್ಟಿದೆ. ಇಲ್ಲ. ದೇವರು ವಾಗ್ದಾನ ಮಾಡಿ ನೆರವೇರಿಸದೆ ಇರುವವನಲ್ಲ. ಪೌಲನು ಹೇಳಿದ ಹಾಗೆ, ಆತನು ಪೂರ್ತಿಗೊಳಿಸುವನು, ಯಾಕೆಂದರೆ ಆತನು **ನಂಬಿಗಸ್ತನು**.

ದೇವರು "ನಂಬಿಗಸ್ತನು" ಎಂಬ ಅದೇ ಸಮರ್ಥನೆಯು ಶಾಸ್ತ್ರದಲ್ಲಿ ಅನೇಕಕ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತದ.[39] ಇದರ್ಥವು ದೇವರ ಹೃದಯವು ನಂಬಿಕೆ ಅಥವಾ ವಿಶ್ವಾಸದಿಂದ ತುಂಬಿರುತ್ತದೆ ಎಂದಾಗಿದೆಯೋ? ಇಲ್ಲ, ಬದಲಾಗಿ, ತನ್ನ ವಾಗ್ದಾನಗಳನ್ನು ನೆರವೇರಸುವನು ಎಂಬದಾಗಿ ನೀವು ಆತನ ಮೇಲೆ ಆಧಾರಗೊಳ್ಳಬಹುದು ಎಂದರ್ಥವಾಗಿದೆ. "ನಂಬಿಗಸ್ತನು" ಎಂಬುದು ಗ್ರೀಕ್ ನ πιστός (*pistos*) ಎಂಬ ಪದದಿಂದ ಬರುತ್ತದೆ, ಮತ್ತು "ಕರೆದಾತನು ಸಿದ್ಧಿಗೆ ತರುವನು" ಎಂದರ್ಥವಾಗಿರುತ್ತದೆ (ಫಿಲಿಪ್ಪಿ 1:6).[40] ಆತನು ಏನೇ ಹೇಳಿದ್ದರೂ ಅದರ ಹಿಂದೆ ನಿಂತು ಅದನ್ನು ಸಿದ್ಧಿಗೆ ತರುವನು. ಇದು ತನಗೆ ಅನೇಕ ಸಾರಿ ಸಹಾಯ ಮಾಡಿದ್ದ ತನ್ನ ದೇವರಲ್ಲಿ ಇಟ್ಟಿರುವ ನಂಬಿಕೆಯ ಕೂಗು ಆಗಿದ್ದು ಆತನು ಹೀಗೆ ಹೇಳುವದಕ್ಕೆ ಶಕ್ತನಾಗಿದ್ದನು, "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ" (2 ತಿಮೊಥೆ 1:12). ಪೌಲನ ಭರವಸೆಯು ಆತನ ದೇವರ ಗುಣಸ್ವಭಾವದಲ್ಲಿಯಾಗಿತ್ತು. ದೇವರು ಆತನಿಗೋಸ್ಕರ ಮತ್ತು ಥೆಸಲೋನಿಕದವರಿಗೋಸ್ಕರ ವೈಯಕ್ತಿಕವಾಗಿ "ಕಾರ್ಯವನ್ನು ಸಾಧಿಸುವನು," ಅವರನ್ನು ನ್ಯಾಯತೀರ್ಪಿನ ದಿನಕ್ಕಾಗಿ "ದೋಷವಿಲ್ಲದವರಾಗಿ" ಕಾಯುವನೆಂದು ಬಲ್ಲವನಾಗಿದ್ದನು. ಎಲ್ಲಾ ನಂಬಿಗಸ್ತರಾದ ಕ್ರೈಸ್ತರಿಗೆಲ್ಲಾ ಎಂಥ ಆದರಣೆಯುಂಟು ಮಾಡುವ ಯೋಚನೆ!

ಖಂಡಿತವಾಗಿಯೂ, ಆತನು ನಮಗೆ ಮಾಡಬೇಕೆಂದು ಹೇಳಿದ್ದನ್ನು ನಾವು ಮಾಡುವದಾದರೆ ಮಾತ್ರವೇ, ನಮ್ಮ ದೇವರು ನಮ್ಮನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸುವನು ಮತ್ತು ಆ ಅಂತಿಮ ದಿನವನ್ನು ದಾಟಿಕೊಂಡು ಬರುವಂತೆ ಪೋಷಿಸುವನು. ಆತನು ನಮಗೆ ಹೇಗೆ ನಂಬಿಗಸ್ತನಾಗಿದ್ದಾನೋ ಹಾಗೆಯೇ, ನಾವು ಆತನಿಗೆ ನಂಬಿಗಸ್ತರಾಗಿರುವ ವಾಗ್ದಾನವನ್ನು ನೆರವೇರಿಸತಕ್ಕದ್ದು. ನಾವು ಯೂದನು ಹೇಳಿದ ಹಾಗೆ, "[ನ]ಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಬೇಕು" (ಯೂದನು 21). ನಾಉವು "ನಂಬುವವರಾಗಿ" ಇರುವ ಮೂಲಕ "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು . . . ದೊರೆಯುವಂತೆ ದೇವರು [ನ]ಮ್ಮನ್ನು ಬಲದಿಂದ ಕಾಯುತ್ತಾನೆ" ಎಂದು ಪೇತ್ರನು ಹೇಳುತ್ತಾನೆ (1 ಪೇತ್ರ 1:5), ಆದರೆ ನಾವು ನಮ್ಮ ನಂಬಿಕೆಯನ್ನು "ಹಡಗು ಒಡೆದು" ರೀತಿಯಲ್ಲಿ ಮಾಡಿಕೊಂಡರೆ (ಕೆಲವರು ಹಾಗೆ

ಮಾಡಿಕೊಂಡರೆಂದು ಪೌಲನು ಹೇಳಿದ ಹಾಗೆಯೇ; 1 ತಿಮೊಥೆ 1:19), ನಮ್ಮ ಸಹಕಾರವಿಲ್ಲದೆ ದೇವರು ನಮ್ಮನ್ನು ದೋಷವಿಲ್ಲದವರಾಗುವಂತೆ ಕಾಪಾಡುವದಿಲ್ಲ. ಆತನು "ನಂಬಿಗಸ್ತನು" ಆಗಿರುವಂತೆಯೇ, ನಾವು ಸಹ ನಂಬಿಗಸ್ತರಾಗಿರಬೇಕು. ಆತನು ಮಾಡಬೇಕಾದ ಪಾತ್ರಕ್ಕೆ ಸಂಬಂಧಿಸಿದಂತೆ, ನಾವು ಚಿಂತಿಸಬೇಕಾಗಿಲ್ಲ ಎಂದು ಪೌಲನು ಹೇಳಿದನು, "ಆತನು ತನ್ನ ಕಾರ್ಯವನ್ನು ಸಾಧಿಸುವನು." ನಾವು ನಮ್ಮ ಪಾತ್ರವನ್ನು ಎತ್ತಿ ಹಿಡಿಯುವದಾದಲ್ಲಿ, ಹೀಗಿರುವದು:

> ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸಿರುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ. ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ? . . . ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ (ರೋಮಾ 8:33-37).

ನಿಜವಾಗಿಯೂ, ನಮ್ಮ ದೇವರು ನಂಬಿಗಸ್ತನು, ಮತ್ತು, ನಾವು ನಂಬಿಗಸ್ತರಾಗಿ ಉಳಿದರೆ, ಆ ದಿನದಲ್ಲಿ ಆತನು ನಮಗೆ ಜಯವನ್ನು ಕೊಡುವನು.

**ವಚನ 25.** ಪೌಲನು ತನಗೋಸ್ಕರ ಮತ್ತು ತನ್ನ ಜೊತೆಗೆಲಸದವರಿಗೋಸ್ಕರ **ಪ್ರಾರ್ಥನೆ ಮಾಡಿರಿ** ಎಂದು ಸಹೋದರರನ್ನು ಬೇಡಿಕೊಳ್ಳುತ್ತಾನೆ. ಆತನು ಪದೇ ಪದೇ ಆ ರೀತಿಯ ಮನವಿಗಳನ್ನು ಮಾಡಿದನು (2 ಥೆಸಲೋನಿಕ 3:1; ಕೊಲೊಸ್ಸೆ 4:3; ಎಫೆಸ 6:19). ರೋಮಾ 15:30ರಲ್ಲಿ ಆತನು ಹೀಗೆ ಹೇಳುತ್ತಾನೆ, "ಸಹೋದರರೇ, ನೀವು ನನಗೋಸ್ಕರ ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲೀಯವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವಾಗಿಯೂ ನಿಮ್ಮನ್ನು ಬೇಡಿಕೊಳ್ಳುತ್ತೇನೆ." 2 ಕೊರಿಂಥ 1:11ರಲ್ಲಿ, ಆತನು ಕೊರಿಂಥದವರಿಗೆ ಅವರು "[ತಾವು] [ತನಗೋಸ್ಕರ] ಪ್ರಾರ್ಥನೆ ಮಾಡುವವರಾಗಿ ಸಹಕಾರಿಗಳು" ಆಗಿರುತ್ತಾರೆಂದು ಅವರಿಗೆ ನಿಶ್ಚಯಪಡಿಸುತ್ತಾನೆ.

"ಪ್ರಾರ್ಥನೆ ಮಾಡಿರಿ" ಎಂಬುದಕ್ಕಿರುವ ಪದವು προσεύχομαι (*proseuchomai*) ಎಂದಾಗಿದೆ, ಮತ್ತು ವರ್ತಮಾನಕಾಳ ಆಜ್ಞಾರ್ಥಕ ರೂಪದಲ್ಲಿರುತ್ತದೆ (ವ. 17ರ ಮೇಲಿನ ಚರ್ಚೆಯನ್ನು ನೋಡಿರಿ). ವರ್ತಮಾನಕಾಲ ರೂಪವು ಒಂದು ಕಾಲಾವಧಿಯ ತನಕ ಮುಂದುವರೆಯುವ ಕ್ರಿಯೆಯ ಸಾಧ್ಯತೆಯನ್ನು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಪೌಲನು ಹೀಗೆ ಹೇಳುತ್ತಿರಬಹುದಾಗಿದೆ, "ನಮಗೋಸ್ಕರ ಪ್ರಾರ್ಥಿಸುವದನ್ನು ಮುಂದುವರೆಸಿರಿ." "ಅವರು ಎಡೆಬಿಡದೆ (ಸಾಂತತ್ಯವಾಚಿ ಕಾಲರೂಪ) ಪ್ರಾರ್ಥಿಸಬೇಕು"[41] ಎಂದು ಬೇಡಿಕೊಂಡನೆಂಬುದಾಗಿ Morrisನು ಅಭಿಪ್ರಾಯ ಪಡುತ್ತಾನೆ.

ನಾವು ಪೌಲನ ಕುರಿತು ಯೋಚಿಸುವಾಗ, ಆತನು ಬಹಳಷ್ಟು ಬಲವುಳ್ಳವನಾಗಿದ್ದನು

ಮತ್ತು ತನಗೆ ತಾನೇ ಸಾಕಾದವನಾಗಿದ್ದು ಆತನಿಗೆ ಯಾವ ಸಮಸ್ಯೆಗಳೂ ಇರಲಿಲ್ಲ, ಅಥವಾ ಆತನಿಗೆ ಬೇರೆಯವರ ಪ್ರಾರ್ಥನೆಗಳ ಅವಶ್ಯಕತೆಯಿರಲಿಲ್ಲ ಎಂದು ನಂಬುತ್ತೇವೆ, ಆದರೆ ಈ ಭಾವನೆಯು ತಪ್ಪಾದದ್ದು. ಪೌಲನು ಖಂಡಿತವಾಗಿಯೂ ತನ್ನ ವಿಷಯದಲ್ಲಿ ಆ ರೀತಿಯಾಗಿ ಯೋಚಿಸಿಕೊಳ್ಳಲಿಲ್ಲ. 1 ಕೊರಿಂಥ 9:27ರಲ್ಲಿ, ತಾನು ಇತರರಿಗೆ ಬೋಧನೆಯನ್ನು ಮಾಡಿದ ಮೇಲೆ ಸ್ವತಃಹ ತಾನೇ ಬಹುಮಾನಕ್ಕೆ ಅಯೋಗ್ಯನಾಗಿಬಾರದೆಂಬುದಕ್ಕೋಸ್ಕರ ತನ್ನ ಮೈಯನ್ನು (ದೇಹವನ್ನು) ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ ಎಂದು ಮುಚ್ಚುಮರೆಯಿಲ್ಲದೆ ಅರಿಕೆ ಮಾಡುತ್ತಾನೆ. 2 ಕೊರಿಂಥ 7:8ರಲ್ಲಿ, ತಾನು ಕೊರಿಂಥದವರೊಂದಿಗೆ ಅತಿ ಕಠಿಣವಾಗಿ ನಡಕೊಂಡನೇನೋ ಎಂದು ಒಂದು ಹಂತದಲ್ಲಿ ಹೆದರಿದ್ದನೆಂಬುದನ್ನು ತೋರ್ಪಡಿಸುತ್ತಾನೆ. ತಾನು ಅವರ ಪರಿಸ್ಥಿತಿಯನ್ನು ಸಮರ್ಪಕವಾದ ದಾರಿಯಲ್ಲಿ ನಿಭಾಯಿಸಿದನೋ ಇಲ್ಲವೋ ಎಂದು ಸಂಶಯಗೊಂಡಿದ್ದನು. ಆತನಿಗೆ ತನ್ನ ವೈಯಕ್ತಿಕ ಶೋಧನೆಗಳನ್ನು ಎದುರಿಸುವದಕ್ಕೂ ಕರ್ತನಿಗಾಗಿ ತನ್ನ ಕೆಲಸವನ್ನು ನೆರವೇರಿಸುವದಕ್ಕೂ ಅವರ ಪ್ರಾರ್ಥನೆಗಳ ಅಗತ್ಯವಿತ್ತು. William Barclay ಹೀಗೆ ಹೇಳುತ್ತಾನೆ:

> ಎಲ್ಲಾ ದೇವಜನರಲ್ಲಿಯೇ ಅತ್ಯಂಥ ಶ್ರೇಷ್ಠ ದೇವಮನುಷ್ಯನಾದವನೊಬ್ಬನು ಅತ್ಯಂಥ ದೀನರಾದ ಕ್ರೈಸ್ತರ ಪ್ರಾರ್ಥನೆಗಳ ಮೂಲಕವಾಗಿ ಬಲಪಡಿಸಲ್ಪಟ್ಟೆನು ಎಂದು ಭಾವಿಸಿಕೊಂಡಿದ್ದು ನಿಜಕ್ಕೂ ಒಂದು ಆಶ್ಚರ್ಯವಾದ ಕಾರ್ಯವೇ. ಒಮ್ಮೆ ತನ್ನ ದೇಶವು ಒದಗಿಸಬಹುದಾದ ಅತ್ಯಂಥ ಉನ್ನತವಾದ ಹುದ್ದೆಗೆ ಚುನಾಯಿಸಲ್ಪಟ್ಟಿದ್ದ ಒಬ್ಬ ದೊಡ್ಡ ಗಣ್ಯ ವ್ಯಕ್ತಿಗೆ, ಆತನ ಇಬ್ಬರು ಮಿತ್ರರ ಶುಭಾಶಯಗಳನ್ನು ಕೋರುತ್ತಾರೆ, ಆಗ ಆತನು ತಕ್ಷಣವೇ ಹೀಗೆ ಹೇಳಿದನು, "ನನಗೆ ನಿಮ್ಮ ಶುಭಾಶಯಗಳನ್ನು ಕೊಡಬೇಡರಿ; ನಿಮ್ಮ ಪ್ರಾರ್ಥನೆಗಳನ್ನು ಕೊಡಿರಿ." ಪೌಲನ ದೃಷ್ಟಿಯಲ್ಲಾದರೋ, ಪ್ರಾರ್ಥನೆಯು ಒಂದು ಬಂಗಾರದ ಸರಪಣಿಯಾಗಿದ್ದು ಅದರಲ್ಲಿ ಆತನು ಬೇರೆಯವರಿಗಾಗಿ ಪ್ರಾರ್ಥಿಸುತ್ತಿದ್ದನು ಮತ್ತು ಬೇರೆಯವರು ಆತನಿಗಾಗಿ ಪ್ರಾರ್ಥಿಸುತ್ತಿದ್ದರು.[42]

**ವಚನ 26.** ಅಂತಿಮ ಮಾತುಗಳಲ್ಲಿ, ನಾವು **ಪವಿತ್ರವಾದ ಮುದ್ದಿಟ್ಟು** ವಂದಿಸಿರಿ ಎಂಬ ಪೌಲನ ಹೇಳಿಕೆಯನ್ನು ಕಾಣುತ್ತೇವೆ. ಒಂದು ಪವಿತ್ರವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ ಎಂಬ ಬುದ್ಧಿವಾದವನ್ನು ಪೌಲನು ಅನೇಕ ಸಾರಿ ಕೊಟ್ಟಿರುತ್ತಾನೆ: ಒಂದು ಸಾರಿ ರೋಮಾಪುರದಲ್ಲಿನ ಸಹೋದರರಿಗೆ ಹೇಳುತ್ತಾನೆ (ರೋಮಾ 16:16), ಮತ್ತು ಎರಡು ಸಾರಿ ಕೊರಿಂಥದಲ್ಲಿರುವ ಸಹೋದರರಿಗೆ ಹೇಳುತ್ತಾನೆ (1 ಕೊರಿಂಥ 16:20; 2 ಕೊರಿಂಥ 13:12). ಪೇತ್ರನು ಸಹ ಆಸ್ಯ ಸೀಮೆಯ ವಿವಿಧ ಭಾಗಗಳಲ್ಲಿದ್ದ ಸಹೋದದರಿಗೆ ಬರೆಯುವ ವೇಳೆ "ಪ್ರೀತಿಯಿಂದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ" ಎಂದು ಅವರಿಗೆ ಹೇಳುವ ಮೂಲಕ ಆತನು ನಿಸ್ಸಂಶಯವಾಗಿಯೂ ಅದೇ ರೀತಿಯ ವಂದಿಸುವಿಕೆಯ ಕುರಿತು ಮಾತಾಡುವವನಾಗಿದ್ದಾನೆ (1 ಪೇತ್ರ 5:14). ಆದದರಿಂದ, ಅದು ಅಪೊಸ್ತಲರ ಕಾಲದಲ್ಲಿ ಆಸ್ಯ ಸೀಮೆ, ಗ್ರೀಸ್, ಮತ್ತು ಇಟಲಿ ದೇಶಗಳಲ್ಲಿ ಬಳಕೆಯಲ್ಲಿತ್ತೆಂಬುದನ್ನು ನಾವು ಕಾಣಬಹುದಾಗಿದೆ. ಅದು ಕ್ರೈಸ್ತತ್ವವು ಉದಯವಾಗುವ ಮುಂಚೆ ರೋಮನ್ ಜಗತ್ತಿನಲ್ಲಿ ಸಂಬಂಧಿಕರು ಮತ್ತು ನಿಟಕ ಸ್ನೇಹಿತರು ಒಬ್ಬರನ್ನೊಬ್ಬರು ವಂದಿಸಿಕೊಳ್ಳುತ್ತಿದ್ದ ಒಂದು

ಸಾಮಾನ್ಯವಾದ ಪದ್ಧತಿಯಾಗಿತ್ತು. ಅದು "ರಬ್ಬಿಗಳು ವಾಡಿಕೆಯಂತೆ ಪರಸ್ಪರ ವಂದಿಸಿಕೊಳ್ಳುತ್ತಿದ್ದ ರೀತಿಯಾಗಿತ್ತು"[43] ಎಂದು Robertson ಹೇಳುತ್ತಾನೆ. ಹೇಗೂ, ಆ ಭಾಗದ ಜಗತ್ತಿನಲ್ಲಿ ಖಂಡಿತವಾಗಿಯೂ ಕೇವ ರಬ್ಬಿಗಳಿಗಷ್ಟೇ ಸೀಮಿತವಾಗಿರಲಿಲ್ಲ.

ಪೌಲ ಮತ್ತು ಪೇತ್ರರು ಒಂದು "ಕ್ರೈಸ್ತೀಯ ವಂದಿಸುವಿಕೆ"ಯನ್ನು ಹುಟ್ಟುಹಾಕುವವರಾಗಿರಲಿಲ್ಲ, ಅವರು ಈಗಾಗಲೇ ಬಳಕೆಯಲ್ಲಿದ್ದ ಒಂದು ವಂದಿಸುವಿಕೆಯ ಪದ್ಧತಿಯನ್ನು ತೆಗೆದುಕೊಳ್ಳುತ್ತಿದ್ದಾರೆ ಮತ್ತು ಕ್ರೈಸ್ತನು ಅದನ್ನು ಬಳಸುವಾಗ ಅದು "ಪವಿತ್ರ," ಅಥವಾ ಯಥಾರ್ಥವಾಗಿರುವಂತೆ ನೋಡಿಕೊಳ್ಳಬೇಕು, ಅಥವಾ ಪೇತ್ರನು ಹೇಳುವ ಹಾಗೆ, ಅದು "ಪ್ರೀತಿಯಿಂದ" ಆಗಿರಬೇಕು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವರು ಒಬ್ಬ ಸಹೋದರನ ಎದುರಿಗೆ ಸ್ನೇಹಮಯವಾಗಿಯೂ ದಯೆಯಿಂದಲೂ ಮಾತಾಡಿ, ಆತನಿಗೆ ಮುದ್ದಿಟ್ಟು, ಅನಂತರದಲ್ಲಿ ಆತನ ಬೆನ್ನ ಹಿಂದೆ ಆತನ ಬಗ್ಗೆ ನಕಾರಾತ್ಮಕವಾಗಿ ಮಾತಾಡುವದನ್ನು ಮಾಡಬಾರದಿತ್ತು. ಅಂತಹದ್ದು ಅಪವಿತ್ರವಾದ ಮುದ್ದು, ಯೂದನು ಕ್ರಿಸ್ತನಿಗೆ ಕೊಟ್ಟಂಥ ಮುದ್ದಿನ ಹಾಗೆಯೇ ಆಗುವದು (ಮತ್ತಾಯ 26:49). Morrisನು ಅಭಿಪ್ರಾಯ ಪಟ್ಟದ್ದೇನೆಂದರೆ, "ಕಾಲಕ್ರಮೇಣದಲ್ಲಿ ಪುರುಷರು ಮತ್ತು ಸ್ತ್ರೀಯರು ಒಬ್ಬರಿಗೊಬ್ಬರು ಮುದ್ದಿಟ್ಟು ವಂದಿಸಿಕೊಳ್ಳುತ್ತಿದ್ದರು, ಅರ್ಥವಾಗುವಂತೆ ಇದು ಇಷ್ಟವಾಗದಂಥ ದೃಶ್ಯಗಳಿಗೆ ದಾರಿ ಮಾಡಿತ್ತು,"[44] ಇದರ ಕಾರಣದಿಂದಾಗಿ ಮುದ್ದು ಪವಿತ್ರವಾದದ್ದಾಗಿರಬೇಕು ಎಂಬುದನ್ನು ಪೌಲನು ಒತ್ತಿ ಹೇಳುವಂತಾಗಿತ್ತು.

ಆತನು ತನ್ನ ಪರವಾಗಿ **ಸಹೋದರರೆಲ್ಲರನ್ನೂ ವಂದಿಸಿರಿ** ಎಂದು ಅವರನ್ನು ಕೇಳಿಕೊಳ್ಳುತ್ತಾನೆ. ಸಹೋದರ"ರೆಲ್ಲರನ್ನೂ," ನೈತಿಕವಾಗಿ ಅಸಡ್ಡೆಯಿಲ್ಲಿ (4:1) ಮತ್ತು ಪೋಲಿಗಳಾಗಿ ತಿರುಗಾಡುವವರ (4:1, 11, 12), ಎಲ್ಲರನ್ನೂ ವಂದಿಸಬೇಕಿತ್ತು. ಆತನು ಬಲಹೀನರನ್ನು ಈಗಲೂ ಪ್ರೀತಿಸುವವನಾಗಿದ್ದನು ಮತ್ತು ಅವರು ಪಶ್ಚಾತ್ತಾಪ ಪಡುವರೆಂದು ನಿರೀಕ್ಷಿಸಿದ್ದನು. ಬಹಳಷ್ಟು ಇತರ ವಾಕ್ಯಭಾಗಗಳಲ್ಲಿ, ತಮ್ಮ ಪರವಾಗಿಯೇ "ಒಬ್ಬರನ್ನೊಬ್ಬರು" ಮಮತೆಯಿಂದಲೂ ಯಥಾರ್ಥದಿಂದಲೂ ವಂದಿಸಿಕೊಳ್ಳಬೇಕೆಂದು ಕ್ರೈಸ್ತರಿಗೆ ಹೇಳಲಾಗಿರುತ್ತದೆ.

ಈ ಬೋಧನೆಯನ್ನು ನಮ್ಮ ಹಸ್ತ ಲಾಘವ ಪದ್ಧತಿಗೆ ಅನ್ವಯಿಸಿಕೊಳ್ಳುವದಾದರೆ, ಪೌಲನು ನಮಗೆ ಅದನ್ನು "ಪವಿತ್ರ"ಗೊಳಿಸಿರಿ ಮತ್ತು "ಪ್ರೀತಿಯಿಂದ" ಮಾಡಿದ ಯಥಾರ್ಥವಾದ ಹಸ್ತ ಲಾಘವವನ್ನಾಗಿ ಮಾಡಿರಿ, ಒಬ್ಬ ವ್ಯಕ್ತಿಯ ಹಸ್ತ ಲಾಘವ ಮಾಡಿದ ಬಳಿಕ ಆತನಿಗೆ ಸತತವಾಗಿ ಮತ್ತು ಸಾಂಕೇತಿಕವಾಗಿ "ಬೆನ್ನಿಗೆ ಚೂರಿ ಹಾಕುವ" ಲೋಕದ ಜನರಂತೆ ಮಾಡುವದರಿಂದ ದೂರವಿರಿ ಎಂಬದಾಗಿ ಹೇಳಿರುತ್ತಿದ್ದನೆಂದು ತಿಳುಕೊಳ್ಳುತ್ತೇವೆ.

**ವಚನ 27.** ಥೆಸಲೋನಿಕದ ಸಭೆಯಲ್ಲಿರುವ ಪ್ರತಿಯೊಬ್ಬ ಸಹೋದರನೂ ತನ್ನ ಪತ್ರಿಕೆಯನ್ನು ಓದಿ ಕೇಳಿಸಿಕೊಳ್ಳಬೇಕೆಂದು ಅತ್ಯಂಥ ಕಳಕಳಿಯುಳ್ಳವನಾಗಿ ಹೀಗೆ ಹೇಳುತ್ತಾನೆ, ಈ ಪತ್ರಿಕೆಯನ್ನು ಓದಿ ಹೇಳಬೇಕೆಂದು **ನಿಮಗೆ ಕರ್ತನ ಆಣೆ ಇಡುತ್ತೇನೆ** (ವಿಧಿಸುತ್ತೇನೆ). ಇದೊಂದು ತೀಕ್ಷ್ಣವಾದ ಭಾಷೆಯಾಗಿರುತ್ತದೆ. ಪೌಲನು ಸಾರಭೂತವಾಗಿ ಹೇಳಿದ್ದೇನೆಂದರೆ, "ನಾನು ನಿಮ್ಮನ್ನು ಒಂದು ಆಣೆಗೆ ಒಳಪಡಿಸುತ್ತೇನೆ," ಅಥವಾ

ಶಾಸ್ತ್ರೋಕ್ತವಾದ ಹೊಣೆಯಾಗಿಸುತ್ತೇನೆ, "ಕರ್ತನ ಮೂಲಕ," ಅಥವಾ ಕರ್ತನೇ ನಮ್ಮ ಸಾಕ್ಷಿಯಾಗಿ ಮಾಡುತ್ತೇನೆ, ಅದು ನಿಮ್ಮನ್ನು ಎಲ್ಲಾ ಸಹೋದರರಿಗೂ ಈ ಪತ್ರಿಕೆಯನ್ನು ಓದಿ ತಿಳಿಸುವಂತೆ ಹಂಗಿನಲ್ಲಿಡುತ್ತದೆ ಎಂಬದೆ. Robertsonನ ಪ್ರಕಾರವಾಗಿ, ἐνορκίζω (*enorkizō*) ಎಂಬುದರಿಂದ ಬಂದಿರುವ "ವಿಧಿಸುತ್ತೇನೆ" ಎಂಬುದು "ಹಳೆಯ ὁρκίζω (*horkizo*) (ಮಾರ್ಕ 5:7), ಒಬ್ಬನನ್ನು ಆಣೆಗೆ ಒಳಪಡಿಸುವದು ಎಂಬುದರ ತಡವಾದ ಸಂಯುಕ್ತ ಪದವಾಗಿದೆ."[45] ಪೌಲನು ಇಲ್ಲಿ ಬಳಸಿರುವ "ನಿಮಗೆ" ಎಂಬುದು ಸಭೆಯಲ್ಲಿ ಪ್ರತಿಯೊಬ್ಬ ಸಹೋದರರನ್ನು ಒಳಗೊಂಡಿರುತ್ತದೆ ಆದರೆ, ತೋರಿ ಬರುವಂತೆ, 12ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ನಾಯಕರಿಗೆ ಇನ್ನು ಹೆಚ್ಚಾದ ಹೊಣೆಗಾರಿಕೆಯಿರುವದು.

ಪ್ರತಿಯೊಬ್ಬ ಸಹೋದರನು ತನ್ನ ಪತ್ರಿಕೆಯೊಂದಿಗೆ ವೈಯಕ್ತಿಕ ಸಂಪರ್ಕವನ್ನು ಹೊಂದಬೇಕಾದ ಅವಶ್ಯಕತೆಯು ಪೌಲನಿಗೆ ಬಹಳ ಪ್ರಾಮುಖ್ಯವಾಗಿತ್ತು. ಆತನು 1 ಕೊರಿಂಥ 14:37ರಲ್ಲಿ ಹೇಳಿದ ಹಾಗೆ, ಆತನು ಅವರಿಗೆ ಬರೆಯುತ್ತಿರುವಂಥದ್ದು "ಕರ್ತಕ ವಿಧಿಯೇ" ಆಗಿತ್ತು, ಮತ್ತು ಪ್ರತಿಯೊಬ್ಬ ಕ್ರೈಸ್ತನಿಗೂ ಅದನ್ನು ವೈಯಕ್ತಿಕವಾಗಿ ಓದುವ ಅಥವಾ ಕೇಳಿಸಿಕೊಳ್ಳುವ ಜವಾಬ್ದಾರಿಯಿತ್ತು. ಈ ಪತ್ರಿಕೆಯು ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಅತ್ಯಂಥ ಆರಂಭಿಕ ಪತ್ರಿಕೆಗಳಲ್ಲೊಂದಾಗಿದ್ದು, ಸುಮಾರು ಕ್ರಿ.ಶ. 51ರಲ್ಲಿ ಬರೆಯಲ್ಪಟ್ಟಿತು, ಮತ್ತು ಕ್ರಿ.ಶ. 100ರಲ್ಲಿ ಯೋಹಾನನಿಂದ ಬರೆಯಲ್ಪಟ್ಟ ಪ್ರಕಟನೆ ಪುಸ್ತಕದ ರೀತಿಯಲ್ಲಿಯೇ ಈ ತತ್ವವನ್ನು ಒತ್ತಿ ಹೇಳುತ್ತದೆ. ವಾಸ್ತವಾಂಶದಲ್ಲಿ, ಯೋಹಾನನು ಆ ಪತ್ರಿಕೆಯಲ್ಲಿ ಹೀಗೆ ಬರೆದನು, "ಈ ಪ್ರವಾದನಾವಾಕ್ಯಗಳನ್ನು ಕೇಳುವವರು . . . ಧನ್ಯರು" (ಪ್ರಕಟನೆ 1:3). ಕೊಲೊಸ್ಸೆ 4:16ರಲ್ಲಿ, ಪೌಲನು ಪುನಃ ಆ ಪತ್ರಿಕೆಯನ್ನು ಓದುವಂತೆ ಆಜ್ಞಾಪಿಸುತ್ತಾನೆ.

ಪೌಲನು ಇಲ್ಲಿ ಬಳಸಿದ, **ಓದಿ** ಎಂಬ ಪದವು ಸತತವಾಗಿ "ಸಾರ್ಜಜನಿಕವಾಗಿ ಓದಿರಿ" ಎಂಬರ್ಥವನ್ನು ಕೊಡುವ ಪದವಾಗಿತ್ತು. ಈ ಸನ್ನಿವೇಶದಲ್ಲಿ ಆ ಅರ್ಥವು ಇರುತ್ತದೋ ಇಲ್ಲವೋ ಎಂಬುದು ಒಂದು ತೆರೆದ ಪ್ರಶ್ನೆಯಾಗಿದೆ. ಆತನು ಓದಬೇಕೆಂದು ಆಜ್ಞಾಪಿಸಿರಬಹುದಾದ ಅತ್ಯಂಥ ತಾರ್ಕಿಕವಾದ ಸ್ಥಳವೆಂದರೆ ಕರ್ತನ ದಿನದಲ್ಲಿ ಕೂಡಿ ಬರುತ್ತಿದ್ದ ಕ್ರೈಸ್ತೀಯ ಸಭೆಯಲ್ಲಿಯೇ ಆಗಿರುತ್ತದೆ. ಪೋಲಿಗಳಾಗಿ ತಿರುಗಾಡುತ್ತಿದ್ದ ಸಹೋದರರು (4:11, 12) ಅದನ್ನು ಕೇಳಿಸಿಕೊಳ್ಳಬೇಕೆಂದು, ಮ್ತು ನೈತಿಕವಾಗಿ ಅಸಡ್ಡೆಯಿಂದಿದ್ದ ಸಹೋದರರು ಅದರ ಸಂಪರ್ಕಕ್ಕೆ ಬರಬೇಕೆಂದು (4:1-8) ಪೌಲನು ಖಾತ್ರಿ ಪಡಿಸಿಕೊಳ್ಳಲು ಬಯಸಿದ್ದನು. ಆತನು ಬರೆದ ಮಾತುಗಳು ಅವರ ಸಮಸ್ಯೆಗಳಿಗೆ ಪವಿತ್ರಾತ್ಮನು ನೀಡಿದ್ದ ಪರಿಹಾರೋಪಾಯ ಆಗಿತ್ತು, ಮತ್ತು ಪೌಲನ ದಿನಗಳಲ್ಲಿ ನಡೆಯುತ್ತಿದ್ದ ಪ್ರಕಾರ, ಆ ಮಾತುಗಳನ್ನು ವಿಕಾರಗೊಳಿಸಿದ ಆವೃತ್ತಿಯಿಂದ ಕೇಳಿಸಿಕೊಳ್ಳುವದಕ್ಕೆ ಬದಲಾಗಿ, ಸ್ವತಃ ಪವಿತ್ರಾತ್ಮನ ಮಾತುಗಳನ್ನೇ ಅವರು ಕೇಳಿಸಿಕೊಳ್ಳಬೇಕೆಂಬುದು ಆತನ ಇಚ್ಛೆಯಾಗಿತ್ತು (2 ಥೇಸಲೋನಿಕ 2:2; 3:17 ರೊಂದಿಗೆ ಹೋಲಿಸಿರಿ). ಈ ದಿನದಲ್ಲಿ ಸಹ ದೇವರ ವಾಕ್ಯವು ವಿಕಾರಗೊಳಿಸಲ್ಪಡಬಹುದಾಗಿದೆ.

**ವಚನ 28.** ಇದು ಪೌಲನು ಸಾಮಾನ್ಯವಾಗಿ ತನ್ನ ಪತ್ರಿಕೆಯನ್ನು ಅಂತ್ಯಗೊಳಿಸುವವನಾಗಿ ಬಳಸುತ್ತಿದ್ದ ಮುಕ್ತಾಯದ ಪ್ರಾರ್ಥನೆಯಾಗಿರುತ್ತದೆ.

ವಾಸ್ತವಿಕದಲ್ಲಿ, 2 ಕೊರಿಂಥ 13:14ರಲ್ಲಿ ಆತನು ಹೀಗೆ ಹೇಳುತ್ತಾನೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ." ಕ್ರಿಸ್ತನು ತನ್ನ ಪ್ರೀತಿಯ ಕೃಪಾಕಟಾಕ್ಷದಿಂದ ಅನುಗ್ರಹಿಸಬಹುದಾದ ಎಲ್ಲಾ ಆಶೀರ್ವಾದಗಳನ್ನು ಥೆಸಲೋನಿಕದವರು ಹೊಂದಿಕೊಳ್ಳಬೇಕೆಂದು ಆತನು ಪ್ರಾರ್ಥಿಸಿದನು.

ಮೂಲಭೂತವಾಗಿ, **ಕೃಪೆ** (χάρις, *charis*, "ದಯೆ," "ಕೃಪೆ," ಅಥವಾ "ಕೃಪಾಕಟಾಕ್ಷ") ಎಂದರೆ ಸಂತೋಷವನ್ನುಂಟು ಮಾಡುವಂತದ್ದು. ನಾವು ಯಾವುದನ್ನು ಹೊಂದಿಕೊಳ್ಳುವದಕ್ಕೆ ಅಯೋಗ್ಯರೋ, ಅಥವಾ ನಾವು ಯಾವುದಕ್ಕೆ ಅನರ್ಹರೋ ಅದನ್ನು ದೇವರು ನಮಗೆ ಕೊಡುವಾಗ ಸಂತೋಷವು ಬರುತ್ತದೆ. ನಿಶ್ಚಯವಾಗಿಯೂ ಪೌಲನು ತಾನು ಕ್ರೈಸ್ತರನ್ನು ಹಿಂಸಿಸುವದರಲ್ಲಿ ಮಾಡಿದ ಪಾಪದ ಕುರಿತು ಬಲವಾದ ಪ್ರಜ್ಞೆಯಿದ್ದ ಕಾರಣದಿಂದಾಗಿ ದೇವರ ಕೃಪೆಯ ಕುರಿತಾಗಿ ಅಷ್ಟೊಂದು ಮಾತಾಡಿರಬಹುದಾಗಿದೆ. ಆತನು "ಪಾಪಿಗಳಲ್ಲಿ ಅತಿ ಕೆಟ್ಟ ಪಾಪಿ" (1 ತಿಮೊಥೆ 1:15; NIV) ಆಗಿದ್ದಾಗ್ಯೂ, ಆತನು ದೇವರ ಕನಿಕರವನ್ನು ಹೊಂದಿದನು ಮತ್ತು ದೇವರ ಸಂದೇಶವನ್ನು ಬೇರೆಯವರಿಗೆ ಸಾರುವವನಾಗಿ ಸಹ ದೇವರಿಂದ ಆರಿಸಿಕೊಳ್ಳಲ್ಪಟ್ಟಿದ್ದನು. ಈ ವಿಧವಾದ ದಯೆಯನ್ನು, ಖಂಡಿತವಾಗಿಯೂ ನಂಬಿಕೆ ಮತ್ತು ವಿಧೇಯತೆಯನ್ನು ತೋರಿಸುವ ಪಾಪಿಗಳ ಮೇಲೆ ಸುರಿಸುತ್ತಾನೆ. ಅದು **ನಮ್ಮ ಕರ್ತನಾದ ಯೇಸು ಕ್ರಿಸ್ತನ** ಮೂಲಕ ಕೊಡಲ್ಪಡುತ್ತದೆ, ಆತನು ಮಾತ್ರವೇ ಮಾರ್ಗವು, ಸತ್ಯವು, ಮತ್ತು ಜೀವವು ಆಗಿದ್ದಾನೆ. ವಾಸ್ತವಾಂಶದಲ್ಲಿ, ಕ್ರಿಸ್ತನ ಮೂಲಕ ಹೋಗುವ ಹೊರತು ಯಾವನೂ ತಂದೆಯ ಬಳಿಗೆ ಬರಲಾರನು (ಯೋಹಾನ 14:6). Williams ಹೀಗೆ ಅಭಿಪ್ರಾಯ ಪಡುತ್ತಾನೆ,

> ಪೌಲನು ವೈಶಿಷ್ಟ್ಯವಾಗಿ ಕೃಪೆಯನ್ನು ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸಂಬಂಧಗೊಳಿಸುತ್ತಾನೆ (2 ಥೆಸಲೋನಿಕ 1:2, 12; 2:16; 3:18). ಆತನು ತನ್ನ ಪತ್ರಿಕೆಗಳನ್ನು ಬರೆಯುವಂತೆ ಉಕ್ತಲೇಖಕರನ್ನು ನೇಮಿಸಿಕೊಳ್ಳುತ್ತಿದ್ದದ್ದು ವಾಡಿಕೆಯಾಗಿತ್ತು, ಆದರೆ ಈ ಹಂತಕ್ಕೆ ಬಂದ ಕೂಡಲೆ ಆತನ ಲೇಖನಿಯನ್ನು ವಶಕ್ಕೆ ತೆಗೆದುಕೊಂಡು ಅಂತಿಮ ಮಾತುಗಳನ್ನು ತನ್ನ ಸ್ವಂತ ಕೈಗಳಲ್ಲಿ ಬರೆಯುತ್ತಿದ್ದನು (cf. 2 ಥೆಸಲೋನಿಕ 3:17; ಗಲಾತ್ಯ 6:11). 27ನೇ ವಚನದ ಉತ್ತಮ ಪುರುಷ ಏಕವಚನವು ಆ ಬದಲಾವಣೆಯ ಸುಳಿವು ನೀಡಬಹುದಾಗಿದೆ.[46]

ತನ್ನಷ್ಟು ದುರ್ಗತಿಗೊಳಗಾದ ವ್ಯಕ್ತಿಯೊಬ್ಬನನ್ನು ತೆಗೆದುಕೊಂಡು ದೇವರು ಆತನ ಮೇಲೆ "ದೇವರ ಉಚಿತ ವರವನ್ನು," ಅಂದರೆ ನಿತ್ಯಜೀವವನ್ನು ಅನುಗ್ರಹಿಸಿದ್ದರ ಬಗ್ಗೆ ಅತ್ಯಾಶ್ಚರ್ಯಪಡುವದನ್ನು ಪೌಲನು ನಿಲ್ಲಿಸುವದಕ್ಕಾಗಲಿಲ್ಲ (ರೋಮಾ 6:23). ಅದೇ ಕೃಪೆಯು ಆತನ ಥೆಸಲೋನಿಕದ ಸಹೋದರರ**ೊಂದಿಗೆ** ಸಹ ಇರಬೇಕೆಂದು ಆತನು ಪ್ರಾರ್ಥಿಸುತ್ತಾನೆ.

James Denney ಹೀಗೆ ಹೇಳುತ್ತಾನೆ,

> ದೇವರು ನಮಗೆ ಏನೆಲ್ಲಾ ಹೇಳಬೇಕಾದದ್ದ-ಮತ್ತು ಹೊಸ ಒಡಂಬಡಿಕೆಯ ಎಲ್ಲಾ

ಪತ್ರಿಕೆಗಳಲ್ಲಿ ಹೃದಯವನ್ನು ಶೋಧಿಸಿ ಅದು ನಡುಗುವಂತೆ ಮಾಡುವ ಸಂಗತಿಗಳಿದ್ದಾವೆ-ಕೃಪೆಯೊಂದಿಗೆ ಆರಂಭಗೊಂಡು ಕೃಪೆಯಲ್ಲಿಯೇ ಅಂತ್ಯಗೊಳ್ಳುತ್ತದೆ. . . . ದೇವರು ಯೇಸು ಕ್ರಿಸ್ತನಲ್ಲಿ ಮನುಷ್ಯನಿಗೆ ಏನೆಲ್ಲಾ ಆಗಿರುತ್ತಾನೋ ಅದು ಇದರಲ್ಲಿ ಸಾರಾಂಶಗೊಳಿಸಲ್ಪಟ್ಟಿರುತ್ತದೆ: ಆತನ ಎಲ್ಲಾ ದಯಾಪರತೆ ಮತ್ತು ಸೌಂದರ್ಯ, ಆತನ ಎಲ್ಲಾ ಕೋಮಲತೆ ಮತ್ತು ತಾಳ್ಮೆ, ಆತನ ಪ್ರೀತಿಯ ಪರಿಶುದ್ಧ ಮನೋಭಿಲಾಷೆ, ಇದೆಲ್ಲವೂ ಕೃಪೆಯಲ್ಲಿ ಒಗ್ಗೂಡಿಸಲ್ಪಟ್ಟಿದೆ. ಒಂದು ಆತ್ಮವು ಕರ್ತನಾದ ಯೇಸು ಕ್ರಿಸ್ತನ ಕೃಪೆಯು ತನ್ನೊಂದಿಗೆ ಇರಬೇಕು ಎಂಬದಕ್ಕಿಂತಲೂ ಬೇರೆ ಇನ್ನಾವ ಹಾರೈಕೆಯನ್ನು ಮಾಡಿಕೊಳ್ಳಬಹುದು?[47]

## ಅನ್ವಯಿಸುವಿಕೆ

ಈ ಅಧ್ಯಾಯದಲ್ಲಿ, ಪೌಲನು ತಾನು ಪತ್ರಿಕೆಯ ಮುಂಚಿನ ಭಾಗದಲ್ಲಿ ಆರಂಭಿಸಿದ್ದ ಸಿದ್ಧಾಂತಿಕ ಬೋಧನೆಯ ಕಾರ್ಯರೂಪದ ಅನ್ವಯಿಸುವಿಕೆಯನ್ನು ಮುಂದುವರೆಸುತ್ತಾನೆ.

4ನೇ ಅಧ್ಯಾಯದ ಕಡೇ ಪರಿಚ್ಛೇದದಲ್ಲಿ, ಯೇಸುವು ಹಿಂದಿರುಗಿ ಬರುವಾಗ ಯೇಸುವಿನಲ್ಲಿ ಸತ್ತಿರುವವು ಕೈ ಬಿಡಲ್ಪಡುವದಿಲ್ಲ ಎಂಬುದನ್ನು ಪೌಲನು ಒತ್ತಿ ಹೇಳಿದನು. ಆದದರಿಂದ, ಈ ಅಧ್ಯಾಯದ ಆರಂಭಿಕ ಭಾಗದಲ್ಲಿ, ಆತನು ಕ್ರಿಸ್ತನ ಬರೋಣದ ಸಮಯದ ಕುರಿತು ಮತ್ತು ಈ ಬರೋಣವು ಕ್ರೈಸ್ತೀಯ ಜೀವನದ ಮೇಲೆ ಬೀರುವ ಸೂಚ್ಯಾರ್ಥಗಳೇನೆಂಬುದರ ಕುರಿತು ಚರ್ಚೆಯನ್ನು ಮುಂದುವರೆಸುತ್ತಾನೆ.

### ಯೇಸುವು ಯಾವಾಗ ಬರುವನು? (5:1-3)

ಪೌಲನು ಮುಂಚಿನ ಚರ್ಚೆಯನ್ನ ಮನಸ್ಸಿನಲ್ಲಿಟ್ಟುಕೊಂಡವರಾಗಿ, “ಕರ್ತನು ಯಾವಾಗ ಹಿಂದಿರುಗಿ ಬರುವನು?” ಎಂದು ಕೇಳುವದು ಸಹಜವಾಗಿರುತ್ತದೆ. ಪೌಲನು ಆ ಪ್ರಶ್ನೆಗೆ ಉತ್ತರವನ್ನು ಕೊಡದೆಯೇ ಮುಂದಕ್ಕೆ ಸಾಗಿದ್ದನು, ಯಾಕೆಂದರೆ ಆತನು ಅದರ ಕುರಿತು ಥೆಸಲೋನಿಕದವರಿಗೆ ಮುಂಚೆಯೇ ತಿಳಿಯಪಡಿಸಿದ್ದನು. ಆತನು ಸಭೆಯನ್ನು ಸ್ಥಾಪಿಸುತ್ತಿರುವ ವೇಳೆ ಈ ಸತ್ಯವು ಅವರಿಗೆ ಸಾರಲ್ಪಟ್ಟಿತ್ತೆಂಬುದರಲ್ಲಿ ಸಂಶಯವೇ ಇರುವದಿಲ್ಲ. ಕರ್ತನ ಬರೋಣದ ಸಮಯದ ಕುರಿತು ಅವರಿಗೆ ಚೆನ್ನಾಗಿ ತಿಳಿದದೆ ಎಂಬುದಾಗಿ ಆತನು ಹೇಳಿದನು. ಪೌಲನು ಅವರಿಗೆ ಬೋಧಿಸಿದ್ದನಾದ್ದರಿಂದ ಥೆಸಲೋನಿಕದವರಿಗೆ ಅದು ಗೊತ್ತಾಗಿತ್ತು.

ಪೌಲನು ಆತನ ಬರೋಣದ ಸಮಯ ಕುರಿತು ಒಂದು ಸಾರಭೂತವಾದ ಸತ್ಯವನ್ನು ಮನದಟ್ಟ ಮಾಡಿಕೊಡುವದಕ್ಕಾಗಿ ಒಬ್ಬ ಕಳ್ಳನು ಬರುವ ರೀತಿಯ ದೃಷ್ಟಾಂತವನ್ನು ಬಳಸಿದನು. ಆತನ ಬಳಸಿದ ದೃಷ್ಟಾಂತವು ಆ ಬರೋಣವು ಏಕಾಏಕಿ ಮತ್ತು ಅನಿರೀಕ್ಷಿತವಾಗಿರುತ್ತದೆಂಬುದನ್ನು ಸೂಚಿಸುತ್ತದೆ. ಆತನು ಯಾವದೇ ಗಳಿಗೆಯಲ್ಲಾದರೂ ಬರಬಲ್ಲನೆಂಬುದನ್ನು ಹೊರತು ಪಡಿಸಿದರೆ ನಮಗೆ ಯಾವ ಮುನ್ಸೂಚನೆಯಾಗಿ ಅಥವಾ ಮುಂಚಿತ ಎಚ್ಚರಿಕೆಗಳಾಗಲಿ ಸಿಕ್ಕುವದಿಲ್ಲ.

ಕಳ್ಳನು ಹೇಗೋ ಬರುತ್ತಾನೋ ಹಾಗೆಯೇ ಕ್ರಿಸ್ತನು ಬರುವನೆಂಬುದನ್ನು ಪರಿಗಣಿಸುವಾಗ, ನಾವು ಹೇಗೆ ಜೀವಿಸಬೇಕಾಗಿರುತ್ತದೆ?

*ಒಂದು ಸಿದ್ಧತೆಯ ಸ್ಥಿತಿಯಲ್ಲಿ.* ನಾವು ಎಲ್ಲಾ ಸಮಯಗಳಲ್ಲಿಯೂ ಸಿದ್ಧರಾಗಿರಬೇಕು. ಕ್ರಿಸ್ತನು ಬರುವ ವೇಳೆ ನಮ್ಮನ್ನು ಸಮಯದ ತಿಳುವಳಿಕೆಯನ್ನು ನಮಗೆ ಮರೆಮಾಡುವ ಮೂಲಕ ದೇವರು ತನ್ನ ಮಹಾ ಜ್ಞಾನವನ್ನು ತೋರ್ಪಡಿಸುತ್ತಾನೆ. ನಮಗೆ ಖಚಿತವಾಗಿ ಗೊತ್ತಿದ್ದಿದ್ದರೆ, ನಾವು ಆತನ ಕೃಪೆಯನ್ನು ದುರುಪಯೋಗ ಮಾಡಿಕೊಳ್ಳಬೇಕೆಂಬ ಶೋಧನೆಗೊಳಗಾಗಬಹುದಾಗಿದೆ. ನಾವು ಕೇವಲ ಈ ಲೋಕವನ್ನು ದಾಟಿಕೊಂಡು ಹೋಗುತ್ತಿರುವ ಯಾತ್ರಿಕರು ಮಾತ್ರವೇ ಆಗಿದ್ದು ಯಾವದೇ ದಿನವು ನಮ್ಮ ಕಡೇ ದಿನವಾಗಿರಬಲ್ಲದು ಎಂಬದನ್ನು ಗ್ರಹಿಸಿಕೊಂಡವರಾಗಿ ಜೀವಿಸಬೇಕೆಂಬುದು ಆತನ ಬಯಕೆಯಾಗಿದೆ.

*ವಿಷಯಗಳ ಸ್ಥಿತಿಯ ಕುರಿತು ಲೋಕವು ಕೊಡಬಹುದಾದ ಯಾವದೇ ಸಮರ್ಥನೆಗಳನ್ನು ಅಲಕ್ಷಿಸುವದು.* ಜನರು ಹೀಗೆ ಹೇಳಿಕೊಳ್ಳುತ್ತಿದ್ದಾರೆ, "ನಾವು ಸಮಾಧಾನದಲ್ಲಿ ಜೀವಿಸುತ್ತಿದ್ದೇವೆ ಮತ್ತು ನಾವು ಯಾವ ವಿಷಯವಾಗಿಯೂ ಚಿಂತಿಸಬೇಕಿಲ್ಲ. ಅಸಹಜವಾದದ್ದೇನೂ ಸಂಭವಿಸುವದಕ್ಕೆ ಹೋಗುವದಿಲ್ಲ!" ಅವರ ಘೋಷನೆಯು ಸತ್ಯವನ್ನು ಸೃಷ್ಟಿಸುವದಿಲ್ಲವೆಂದು ನಮಗೆ ಗೊತ್ತಿದೆ. ನಾವು ಅವರು ಹೇಳುವದನ್ನು ಗಮನಕ್ಕೆ ತೆಗೆದುಕೊಳ್ಳಬಾರದು ಯಾಕೆಂದರೆ ಯಾವದೇ ದಿನವೂ ಅಂತ್ಯವನ್ನು ತರಬಲ್ಲದೆಂದು ನಾವು ಬಲ್ಲೆವು.

*"ದೇವರ ಚಿತ್ತವಾದರೆ" ಎಂದು ಹೇಳದೆ ಯಾವದೇ ದೀರ್ಘಕಾಲಿಕ ಯೋಜನೆಗಳನ್ನು ಹಾಕಿಕೊಳ್ಳದಿರುವದು.* ನಮಗೆ ಇನ್ನೊಂದು ದಿನವಾಗಲಿ ಅಥವಾ ಇನ್ನೊಂದು ನಿಮಿಷವಾಗಲಿ ಸಹ ವಾಗ್ದಾನ ಮಾಡಲ್ಪಟ್ಟಿರುವದಿಲ್ಲ. ತಾನು ಹಿಂದಿರುಗಿ ಬರುವೆನೆಂದು ಯೇಸು ನಮಗೆ ವಾಗ್ದಾನ ಮಾಡಿದ್ದಾನೆ (ಯೋಹಾನ 14:1-3), ಆದರೆ ಆ ಪುನರಾಗಮನದ ಗಳಿಗೆಯನ್ನು ಗುಪ್ತವಾಗಿರುವಂತೆ ಮರೆಮಾಡಿದ್ದಾನೆ. ಆತನ ಬರೋಣವು ಎಷ್ಟು ಆಕಸ್ಮಿಕ ಮತ್ತು ಅನಿರೀಕ್ಷಿತವಾಗಿರುತ್ತದೆಂಬುದನ್ನು ತಿಳಿಸುವದಕ್ಕೆ ಎರಡು ದೃಷ್ಟಾಂತಗಳು ಬಳಸಲ್ಪಟ್ಟಿವೆ: ರಾತ್ರಿಯಲ್ಲಿ ಬರುವ ಕಳ್ಳನು ಮತ್ತು ಗರ್ಭಿಣಿ ಸ್ತ್ರೀಗೆ ಬರುವ ಪ್ರಸವವೇದನೆ. ಯೇಸು ಯಾವದೇ ಗಳಿಗೆಯಲ್ಲಾದರೂ ಬರಬಲ್ಲನೆಂಬುದನ್ನು ಈ ಚಿತ್ರಗಳು ಸುವ್ಯಕ್ತವಾಗಿ ಘೋಷಿಸುತ್ತವೆ.

ಹಾಗಾದರೆ ನಾವು ಹೇಗೆ ಜೀವಿಸಬೇಕು? ನಾವೆಲ್ಲ ಈ ಲೋಕದಲ್ಲಿ ಯಾತ್ರಿಕರಾಗಿರತಕ್ಕದ್ದು, ನಮ್ಮ ರಕ್ಷಕನ ಪುನರಾಗಮನಕ್ಕಾಗಿ ಯಾವಾಗಲೂ ಸಿದ್ಧತೆಯಲ್ಲಿರಬೇಕು. ನಾವು "ಯೇಸು ನಿನ್ನೆ ಮರಣಿಸಿದನು, ಈ ಬೆಳಿಗ್ಗೆ ಜೀವಿತನಾಗಿ ಎದ್ದನು, ಮತ್ತು ಈ ರಾತ್ರಿಯಲ್ಲಿ ಬರುತ್ತಾನೇನೋ" ಎಂಬಂತೆ ಬಾಳಬೇಕು. EC

## ಅಂತ್ಯವನ್ನು ಎದುರು ನೋಡುವದು (5:1-3)

ಈ ಎರಡು ದೃಷ್ಟಾಂತಗಳು (ಕಳ್ಳನು ಏಕಾಏಕಿ ಕಾಣಿಸಿಕೊಳ್ಳುವದು ಮತ್ತು ಗರ್ಭಿಣಿಯಾಗಿರುವ ಸ್ತ್ರೀಗೆ ಬರುವ ಪ್ರಸವವೇದನೆ) ಯೇಸುವಿನ ಬರೋಣದ ಕುರಿತು ಎರಡು ಬೇರೆ ಬೇರೆ ಸತ್ಯಗಳನ್ನು ಒತ್ತಿ ಹೇಳುತ್ತವೆ. ಬಹುಶಃ ಅವುಗಳು ನಮಗೆ ತಿಳಿಯಬಹುದಾದ ಎರಡು ಅತ್ಯಂಥ ಪ್ರಾಮುಖ್ಯವಾದ ಸತ್ಯಗಳನ್ನು ಒತ್ತಿ ಹೇಳುತ್ತವೆ.

*ಆತನ ಬರೋಣದ ಅನಿರೀಕ್ಷತೆ.* ಕಳ್ಳನು ಬರುತ್ತಿದ್ದಾನೆಂಬದು ನಮಗೆ ಗೊತ್ತಿರುವದಾದರೆ, ನಾವು ಆತನಿಗೋಸ್ಕರ ಸಿದ್ಧವಾಗಿರುತ್ತೇವೆ. ಸ್ಪಷ್ಟವಾಗಿರುವ ಹಾಗೆ, ಆತನ ಬರೋಣದ ಗಳಿಗೆಯ ಕುರಿತ ಅನಿಶ್ಚಿತತೆಯನ್ನು ವ್ಯಕ್ತಪಡಿಸುವದಕ್ಕೆ ಈ ದೃಷ್ಟಾಂತವನ್ನು ಬಳಸಲಾಗಿರುತ್ತದೆ.

*ಆತನ ಬರೋಣದ ಸನ್ನಿಹಿತತೆ.* ಒಬ್ಬ ಗರ್ಭಿಣಿ ಸ್ತ್ರೀಯು ಫಕ್ಕನೆ ಪ್ರಸವವೇದನೆ ಅನುಭವಿಸುವದಕ್ಕೆ ಆರಂಭಿಸುತ್ತಾಳೆ. ಆಕೆಗೆ ಹೆರಿಗೆಯ ಕಾಲ ಬರುವದೆಂದು ಗೊತ್ತಿತ್ತು. ಹೆರಿಗೆಯು ಸನ್ನಿಹಿತವಾದದ್ದು. ಕಳ್ಳನ ಚಿತ್ರಣವು ಅನಿರೀಕ್ಷತೆಯನ್ನು ದೃಷ್ಟಾಂತ ಪಡಿಸುತ್ತದೆ, ಆದರೆ ಈ ದೃಷ್ಟಾಂತವು ಸನ್ನಿಹಿತತೆಯನ್ನು ತಿಳಿಯಪಡಿಸುತ್ತದೆ.

ಕ್ರಿಸ್ತನ ಬರೋಣದ ವಿಷಯದಲ್ಲಿ ಸಹ ಹೀಗೆಯೇ ಇರುವದು. ಲೋಕವು ಎಲ್ಲವೂ ಚೆನ್ನಾಗಿದೆ ಮತ್ತು ಯಾವ ಬದಲಾವಣೆಯು ಸಂಭವಿಸುವದಕ್ಕೆ ಹೋಗುವದಿಲ್ಲ ಎಂದು ಹೇಳಬಹುದು, ಆದರೆ ಅವರು ತಪ್ಪು. ಅವರು "ಸಮಾಧಾನ ಮತ್ತು ಸುರಕ್ಷತೆ!" ಎಂದು ಹೇಳುತ್ತಿರುವಾಗಲೇ ಫಕ್ಕನೆ ನಾಶನವು ಅವರ ಮೇಲೆ ಬರುವದು.

ನಮ್ಮನ್ನು ಯೇಸುವಿನ ಬರೋಣಕ್ಕಾಗಿ ಸಿದ್ಧಗೊಳಿಸಲು ಎರಡು ದೃಷ್ಟಾಂತಗಳು ಮಾತ್ರವೇ ಅಗತ್ಯವಿರುತ್ತವೆ. ಯೇಸುವಿನ ಬರೋಣದ ಕುರಿತ ಬೈಬಲಾಧಾರಿತವಾದ, ಸಮತೋಲನವುಳ್ಳ ನಿಲುವು ಏನೆಂದರೆ ಆತನು ತಪ್ಪದೆ ಬಂದೇ ಬರುತ್ತಾನೆ, ಆದರೆ ಆತನು ಬರುವ ಸಮಯವು ಯಾರಿಗೂ ತಿಳಿಯದು. ಇಲ್ಲಿ ನಮ್ಮ ಮುಂದೆ ನಿಶ್ಚಿತತೆಯಿರುತ್ತದೆ ಮತ್ತು ಅದು ಆತನ ಬರೋಣ ನಿಶ್ಚಿತತೆಯಾಗಿದೆ. EC

**"ಆ ದಿನ" (5:1-3)**

"ಕರ್ತನ ದಿನವು" ಎಂಬ ಮಾತು ಹೊಸ ಒಡಂಬಡಿಕೆಯಲ್ಲಿ ಸತತವಾಗಿ ಕಂಡು ಬರುತ್ತದೆ. ಹೊಸ ಒಡಂಬಡಿಕೆಯ ಮುಂಚೆ, ಅದು ಜನಾಂಗಗಳ ಮೇಲೆ, ಪಟ್ಟಣಗಳು ಅಥವಾ ಜನರ ಮೇಲೆ ದೇವರು ತನ್ನ ನ್ಯಾಯತೀರ್ಪನ್ನಾಗಲಿ ಅಥವಾ ವಿಶೇಷ ಆಶೀರ್ವಾದಗಳನ್ನಾಗಲಿ ಬರಮಾಡುತ್ತಿದ್ದ ಯಾವದೇ ದಿನವನ್ನು ಸೂಚಿಸುವದಾಗಿತ್ತು. ಅಲ್ಲದೆ ಇದು ದೇವರು ಒಂದು ಪಟ್ಟಣದ ನಾಶನ ಮಾಡುವದನ್ನು ಅಥವಾ ತನ್ನ ಜನರನ್ನು ಶಿಕ್ಷಿಸುವದನ್ನು ಸಹ ಸೂಚಿಸುವದಾಗಿತ್ತು. ಪೌಲನು ಬಳಸಿದ ಮಾತು ಹಳೆ ಒಡಂಬಡಿಕೆಯ ಹಿನ್ನಲೆಯನ್ನು ಹೊಂದಿರುತ್ತದೆ.

ಹೇಗೂ, 2ನೇ ವಚನದಲ್ಲಿ, ಪೌಲನು ದಿನಗಳ ದಿನದ, ಕಾಲದ ಅಂತಿಮ ದಿನ ಮತ್ತು ಲೋಕಾಂತ್ಯದ ಬಗ್ಗೆ ಬರೆಯುತ್ತಿದ್ದಾನೆ. ಈ ಪ್ರಾಮುಖ್ಯವಾದ ದಿನವನ್ನು ಹೊಸ ಒಡಂಬಡಿಕೆಯಲ್ಲಿ ವಿವಿಧ ರೀತಿಗಳಲ್ಲಿ ಕರೆಯಲ್ಪಟ್ಟಿದೆ. ಈ ರೀತಿಗಳಾವವೆಂಬದನ್ನು ಗಮನಿಸುವದಾದರೆ ಆ ದಿನದ ಕುರಿತಾದ ಒಂದು ಸ್ಪಷ್ಟವಾದ ದೃಷ್ಟಿಯನ್ನು ಪಡೆಯುವದಕ್ಕೆ ನಮಗೆ ಸಹಾಯವಾಗುತ್ತದೆ.

*ಅದು ಕರ್ತನೊಂದಿಗೆ ಸಂಬಂಧ ಹೊಂದಿರುವ ಕಾರಣದಿಂದಾಗಿ ಅದು "ಕರ್ತನ ದಿನ" ಆಗಿರುವದು.* ಪೌಲನು ಅದನ್ನು "ಕರ್ತನ ದಿನ" ಎಂದು ಕರೆದನು ಯಾಕೆಂದರೆ ಕರ್ತನು ಅದರ ಕೇಂದ್ರಬಿಂದುವಾಗಿರುವನು. ಕ್ರೈಸ್ತರು ಒಂದು ಘಟನೆಗಾಗಿ ಎದುರು ನೋಡುವದಿಲ್ಲ;

ಅವರು ಯಾರೋ ಒಬ್ಬನು, ಅವರ ಮಹಾ ವಿಮೋಚಕನು ಬರುವದನ್ನು ಎದುರುನೋಡುತ್ತಾರೆ. ಪ್ರತಿ ವಾರವೂ ಕರ್ತನ ದಿನದಂದು ನಾವು ಇನ್ನೊಂದು ಕರ್ತನ ದಿನವನ್ನು, ಅಂದರೆ ಕಡೇ ದಿನವನ್ನು ಎದುರು ನೋಡುವವರಾಗಿ ಕೂಡಿ ಬರುತ್ತೇವೆ. ಹೀಗೆ ನಾವು ಅದನ್ನು "ದೇವರ ದಿನ" ಎಂದು ಕಾಣುತ್ತೇವೆ (2 ಪೇತ್ರ 3:12), "ಕ್ರಿಸ್ತ ಯೇಸುವಿನ ದಿನ" (ಫಿಲಿಪ್ಪಿ 1:6), ಅಥವಾ "ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನ" (1 ಕೊರಿಂಥ 1:8) ಎಂಬದಾಗಿ ಕಾಣುತ್ತೇವೆ.

*ಅದು ಅನೀತಿಯೊಂದಿಗೆ ಸಂಬಂಧಿಸಿರುವ ಕಾರಣದಿಂದ ಅದು "ಕೋಪದ ದಿನ" ಆಗಿರುವದು.* ಪೌಲನು ಅದನ್ನು "ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟವಾಗುವ ದಿವಸ" ಎಂದು ಕರೆಯುತ್ತಾನೆ (ರೋಮಾ 2:5). ಅದು ಅವಿಧೇಯರಿಗೂ ಅನೀತಿವಂತವರಿಗೂ ಆ ವಿಧವಾದ ದಿನವಾಗಿರುವದು. ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯ ಜ್ಞಾನಕ್ಕೆ ಸೇರಬೇಕೆಂಬದು ದೇವರ ಬಯಕೆಯಾಗಿದೆ (1 ತಿಮೊಥೆ 2:4). ಆತನು ರಕ್ಷಣೆಯನ್ನು ಎಲ್ಲರಿಗೂ ನೀಡುತ್ತಾನೆ, ಆದರೆ ಆತನ ಕೊಡುಗೆಯು ತಿರಸ್ಕರಿಸಲ್ಪಡುವಾಗ ಆತನ ಪ್ರೀತಿಯನ್ನು ಬೇಡವೆಂದು ತಳ್ಳಿಬಿಟ್ಟಿರುವವನಿಗೆ ಒಂದು ಮಹಾ ಕೋಪದ ದಿನವು ಕಾದಿರುತ್ತದೆ.

*ಅದು ನೀತಿಯೊಂದಿಗೆ ಸಂಬಂಧ ಹೊಂದಿರುವ ಕಾರಣದಿಂದ ಅದೊಂದು "ರಕ್ಷಣೆಯ ದಿನ" ಆಗಿರುವದು.* ಪೌಲನು ಅದನ್ನು "ವಿಮೋಚನೆಯ ದಿನ" ಎಂದು ಕರೆದನು (ಎಫೆಸ 4:30). ಈ ದಿನದಂದು ನಮ್ಮ ವಿಮೋಚನೆಯು ಘೋಷಿಸಲ್ಪಡುವದು, ಮತ್ತು ನಾವು ನಿತ್ಯವಾದ ವಿಮೋಚನೆಯೊಳಗೆ ಪ್ರವೇಶಿಸುವೆವು.

*ಅದು ಎಲ್ಲವುಗಳ ಅಂತ್ಯದೊಂದಿಗೆ ಸಂಬಂಧ ಹೊಂದಿರುವದರಿಂದ ಅದು ಕೇವಲ "ಆ ದಿನ" ಎಂದಷ್ಟೆ ಕರೆಯಲ್ಪಟ್ಟಿದೆ.* ಪೌಲನು ಅದನ್ನು "ಆ ದಿನ" ಎಂದು ಕರೆಯುತ್ತಾನೆ (2 ಥೆಸಲೋನಿಕ 1:10), ಯೇಸು ಅದನ್ನು "ಕಡೇ ದಿನ" ಎಂದು ಕರೆದನು (ಯೋಹಾನ 6:39), ಮತ್ತು ಯೂದನು ಅದನ್ನು "ಮಹಾ ದಿನ" ಎಂದು ಕರೆಯುತ್ತಾನೆ (ಯೂದನು 6). ಈ ದಿನ ಕಡೆಗೆ ಎಲ್ಲಾ ಕಾಲವು ಸಾಗುತ್ತಿದೆ, ಮತ್ತು ಅದನ್ನು "ಆ ದಿನ" ಎಂದು ಕರೆಯುವದು ಸೂಕ್ತವಾಗಿರುತ್ತದೆ. ಸಮಸ್ತ ಕಾರ್ಯಗಳು ಸಹ ಯಾವ ದಿನದ ಕಡೆಗೆ ನೋಡುತ್ತಿವೆಯೋ "ಆ ದಿನ" ವನ್ನು ಪ್ರತಿಯೊಬ್ಬ ಕ್ರೈಸ್ತನು ತನ್ನ ಕ್ಯಾಲೆಂಡರಿನಲ್ಲಿ ಹೊಂದಿದ್ದಾನೆ.

ಯಾವನೇ ಆಗಲಿ ಕೇಳಬಹುದಾದ ಅತಿ ದೊಡ್ಡ ಪ್ರಶ್ನೆಯೇನೆಂದರೆ, "ನೀವು ನ್ಯಾಯತೀರ್ಪಿನ ದಿನಕ್ಕಾಗಿ ಸಿದ್ಧರಾಗಿದ್ದೀರೋ?" ನಮ್ಮ ಆತ್ಮಗಳು ಯಾವ ಸ್ಥಿತಿಯಲ್ಲಿರುವವೆಂಬುದು ಆ ದಿನವು ಹೇಗಿರಲಿದೆಯೆಂಬುದನ್ನು ನಿರ್ಧರಿಸುತ್ತದೆ. ನಾವು ವಿಮೋಚಿಸಲ್ಪಟ್ಟವರೊಳಗೆ ಇರುವವರಾದರೆ, ಅದೊಂದು ವಿಮೋಚನೆಯ ದಿನವಾಗುವದು; ನಾವು ಅವಿಧೇಯರೊಳಗೆ ಇರುವದಾದರೆ ಅದೊಂದು ಕೋಪದ ದಿನವಾಗುವದು. EC

## ಕರ್ತನ ದಿನ (5:1-11)

ಮೊದಲ ಶತಮಾನದ ಸಭೆಯು ಕ್ರಿಸ್ತನ ಬರೋಣದ ಮೇಲೆ ಅತ್ಯಂಥ ಹೆಚ್ಚಾಗಿ ಗಮನವನ್ನು ಕೊಡುವದಾಗಿತ್ತು. ಅಪೊಸ್ತಲರು ಅವರಿಗೆ ಹಾಗೆ ಕಲಿಸಿ ಕೊಟ್ಟದ್ದರ

ನಿಮಿತ್ತವಾಗಿ ಅವರು ಆ ರೀತಿಯಲ್ಲಿ ಮುಖ್ಯ ಗಮನವನ್ನು ಹೊಂದಿದ್ದರು. Elbert Baileyನ ಹಾಡು "Watch and Pray" ಈ ಸ್ವಭಾವವನ್ನು ಪ್ರತಿಫಲನಗೊಳಿಸುತ್ತದೆ:

ಎಚ್ಚರವಾಗಿದ್ದು ಪ್ರಾರ್ಥಿಸಿರಿ, ಯಾಕೆಂದರೆ ಕರ್ತನು ಬರುತ್ತಿರುವನು,
ಒಂದು ಮೇಘಗಳಲ್ಲಿ ಬರುವನು;
ಶುದ್ಧಗೊಳಿಸುವ ಬುಗ್ಗೆಯಲ್ಲಿ ನಿಮ್ಮ ಉಡುಪುಗಳನ್ನು ತೊಳಕೊಳ್ಳಿರಿ,
ಎಚ್ಚರವಾಗಿರಿ, ಓ, ಎಚ್ಚರವಾಗಿದ್ದು ಪ್ರಾರ್ಥಿಸಿರಿ.

. . . . . . . . . . . . . . . . . . . . . . . . .

ಆತ್ಮವೇ, ರಕ್ಷಕ ಎಚ್ಚರಿಕೆಗೆ ಕಿವಿಗೊಡು,
ಮತ್ತು ಆತನ ಆಶೀರ್ವಾದದ ನುಡಿಗಳಿಗೆ ವಿಧೇಯನಾಗು,
ಆತನು ಬರುವಾಗ ಸಿದ್ಧವಾಗಿರು, ಆತನನ್ನು ಸಂಧಿಸಲು,
ಎಚ್ಚರವಾಗಿರಿ, ಓ, ಎಚ್ಚರವಿದ್ದು ಪ್ರಾರ್ಥಿಸಿರಿ.[48]

ಈ ದೃಷ್ಟಿಕೋನವನ್ನು ತೆಗೆದುಕೊಳ್ಳಬೇಕೆಂದು ಪೌಲನು ಥೆಸಲೋನಿಕದವರಿಗೆ ಕಲಿಸಿದನು. 1 ಥೆಸಲೋನಿಕ 4:13-18ರಲ್ಲಿ, ಮರಣಿಸಿರುವ ಪ್ರಿಯರು ಕ್ರಿಸ್ತನ ಎರಡನೆಯ ಬರೋಣವನ್ನು ತಪ್ಪಿಸಿಕೊಳ್ಳುವದಿಲ್ಲ ಎಂಬುದಾಗಿ ಪೌಲನು ಕಲಿಸಿದನು. 5:1-11ರಲ್ಲಿ, ಕ್ರಿಸ್ತನ ಪುನರಾಗಮನದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಿಕೊಳ್ಳುವದರ ಕುರಿತು ಪೌಲನು ಹೆಚ್ಚು ಕಳಕಳಿಯನ್ನು ತೋರಿಸುತ್ತಾನೆ.

ಈ ವಚನಗಳಲ್ಲಿ, ಪೌಲನು "ಕಾಲಗಳು" ಮತ್ತು "ಗಳಿಗೆಗಳು" ಬಗ್ಗೆ ಮಾತಾಡಿದನು. "ಕಾಲಗಳು" ಅನಿರ್ದಿಷ್ಟವಾದ ಅಥವಾ ವಿಸ್ತರಿಸುವ ಕಾಲಾವಧಿಗಳನ್ನು ಸೂಚಿಸುತ್ತದೆ. "ಗಳಿಗೆಗಳು" ಎಂಬುದು ಒಂದು ನಿಶ್ಚಿತವಾದ ಮತ್ತು ನಿರ್ದಿಷ್ಟವಾದ ಕಾಲಾವಧಿಯನ್ನು ಸೂಚಿಸುತ್ತದೆ. ಪೌಲನು ಹೀಗೆ ಬರೆಯುತ್ತಾನೆ, "ಕಾಲಗಳನ್ನೂ ಗಳಿಗೆಗಳನ್ನೂ ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ" (ವ. 1). ಇದು ಅಪೊಸ್ತಲರ ಕೃತ್ಯಗಳು 1:7ರಲ್ಲಿ ಯೇಸು ಹೇಳಿದ ಮಾತುಗಳೊಂದಿಗೆ ಸಹಮತ ನೀಡುತ್ತದೆ: "ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ." ಕ್ರಿಸ್ತನು ಯಾವಾಗ ಹಿಂದಿರುಗಿ ಬರುವನೆಂಬುದರ ಬಗ್ಗೆ ಹೆಚ್ಚು ವಿವರಗಳನ್ನು ಕೊಡುವಂತೆ ಒತ್ತಾಯಿಸುತ್ತಿದ್ದರೆಂಬುದು ಸ್ಪಷ್ಟವಾಗಿ ತೋರುತ್ತದೆ.[49] ಥೆಸಲೋನಿಕದವರು ತೀವ್ರವಾಗಿ ಬೇಡುತ್ತಿದ್ದ ಮಾಹಿತಿಯನ್ನು ಪೌಲನು ನೀಡಲಿಲ್ಲ, ಆದರೆ ಅವರಿಗೆ ಏನು ಅಗತ್ಯವಿತ್ತೋ ಅದನ್ನಂತೂ ಅವರಿಗೆ ನೀಡಿದನು. ಪೌಲನು ಮಹಾ, ಐತಿಹಾಸಿಕವಾದ "ಕರ್ತನ ದಿನ"ದ ಕುರಿತಾಗಿ ಪೌಲನು ಏನನ್ನು ಕಲಿಸಿದನು?

*ಅದು "ಒಬ್ಬ ಕಳ್ಳನ ಹಾಗೆ" ಬರುವದು.* ಪೌಲನು ಹೀಗೆ ಬರೆದನು, "ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ" (ವ. 2). ಆತನು "ಚೆನ್ನಾಗಿ ತಿಳಿದಿದ್ದೀರಲಲ್ಲಾ" ಎಂಬ ಮಾತುಗಳನ್ನು ಬಳಸುತ್ತಾನೆ ಯಾಕೆಂದರೆ ಪೌಲನು ಸಭೆಯ ಜೊತೆಯಲ್ಲಿ ಇದ್ದಂಥ ವೇಳೆಯಲ್ಲಿ ಇದನ್ನು ಅವರಿಗೆ ಕಲಿಸಿ ಕೊಟ್ಟಿದ್ದನು.

"ರಾತ್ರಿಯಲ್ಲಿ ಕಳ್ಳನು ಬರುವ" ಚಿತ್ರಣವು ಪ್ರಾಮುಖ್ಯವಾದದ್ದು. ರಾತ್ರಿಯಲ್ಲಿ ಒಬ್ಬನ

ಚಲನವಲನಗಳನ್ನು ಮರೆಯಾಗಿಟ್ಟುಕೊಳ್ಳುವದು ಸುಲಭವಾಗಿರುತ್ತದೆ, ಹೀಗೆ ಕಳ್ಳತನಕ್ಕೊಳಗಾಗುವ ವ್ಯಕ್ತಿಗೆ ಅದು ಅನಿರೀಕ್ಷಿತವಾಗಿರುತ್ತದೆ. ಒಬ್ಬ ಕಳ್ಳನು ತಾನು ಬರುತ್ತಿರುವದನ್ನು ಘೋಷಿಸುವದಿಲ್ಲ. ಯಾರೊಬ್ಬರೂ ಕೈಗೆ ಆಯುಧವನ್ನು ಎತ್ತಿಕೊಳ್ಳದಂತೆಯಾಗಲಿ ಅಥವಾ ಪೋಲಿಸರಿಗೆ ಕರೆ ಮಾಡುವದಕ್ಕಾಗಲಿ ಅವಕಾಶವೇ ಆಗದಂತೆ ಆತನು ಮೆಲ್ಲಗೆ ನುಸುಳುತ್ತಾನೆ. ಆತನು ಕಳ್ಳತನಕ್ಕೊಳಗಾದವರಿಗೆ ಗನ್ ತೋರಿಸಿ ಆತನ ಎಲ್ಲಾ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಳ್ಳುತ್ತಾನೆ.

ಕಳ್ಳನು ಹಾನಿಯನ್ನುಂಟು ಮಾಡುವದಕ್ಕೆ ಬಯಸುತ್ತಾನಾದ್ದರಿಂದ ಕ್ರಿಸ್ತನನ್ನು ಕಳ್ಳನಿಗೆ ಹೋಲಿಸಲಾಗಿರುವದಿಲ್ಲ. ಬದಲಾಗಿ, ಅನಿರೀಕ್ಷಿತ ಮತ್ತು ಥಕ್ಕನೆ ಬರುವದನ್ನು ಒತ್ತಿ ಹೇಳುವದಕ್ಕಾಗಿ ಈ ಹೋಲಿಕೆಯನ್ನು ಮಾಡಲಾಗಿದೆ. ಆತನು ಯಾವನೊಬ್ಬನೂ, "ಪರಲೋಕದಲ್ಲಿರುವ ದೂತರು ಸಹ" ನಿರೀಕ್ಷಿಸದಿರುವ ವೇಳೆಯಲ್ಲಿ ಆತನು "ಥಕ್ಕನೆ" ಬರುವನು (ವ. 3; ಮತ್ತಾಯ 24:36; 2 ಪೇತ್ರ 3:10).

*ಇದು ಎಲ್ಲಾ ಜನರಿಗೂ ಒಂದು ಮಹತ್ವಪೂರ್ಣವಾಗಿರುವ ಘಟನೆಯಾಗಿದೆ.* ಯೇಸುವಿನ ಬರೋಣವು ಎಲ್ಲರ ಮೇಲೆಯೂ ಪರಿಣಾಮವನ್ನು ಬೀರುವದು. ಇದಕ್ಕಾಗಿ ಸಿದ್ಧ ಮಾಡಿಕೊಳ್ಳದವರು ಅಹಿತಕರವಾಗಿ ಆಶ್ಚರ್ಯಗೊಳ್ಳುವರು. 3ನೇ ವಚನದಲ್ಲಿ, ಪೌಲನು ಅಂಥ ಜನರು "ಸಮಾಧಾನ ಮತ್ತು ಸುರಕ್ಷತೆ!" ಎಂದು ಹೇಳುತ್ತಿರುವರು (ಅಥವಾ ನಿರೀಕ್ಷಿಸುವರು).

1975ರಲ್ಲಿ, ನಾನು Cataniaದ Sicilyಯಲ್ಲಿ ಎರಡನೆಯ ಬರೋಣದ ಕುರಿತು ಪ್ರಸಂಗಿಸಬೇಕಾಗಿದ್ದ ವೇಳೆಯಲ್ಲಿ, ಸಹೋದರರು ಬೀದಿಗಳಲ್ಲೆಲ್ಲಾ ಧ್ವನಿವರ್ಧಕದೊಂದಿಗೆ ಸಂಚರಿಸುತ್ತಾ, "ಕ್ರಿಸ್ತನು ಯಾವಾಗ ಬರುವನು?" ಎಂದು ಕೇಳುತ್ತಿದ್ದರು. ಬಹಳ ಸಾರಿ, ದಾರಿಯಲ್ಲಿ ಹೋಗುತ್ತಿದ್ದವರಿಂದ ಬಂದ ಉತ್ತರವು "ಎಂದಿಗೂ ಇಲ್ಲ!" ಎಂದಾಗಿತ್ತು. ತಾವು ಸುರಕ್ಷಿತವಾಗಿದ್ದೇವೆಂದು ಅವರು ನಂಬಿಕೊಂಡಿದ್ದರು.

ಅಂಥ ಜನರು ಸಿದ್ಧತೆಯಿಲ್ಲದಂಥ "ರಾತ್ರಿಯ" ಮತ್ತು "ಕತ್ತಲೆ"ಯ ಜನರಾಗಿದ್ದಾರೆ (ವ. 5), ಪಾಪದಲ್ಲಿಯೂ ಅಂಧಕಾರದಲ್ಲಿಯೂ ಜೀವಿಸುವವರಾಗಿದ್ದಾರೆ. ಅವರು ಆತ್ಮೀಕವಾಗಿ "ನಿದ್ದೆಮಾಡುವ" ಜನರು (ವ. 6) ಮತ್ತು ಅವರು ವಾಸ್ತವಿಕತೆಯ ಅರಿವಿಲ್ಲದವರಾಗಿದ್ದಾರೆ. ಅವರು ಸಾಮಾನ್ಯವಾಗಿ ರಾತ್ರಿಯ ಕೃತ್ಯಗಳೆಂದು ಪರಿಗಣಿಸಲ್ಪಡುವ ದುಷ್ಕೃತ್ಯಗಳನ್ನು ಮಾಡುವ ಜನರಾಗಿದ್ದಾರೆ.

ವಾಸ್ತವಿಕತೆಯೇನೆಂದರೆ ಅವರ ಮೇಲೆ "ನಾಶನ" ಇರುವದಾಗಿದೆ. "ನಾಶನವು ಥಕ್ಕನೆ ಅವರ ಮೇಲೆ ಬರುವದು" (ವ. 3). ಇದರ ಅರ್ಥವು ಸರ್ವನಾಶನವಾಗುವದು ಎಂದಾಗಿರುವದಿಲ್ಲ, ಆದರೆ ಒಂದು ಧ್ವಂಸಗೊಂಡ ಸ್ಥಿತಿಯಲ್ಲಿ ಜೀವನ ಮುಂದುವರೆಸುವದು ಎಂದಾಗಿದೆ. ಅದು ನರಕದ ನಾಶನವಾಗಿರುತ್ತದೆ.

ವಾಸ್ತವಿಕತೆಯೇನೆಂದರೆ ನಾಶನವು ಅವರ ಮೇಲಿರುತ್ತದೆ, "ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವದು" (ವ. 3). ಆ ಸಮಯದಲ್ಲಿ ಮಾನವ ಇತಿಹಾಸದಲ್ಲಿ ಈ ಮುಂಚೆ ಸಂಭವಿಸಿದ ಪ್ರಕಾರವಾಗಿಯೇ ಸಂಭವಿಸುವದು. ನೋಹನ ದಿನದ ಜನರನ್ನು ಕುರಿತು ಯೋಚಿಸಿರಿ. ಸಿದ್ಧತೆಯಿಲ್ಲದವರು ತಾವು ಸುರಕ್ಷಿತರೆಂದು

ಭಾವಿಸಿಕೊಂಡಿದ್ದರು, ಆದರೆ ಏಕಾಏಕಿ ಮಳೆಯಾಗಲಾರಂಭಿಸಿತು, ದೇವರು ನಾವೆಯನ್ನು ಮುಚ್ಚಿದನು (1 ಪೇತ್ರ 3:20). ಕ್ರಿ. ಪೂ. 538ರಲ್ಲಿ ಬಾಬಿಲೋನಿನವರು ಪರ್ಶಿಯನ್ನರ ವಶಕ್ಕೆ ಬಿದ್ದದ್ದು ಥಕ್ಕನೆ ಸಂಭವಿಸಿತ್ತು. ಪರ್ಶಿಯನ್ನರು ರಾತ್ರಿ ವೇಳೆಯಲ್ಲಿ ಶಬ್ದ ಮಾಡದೆ ಪ್ರವಾಹ ಬಾಗಿಲುಗಳ ಮೂಲಕ ಬಂದರು.[50] ಕ್ರಿಸ್ತನ ಬರೋಣವು ಸಿದ್ಧತೆಯಿಲ್ಲದವರಿಗೆ ಇದೇ ರೀತಿಯಲ್ಲಿ ಅನಿರೀಕ್ಷಿತವಾಗಿರುವದು.

ಯೇಸುವು ರಾತ್ರಿಯಲ್ಲಿ ಬರುವ ಕಳ್ಳನ ಹಾಗೆ ಬರುವನಾದರೂ, ಕ್ರೈಸ್ತರು ಆತನ ಬರೋಣಕ್ಕಾಗಿ ಸಿದ್ಧತೆಯಿಲ್ಲದವರಾಗಿ ಇರಬಾರದು. "ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ" (ವ. 4). ಕ್ರೈಸ್ತರು "ಕತ್ತಲೆಯಲ್ಲಿ ಇರುವವರಲ್ಲ." ಅವರು "ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯುವದಿಲ್ಲ" (ಯೋಹಾನ 8:12) ಎಂದು ಹೇಳಿದ ಯೇಸುವನ್ನು ಹಿಂಬಾಲಿಸುವದಕ್ಕೆ ತೀರ್ಮಾನಿಸಿಕೊಂಡವರಾಗಿದ್ದರು. ಕ್ರಿಸ್ತನು "ನಮ್ಮನ್ನು ಅಂಧಕಾರದ ಧೊರೆತನದಿಂದ ಬಿಡಿಸಿ [ತನ್ನ] ರಾಜ್ಯದಲ್ಲಿ ಸೇರಿಸಿದನು" (ಕೊಲೊಸ್ಸೆ 1:13). ಇದರರ್ಥವು ನಮಗೆ ಆತನ ಬರೋಣದ ದಿನ ಮತ್ತು ಗಳಿಗೆಗಳು ತಿಳಿಯುವವು ಎಂದಾಗಿದೆಯೋ? ಇಲ್ಲ. ದೇವರಿಗಲ್ಲದೆ ಬೇರೆ ಯಾವನಿಗೂ ಅದು ತಿಳಿಯದು (ಮತ್ತಾಯ 24:36; ಮಾರ್ಕ 13:32). ಅಲ್ಲದೆ ಆತನು ಬರುವಂಥ ಆ ದಿನದಲ್ಲಿಯೇ ನಾವು ಆತನನ್ನು ನಿರೀಕ್ಷಿಸುವವರಾಗಿರುತ್ತೇವೆಂದು ಸಹ ಇದರ ಅರ್ಥವಾಗಿರುವದಿಲ್ಲ. ಕೆಲವರು ಕೆಲಸ ಮಾಡುತ್ತಾ "ಹೊಲದಲ್ಲಿ" ಇರುವರು (ಮತ್ತಾಯ 24:39-41).

ಹೇಗೂ, ಕ್ರಿಸ್ತನ ಬರೋಣವು ನಮಗೆ ಸಂತೋಷಕರವಾದ ಅನಿರೀಕ್ಷಿತತೆ ಯಾಗಿರುವದೆಂದು ಇದರ ಅರ್ಥವಾಗಿದೆ. ನಂಬಿಗಸ್ತರಾದ ಕ್ರೈಸ್ತರು ಆತ್ಮೀಕವಾಗಿ ಸಿದ್ಧತೆಯನ್ನು ಮಾಡಿಕೊಂಡಿರುವರು. ನಂಬಿಗಸ್ತರಾದ ಕ್ರೈಸ್ತರು "ಬೆಳಕಿನ ಮಕ್ಕಳು" (ವ. 5). ನಂಬಿಗಸ್ತರಾದ ಕ್ರೈಸ್ತರು ಹೀಗೆ ಕಂಡು ಬರುವರು "ಬೆಳಕಿನಲ್ಲಿ ನಡೆಯುವವರಾಗಿ . . . ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದ[ವರಾಗಿ], ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ [ಅವರನ್ನು] ಶುದ್ಧಿ ಮಾಡುತ್ತದೆ" (1 ಯೋಹಾನ 1:7). ನಿಜವಾಗಿಯೂ ಸಿದ್ಧತೆಯುಳ್ಳವರು "ಮಾರನಾಥ!" ಎಂದು ಹೇಳುವರು, ಅದರರ್ಥವು "ಓ ಕರ್ತನೇ, ಬಾ" ಎಂದಾಗಿದೆ (1 ಕೊರಿಂಥ 16:22).

*ಕ್ರೈಸ್ತರು ಅದಕ್ಕಾಗಿ ಇನ್ನಷ್ಟು ಸಿದ್ಧತೆಯನ್ನು ಮಾಡಿಕೊಳ್ಳಬೇಕು*. ಪೌಲನು ಹೀಗೆ ಹೇಳುತ್ತಾನೆ, "ಆದಕಾರಣ ನಾವು ಇತರರಂತೆ ನಿದ್ದೆಮಾಡದೆ" (ವ. 6a). ಅಂದರೆ, ನಾವು ಆತ್ಮೀಕವಾಗಿ "ಅಮಲೇರಿದವರು" ಆಗಿ, ಅಪಾಯ ಬರುವದನ್ನು ವಿವೇಚಿಸುವದಕ್ಕೆ ಅಶಕ್ತರಾಗಿ ಇರದಿರೋಣ. ಒಬ್ಬ ಕ್ರೈಸ್ತನು ತನ್ನನ್ನು ನಿದ್ದೆಗೆ ಜಾರುವಂತೆ ಅನುಮತಿಸಿಕೊಂಡಿರುವದಾದರೆ, ಆತನು ಎಚ್ಚೆತ್ತುಕೊಳ್ಳತಕ್ಕದ್ದು! ರೋಮಾ 13:11ರಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗಿರತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ. ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು."

ಪೌಲನು "ಎಚ್ಚರವಾಗಿರೋಣ, ಸ್ವಸ್ಥಚಿತ್ತರಾಗಿರೋಣ" ಎಂದು ಹೇಳುತ್ತಾನೆ (ವ. 6b).

ಇದು ಅಮಲೇರುವದಕ್ಕೆ ವಿರುದ್ಧವಾದದ್ದಾಗಿದೆ. ಅದರಲ್ಲಿ ನಿದ್ದೆಗೆ ಜಾರುವದರಿಂದಾಗುವ ಅಪಾಯದ ಕಾರಣದಿಂದಾಗಿ ಎಚ್ಚರವಾಗಿರಬೇಕೆಂದು ದೃಢತೀರ್ಮಾನವನ್ನು ಕೈಗೊಳ್ಳುವದು ಸೇರಿರುತ್ತದೆ. ಅದು ಸುಲಭವಾಗಿ ಎಚ್ಚೆತ್ತುಕೊಂಡು ತನ್ನ ಇಂದ್ರಿಯಗಳನ್ನೆಲ್ಲಾ ಶೀಘ್ರದಲ್ಲಿಯೇ ನಿಯಂತ್ರಣಕ್ಕೆ ತೆಗೆದುಕೊಳ್ಳುವಂಥ, "ಮುಂಜಾನೆಯ ವ್ಯಕ್ತಿ" ಯ ಹಾಗಿರುವದು. ನಾವು ಬೈಬಲ್ ಓದುವಿಕೆ ಮತ್ತು ಪ್ರಾರ್ಥನೆಯ ಮೂಲಕ ನಮ್ಮನ್ನು ಎಚ್ಚರವಾಗಿಟ್ಟುಕೊಳ್ಳಬಹುದು.

ಕ್ರೈಸ್ತರು ದೇವರ ವಿಶ್ವಾಸ, ನಿರೀಕ್ಷೆ, ಮತ್ತು ಪ್ರೀತಿಗಳಿಂದ ಕೂಡಿದಂಥ ಸರ್ವಾಯುಧಗಳನ್ನು ಧರಿಸಿಕೊಂಡು ಸಿದ್ಧರಾಗಬೇಕು (ವ. 8). ಮೊದಲನೆಯದಾಗಿ, "ವಿಶ್ವಾಸಪ್ರೀತಿ"ಗಳೆಂಬ ವಜ್ರಕವಚವನ್ನು ಪ್ರಸ್ತಾಪಿಸುತ್ತಾನೆ. ವಿಶ್ವಾಸವು ದೇವರಲ್ಲಿಯೇ ಇರತಕ್ಕದ್ದು, ವಿಶೇಷವಾಗಿ ಕಷ್ಟಗಳ ಸಮಯದ ವೇಳೆ ವಿಶ್ವಾಸವು ಇರಬೇಕು (ನೋಡಿರಿ ಯಾಕೋಬ 1:1-4). "ಪ್ರೀತಿ" ಎಂದರೆ ನಮಗೆ ಜೊತೆಯ ಮನುಷ್ಯರು ಕೆಟ್ಟದ್ದನ್ನು ಬಯಸಿದರೂ ನಾವು ಅವರಿಗೆ ಒಳ್ಳೇದನ್ನು ಮಾಡಬೇಕೆಂಬ ಬಲವಾದ ಬಯಕೆಯಾಗಿರುತ್ತದೆ. ನಮಗೆ ಸೈತಾನನು ಹಾನಿಯನ್ನು ಮಾಡುವದಕ್ಕೆ ಪ್ರಯತ್ನಿಸುವಾಗ ವಿಶ್ವಾಸ ಮತ್ತು ಪ್ರೀತಿಗಳು ಒಂದು "ವಜ್ರಕವಚ" ಆಗಿ ರೂಪಗೊಳ್ಳುತ್ತವೆ.

ನಂತರ, "ರಕ್ಷಣೆಯ ನಿರೀಕ್ಷೆಯೆಂಬ ಶಿರಸ್ತ್ರಾಣ"ವನ್ನು ಪ್ರಸ್ತಾಪಿಸುತ್ತಾನೆ. ನಿರೀಕ್ಷೆಯು ಏನೋ ಒಂದು ಹೊಂದಿಕೊಳ್ಳಬೇಕೆಂಬ ಎದುರು ನೋಡುವಿಕೆಯಾಗಿರುತ್ತದೆ. ನಮ್ಮ ನಿರೀಕ್ಷೆಯು "ರಕ್ಷಣೆ" ಆಗಿದೆ, ಪರಲೋಕದ ಮನೆಯಲ್ಲಿ ದೇವರ ಸಂಗಡ ಅಂತಿಮ ಸಮಾಧಾನಗೊಳ್ಳುವಿಕೆ ಆಗಿದೆ. ಇದು ತಲೆಯನ್ನು ಸುರಕ್ಷಿತವಾಗಿ ಕಾಪಾಡುವ ಆಯುಧದ ಒಂದು ಭಾಗವಾಗಿರುತ್ತದೆ. ನಮ್ಮ ಮನಸ್ಸುಗಳಲ್ಲಿ ಪರಲೋಕವನ್ನಿಟ್ಟುಕೊಳ್ಳುವಾಗ, ಸೈತಾನನು ನಮ್ಮ ಮೇಲೆ ಶೋಧನೆಗಳಿಂದ ಆಕ್ರಮಣ ಮಾಡಿದರೆ ನಾವು ನಮ್ಮ ನಿರೀಕ್ಷೆಯನ್ನು ನೆನಪು ಮಾಡಿಕೊಳ್ಳುವೆವು.

ಕ್ರಿಸ್ತನ ಪುನರಾಗಮನಕ್ಕಾಗಿ ಸಿದ್ಧರಾಗಿರುವಂತೆ ದೇವರ ಯುದ್ಧಾಯುಧಗಳು ನಮಗೆ ಸಹಾಯ ಮಾಡುವವು. ನಾವು ಬೆಳ್ಳನೆಯ ಉಡುಪುಗಳನ್ನು ಧರಿಸಿಕೊಂಡವರಾಗಿ ಬೆಟ್ಟಗಳ ಮೇಲೆ ಕಾಯುತ್ತಿರುವದಿಲ್ಲ, ಆದರೆ ನಮ್ಮ ಹೃದಯದಲ್ಲಿ ದೃಢವಾದ ವಿಶ್ವಾಸ ಹೊಂದಿದವರಾಗಿ ಆತನಿಗೋಸ್ಕರ ದುಡಿಯುವವರಾಗಿರುತ್ತೇವೆ:

ಕ್ರಿಸ್ತನ ಸೈನಿಕರೇ ಎದ್ದೇಳಿರಿ
ನಿಮ್ಮ ಯುದ್ಧಾಯುಧಗಳನ್ನು ಧರಿಸಿಕೊಳ್ಳಿರಿ;
ದೇವರು ತನ್ನ ಪ್ರಿಯ ಮಗನ ಮೂಲಕ
ಒದಗಿಸುವ ಬಲದಲ್ಲಿ ದೃಢವಾಗಿದ್ದು.[51]

*ಕ್ರೈಸ್ತರು ಕ್ರಿಸ್ತನ ಎರಡನೆಯ ಬರೋಣದಲ್ಲಿ ತಮ್ಮ ಗಮ್ಯತೆಯನ್ನು ಸಫಲ ಮಾಡಿಕೊಳ್ಳುವರು.* ಪೌಲನು ಹೀಗೆ ಹೇಳಿದನು, "ಯಾಕೆಂದರೆ ದೇವರು ನಮ್ಮನ್ನು ತನ್ನ ಕೋಪಕ್ಕೆ ಗುರಿಯಾಗಬೇಕೆಂದು ನೇಮಿಸದೆ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಬೇಕೆಂದು ನೇಮಿಸಿದನು" (ವ. 9). ಇಲ್ಲಿ

ಸೂಚ್ಯಾರ್ಥವಾಗಿ ಹೇಳಲ್ಪಟ್ಟಿರುವದೇನೆಂದರೆ ಅವಿಧೇಯರು ಕೋಪಕ್ಕೆ ನೇಮಿಸಲ್ಪಟ್ಟಿದ್ದಾರೆ ಎಂಬದೆ. "ನೇಮಿಸಿದನು" ಎಂದರೆ ದೇವರು ಅಂಥವರನ್ನು ತನ್ನ ಯೋಜನೆಯಲ್ಲಿ ಪ್ರತ್ಯೇಕಗೊಳಿಸಿಟ್ಟಿದ್ದಾನೆ ಎಂದರ್ಥವಾಗಿದೆ. "ಕೋಪ" ಎಂಬುದು ಯಾವದೋ ಒಂದರ ವಿರುದ್ಧವಾಗಿರುವ ಒಂದು ಬಲವಾದ ಭಾವವಾಗಿರುತ್ತದೆ. ಇದು ಪಾಪದ ಕಡೆಗೆ ದೇವರ ಪ್ರತಿಕ್ರಿಯೆ ಅಥವಾ ಅದರ ಕುರಿತಾದ ಭಾವನೆಗಳಾಗಿವೆ. ಈ ವಚನದಲ್ಲಿ, "ಕೋಪ" ಎಂಬುದು ಅವಿಧೇಯರಿಗೆ ಕೊಡಲ್ಪಡುವ ದಂಡನೆಯನ್ನು, ಅಂದರೆ "ನಿತ್ಯನಾಶನವೆಂಬ ದಂಡನೆ" ನೀಡಲ್ಪಡುವದನ್ನು ಸೂಚಿಸುತ್ತದೆ (2 ಥೆಸಲೋನಿಕ 1:9). ಸತ್ಯವು ಏನೆಂದರೆ ಯಾವನಾದರೂ ದಂಡಿಸಲ್ಪಡಬೇಕೆಂಬದು ದೇವರ ಬಯಕೆಯಾಗಿರುವದಿಲ್ಲ (2 ಪೇತ್ರ 3:9), ಆ ಕಾರಣಕ್ಕಾಗಿಯೇ ಆತನು ಒಂದು ತಪ್ಪಿಸಿಕೊಳ್ಳುವ ಮಾರ್ಗವನ್ನು ಏರ್ಪಡಿಸಿದನು. ಆ ಮಾರ್ಗವನ್ನು ಆರಿಸಿಕೊಳ್ಳುವವರೇ ಕ್ರೈಸ್ತರಾಗಿದ್ದಾರೆ.

ಕ್ರೈಸ್ತರು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಬೇಕೆಂದು ನೇಮಿಸಲ್ಪಟ್ಟಿದ್ದಾರೆ." ಯೇಸುವೇ "ಮಾರ್ಗವೂ . . . ಆಗಿದ್ದಾನೆ; ಆತನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರಲಾರನು" (ಯೋಹಾನ 14:6). ನಾವು "ರಕ್ಷಣೆಯನ್ನು" ಹೊಂದಿಕೊಳ್ಳಬೇಕೆಂದು, ಅಥವಾ ಪರಲೋಕದಲ್ಲಿ ಆತನೊಂದಿಗೆ ಸಮಾಧಾನವಾಗಬೇಕೆಂದು ದೇವರು ನಮ್ಮನ್ನು "ನೇಮಿಸಿದನು." "ನಾವು ಆತನ ಜೊತೆಯಲ್ಲಿಯೇ ಜೀವಿಸಬೇಕೆಂದು" ಆತನು ಇದನ್ನು ಮಾಡಿದ್ದಾನೆ (ವ. 10). ನಂಬಿಗಸ್ತರಾಗಿರುವ ನಾವು ಪರಲೋಕಕ್ಕೆ ಹೋಗುವೆವು. ಕ್ರಿಸ್ತನು ಬರುವ ವೇಳೆ ಸತ್ತಿದ್ದರೂ ಸರಿಯೇ ಬದುಕಿದ್ದರೂ ಸರಿಯೇ, ನಂಬಿಗಸ್ತರೆಲ್ಲರೂ ಅಲ್ಲಿ ಸಂಧಿಸುವೆವು.

"ಆದದರಿಂದ . . . ಒಬ್ಬರನ್ನೊಬ್ಬರು ಸಂತೈಸಿರಿ" (ವ.11). ನಮ್ಮ ಅಂತ್ಯಾವಸ್ಥೆ ಅಥವಾ ನಮ್ಮ ರಕ್ಷಣೆಯ ಕುರಿತಾದ ಬೋಧನೆಯಿಂದ ಒಬ್ಬರನ್ನೊಬ್ಬರು ಸಂತೈಸಿರಿ. ಥೆಸಲೋನಿಕದವರು ಈಗಾಗಲೇ ಇದನ್ನು ಮಾಡುತ್ತಿದ್ದರು (ವ. 11b), ಆದರೆ ಅದನ್ನು ಇನ್ನಷ್ಟು ಹೆಚ್ಚಾಗಿ ಮಾಡುವಂತೆ ಪೌಲನು ಅವರನ್ನು ವಿನಂತಿಸಿಕೊಳ್ಳುತ್ತಾನೆ. ನಮ್ಮ ಅದ್ಭುತವಾದ ಭವಿಷ್ಯದ ಕುರಿತಾಗಿ ನಾವು ಒಬ್ಬರನ್ನೊಬ್ಬರು ಸಂತೈಸಬೇಕು. ದೇವರು ನಮಗೆ ನಂಬಿಗಸ್ತರಾಗುವಂತೆ ಮತ್ತು ನಂಬಿಗಸ್ತರಾಗಿ ಉಳಿಯುವಂತೆ ಸಹಾಯ ಮಾಡುವನು. EE

## ನಿಜವಾದ ಜೀವನ

ಜೀವನ ಎಲ್ಲಿದೆ? ನಿಜವಾದ ಜೀವನ ಎಲ್ಲಿದೆ?

ಅಪನಂಬಿಕೆಯಲ್ಲಿ ಇಲ್ಲ-

Voltaireನು ಹೆಚ್ಚು ಹೇಳಿಕೊಳ್ಳುತ್ತಿದ್ದ ವಿಧವಾದ ಒಬ್ಬ ನಾಸ್ತಿಕನಾಗಿದ್ದನು. ಆತನು ಹೀಗೆ ಬರೆಯುತ್ತಾನೆ: "ನಾನು ಹುಟ್ಟದೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು."

ಸುಖಭೋಗದಲ್ಲಿ ಇಲ್ಲ-

Lord Byronನು ಸುಖಭೋಗದ ಜೀವನವನ್ನು ನಡಿಸಿದನು, ಬೇರೆ ಯಾರಾದರೂ ಹಾಗೆ ಜೀವಿಸಿದ್ದರೇನೋ ತಿಳಿಯದು. ಆತನು ಹೀಗೆ ಬರೆದನು: "ಹುಳು, ಬಾಯಿಹುಣ್ಣು, ಮತ್ತು ವೇದನೆಗಳು ಕೇವಲ ನನ್ನವುಗಳು ಮಾತ್ರವೇ."

ಹಣದಲ್ಲಿ ಇಲ್ಲ-

Jay Gouldನು ಅಮೆರಿಕದ ಒಬ್ಬ ಲಕ್ಷಾಧಿಪತಿ, ಅವನಿಗೆ ಸಾಕಷ್ಟು ಹಣ ಹೊಂದಿದ್ದನು. ಮರಣಿಸುವ ವೇಳೆ ಆತನು ಹೀಗೆ ಹೇಳಿದನು: "ಈ ಭೂಮಿಯ ಮೇಲೆ ನಾನೇ ಅತ್ಯಂಥ ಹೆಚ್ಚು ದುರ್ಗತಿಗೊಳಗಾದ ಮನುಷ್ಯನೆಂದು ಭಾವಿಸಿಕೊಂಡಿದ್ದೇನೆ."

ಸ್ಥಾನಮಾನ ಮತ್ತು ಖ್ಯಾತಿಯಲ್ಲಿ ಇಲ್ಲ-

Lord Beaconsfieldನು ತನ್ನ ಪಾಲಿಗೆ ಬರಬೇಕಾದದ್ದಕ್ಕಿಂತಲೂ ಅಧಿಕವಾಗಿ ಅವರೆಡನ್ನೂ ಆನಂದಿಸಿದ್ದನು. ಆತನು ಹೀಗೆ ಬರೆದನು: "ಯೌವನಪ್ರಾಯ ಒಂದು ತಪ್ಪು; ಪ್ರಾಯಸ್ಥಿಕೆಯು, ಒಂದು ಹೋರಾಟ; ವೃದ್ದಾಪ್ಯವು ಒಂದು ವಿಷಾದ."

ಸೇನೆಯ ಮಹಿಮೆಯಲ್ಲಿ ಇಲ್ಲ-

ಅಲೆಗ್ಸಾಂಡರ್ ಚಕ್ರವರ್ತಿಯು ತನ್ನ ಕಾಲದಲ್ಲಿ ಪರಿಚಿತವಿದ್ದ ಸಕಲ ಜಗತ್ತನ್ನು ಗೆದ್ದುಕೊಂಡಿದ್ದನು. ಹಾಗೆ ಮಾಡಿದವನಾಗಿ, ಆತನು ತನ್ನ ಗುಡಾರದಲ್ಲಿ ಅತ್ತನು, ಯಾಕೆಂದರೆ ಆತನು ಹೀಗೆ ಹೇಳಿದನು: "ಗೆಲ್ಲುವದಕ್ಕೆ ಇನ್ನು ಯಾವ ಜಗತ್ತು ಉಳಿದಿಲ್ಲ."

ಹಾಗಾದರೆ, ಎಲ್ಲಿ ಸಂತೋಷವು ಸಿಕ್ಕುತ್ತದೆ?

ಉತ್ತರವು ಸರಳವಾಗಿದೆ: ಕ್ರಿಸ್ತನಲ್ಲಿ ಮಾತ್ರವೇ. ಆತನು ಹೀಗೆ ಹೇಳಿದನು: "ನಾನು ನಿಮ್ಮನ್ನು ತಿರಿಗಿ ನೋಡುವೆನು, ಆಗ ನಿಮ್ಮ ಹೃದಯಕ್ಕೆ ಆನಂದವಾಗುವದು; ಮತ್ತು ನಿಮ್ಮ ಆನಂದವನ್ನು ಯಾರೂ ನಿಮ್ಮಿಂದ ತೆಗೆಯುವದಿಲ್ಲ."

"ಕ್ರಿಸ್ತನೊಂದಿಗೆ ಜೀವನವು ಒಂದು ಅಂತ್ಯವಿಲ್ಲದ ನಿರೀಕ್ಷೆಯಾಗಿದೆ; ಆತನಿಲ್ಲದೆ ಅದು ನಿರೀಕ್ಷೆರಹಿತವಾದ ಅಂತ್ಯವಾಗಿರುವದು."[52]

ಕ್ರಿಸ್ತನು ಇಂದು ಬರುವದಾದರೆ, ಅದು ನಮಗೆ ಹೇಗಿರುತ್ತದೆ? ನಮಗೆ ಒಂದು ಅಂತ್ಯವಿಲ್ಲದ ನಿರೀಕ್ಷೆಯಿರುವದೋ ಅಥವಾ ನಿರೀಕ್ಷೆರಹಿತವಾದ ಅಂತ್ಯವಿರುವದೋ? EE

### ಬೆಳಕಿನ ಮಕ್ಕಳಂತೆ (5:4-11)

ಯೇಸು ರಾತ್ರಿಯಲ್ಲಿ ಕಳ್ಳನು ಹೇಗೋ ಹಾಗೆಯೇ ಬರಲಿರುವದರಿಂದ, ನಾವು ಹೇಗೆ ಜೀವಿಸತಕ್ಕದ್ದು? ಕ್ರೈಸ್ತ ಗುಣಸ್ವಭಾವದ ಎರಡು ಗುಣಗಳನ್ನು ಪೌಲನು ಸೂಕ್ತವಾಗಿಯೇ ನಮ್ಮ ಮುಂದಿಡುತ್ತಾನೆ.

*ನಾವು ಎಚ್ಚರವಾಗಿರಬೇಕು*. ಯೇಸು ಬರಬಹುದೆಂಬ ಅರಿವು ಇಲ್ಲದವರಂತೆ ನಾವು

ಕತ್ತಲೆಯಲ್ಲಿ ಜೀವಿಸುವವರಲ್ಲ. ಆತನ ಬರೋಣದ ಕುರಿತ ಸತ್ಯವು ನಮಗೆ ಗೊತ್ತಿದೆ, ಆದದರಿಂದ ನಾವು ಸತ್ಯದ ಜ್ಞಾನದಲ್ಲಿ ನಡೆಯುತ್ತೇವೆ. ಪೌಲನು ನಮ್ಮನ್ನು "ಬೆಳಕಿನ ಮಕ್ಕಳು" ಎಂದು ಕರೆದನು ಯಾಕೆಂದರೆ ನಾವು ಸತ್ಯದಲ್ಲಿ ಜೀವಿಸುತ್ತೇವೆ ಮತ್ತು ಬೆಳಕಿನವರೆಂದು ಹೇಳಲ್ಪಟ್ಟಿದ್ದೇವೆ. ನಾವು "ಹಗಲಿನ ಮಕ್ಕಳು" ಎಂದು ಹೇಳಿದನು ಯಾಕೆಂದರೆ ಕರ್ತನ ದಿನವನ್ನು ನೋಡುವವರಾಗಿ ನಮ್ಮ ಜೀವಿತಗಳನ್ನು ಜೀವಿಸುತ್ತೇವೆ. ಆ ದಿನ ಬರುತ್ತಿದೆಯೆಂದು ನಾವು ಬಲ್ಲೆವು, ಮತ್ತು ಅದಕ್ಕಾಗಿ ಸಿದ್ಧತೆಯುಳ್ಳವರಾಗಿ ನಾವು ಜೀವಿಸುತ್ತೇವೆ.

*ನಾವು ಸ್ವಸ್ಥಚಿತ್ತರಾಗಿರಬೇಕು.* ನಾವು ನಿದ್ರಿಸಬಾರದು, ಆದರೆ ಎಚ್ಚೆತ್ತುಕೊಂಡವರಾಗಿರಬೇಕು ಮತ್ತು ಯಾವ ಗಳಿಗೆಯಲ್ಲಿ ಏನು ಸಂಭವಿಸಬಹುದೋ ಎಂದು ಎಚ್ಚರಿಕೆಯಿಂದಿರಬೇಕು. ಕೆಲವರು ರಾತ್ರಿಯಲ್ಲಿ ಅಮಲೇರುವ ಮನುಷ್ಯರಂತಿದ್ದಾರೆಂದು ಆತನು ಹೇಳುತ್ತಾನೆ. ಅವರು ಜೀವನದ ಕುರಿತು ಗಂಭೀರತೆಯಿಲ್ಲದವರು ಮತ್ತು ಸಂಭವಗಳ ಕುರಿತಾಗಿ ಪ್ರಜ್ಞೆಯಿಲ್ಲದವರಾಗಿರುತ್ತಾರೆ. ಕ್ರೈಸ್ತನು ಜೀವನವನ್ನು ಆನಂದಿಸುತ್ತಾನೆ, ಆದರೆ ಆತನು ಒಂದು ಸ್ವಸ್ಥಚಿತ್ತವನ್ನು ಸಹ ಹೊಂದಿರುತ್ತಾನೆ. ಯಾವದೇ ಕ್ಷಣದಲ್ಲಾದರೂ ತಾನು ಎಲ್ಲವುಗಳ ಅಂತ್ಯವನ್ನು ಕಾಣಬಹುದೆಂಬುದನ್ನು ಬಲ್ಲವನಾಗಿರುತ್ತಾನೆ.

ಪ್ರತಿಯೊಂದು ಯುಗದಲ್ಲಿನ ಪ್ರತಿಯೊಬ್ಬ ಕ್ರೈಸ್ತನು ಸಹ ಯೇಸುವು ಯಾವ ಕ್ಷಣಲ್ಲಾದರೂ ಬರಬಲ್ಲನೇನೋ ಎಂಬಂತೆ ಜೀವಿಸಬೇಕು. ನಾವು ಎಚ್ಚರವಾಗಿಯೂ ಸ್ವಸ್ಥಚಿತ್ತರಾಗಿಯೂ ಜೀವಿಸಬೇಕು. EC

## ಸ್ವಸ್ಥಚಿತ್ತದ ಜೀವನ (5:8-11)

ಥೆಸಲೋನಿಕದವರು ಬೆಳಕಿನ ಮಕ್ಕಳಾಗಿದ್ದಾರೆ ಮತ್ತು ಅವರಿಗೆ ಆ ದಿನವು ಅನಿರೀಕ್ಷಿತವಾಗಿರುವದಿಲ್ಲ ಎಂದು ಪೌಲನು ಹೇಳಿದನು. ಅವರು ಎಚ್ಚರಿಕೆಯಿಂದಲೂ ಸ್ವಸ್ಥಚಿತ್ತರಾಗಿಯೂ ಇರಬೇಕೆಂದು ಅವರಿಗೆ ಅಪ್ಪಣೆ ಕೊಟ್ಟನು. ಹೇಗೂ, ಸ್ವಸ್ಥಚಿತ್ತರಾಗುವದರೊಂದಿಗೆ ಕೆಲವೊಂದು ಜವಾಬ್ದಾರಿಗಳು ಬರುತ್ತವೆ. ಸ್ವಸ್ಥಚಿತ್ತರಾದ ಜನರು ಹೇಗೆ ಜೀವಿಸುವರು?

*ವಿಶ್ವಾಸಪ್ರೀತಿಗಳೆಂಬ ವಜ್ರಕವಚ.* ಕ್ರೈಸ್ತನು ಒಬ್ಬ ಸೈನಿಕನಾಗಿದ್ದಾನೆ, ಮತ್ತು ಯುದ್ಧಾಯುಧಗಳನ್ನು ಧರಿಸಿಕೊಳ್ಳತಕ್ಕದ್ದು. ಆತನು ತನ್ನ ಹೃದಯವನ್ನು ಕಾಪಾಡಿ ಅದನ್ನು ಒಂದು ಸಿದ್ಧತೆಯ ಸ್ಥಿತಿಯಲ್ಲಿಡುವಂತಹ ವಿಶ್ವಾಸಪ್ರೀತಿಗಳೆಂಬ ವಜ್ರಕವಚವನ್ನು ಧರಿಸಿಕೊಳ್ಳುವ ತೀರ್ಮಾನವನ್ನು ಮಾಡುತ್ತಾನೆ.

*ನಿರೀಕ್ಷೆಯೆಂಬ ಶಿರಸ್ತ್ರಾಣ.* ತಾನು ಸುವಾರ್ತೆಗೆ ವಿಧೇಯನಾದದ್ದರಿಂದ ಮತ್ತು ಯೇಸುವಿನ ರಕ್ತದ ಮೂಲಕ ಶುದ್ಧನಾಗುವದರಿಂದ ರಕ್ಷಿಸಲ್ಪಟ್ಟಿದ್ದಾನೆಂಬುದನ್ನು ಆತನು ಬಲ್ಲವನಾಗಿರುತ್ತಾನೆ. ಆತನಿಗಾದರೋ ರಕ್ಷಣೆಯು ಈಗಿನ ವಾಸ್ತವಾಂಶ ಮತ್ತು ಒಂದು ಭವಿಷ್ಯದ ನಿರೀಕ್ಷೆ ಎರಡೂ ಆಗಿರುತ್ತದೆ. ಆತನು ಗತಕಾಲದ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದಾನೆ, ಆತನು ಬೆಳಕಿನಲ್ಲಿ ನಡೆಯುವ ಮೂಲಕ ರಕ್ಷಿಸಲ್ಪಟ್ಟವನಾಗಿಯೇ

ಉಳಿದನು, ಮತ್ತು ಆತನು ಪರಲೋಕದಲ್ಲಿ ನಿತ್ಯಜೀವವನ್ನು ಪಡೆಯಲು ಎದುರು ನೋಡುವವನಾಗಿದ್ದಾನೆ.

*ಪ್ರಬೋಧನೆಯ ಮಾತು.* ಅವರು ಕ್ರಿಸ್ತನಿಗೆ ನಂಬಿಗಸ್ತರಾಗಿರುವಂತೆ ಒಬ್ಬರನ್ನೊಬ್ಬರು ಪ್ರಬೋಧಿಸಬೇಕು, ಒಬ್ಬರೊಬ್ಬರ ಭಕ್ತಿವೃದ್ಧಿಯನ್ನು ಮಾಡಬೇಕು, ಮತ್ತು ಸಹೋದರರಂತೆ ಒಟ್ಟಿಗೆ ನೆಲೆಸಬೇಕೆಂದು ಪೌಲನು ಅವರಿಗೆ ಹೇಳುತ್ತಾನೆ.

ನಾವು ನಿದ್ದೆಯಲ್ಲಿದ್ದರೂ ಸರಿಯೇ ಎಚ್ಚರವಾಗಿದ್ದರೂ ಸರಿಯೇ, ನಾವು ಒಟ್ಟಾಗಿಯೇ ಇರುವೆವು. ಈ ಉಲ್ಲೇಖವು ಕ್ರಿಸ್ತನು ಪುನಃ ಬರುವ ಮುನ್ನ ನಾವು ಮರಣಿಸುವ ಅಥವಾ ಆತನು ಭೂಮಿಗೆ ಹಿಂದಿರುಗಿ ಬಂದಾಗ ಇನ್ನೂ ಬದುಕಿರುವದನ್ನು ಸೂಚಿಸುವದಾಗಿದೆ (ವಚನಗಳು 9, 10). ನಾವು ಜೀವದಿಂದಿದ್ದರು ಸರಿಯೇ ಸತ್ತಿದ್ದರೂ ಸರಿಯೇ, ನಾವೆಲ್ಲರೂ ಒಟ್ಟಿಗೆ ಇರುವೆವೆಂದು ಆತನು ಹೇಳುತ್ತಾನೆ. ಕ್ರೈಸ್ತರು ಈ ಜೀವನದಲ್ಲಿ ಮತ್ತು ಮುಂದೆ ಬರಲಿರುವ ಜೀವನದಲ್ಲಿ ಒಟ್ಟಿಗೆ ಇರುವರು.

ಸ್ವಸ್ಥಚಿತ್ತರಾಗಿರುವದು ಮೂರು ಬೇರೆ ಬೇರೆ ದಿಕ್ಕುಗಳಿಗೆ ಸಾಗುತ್ತದೆ: ಕರ್ತನ ಕಡೆಗೆ, ಸಹೋದರರ ಕಡೆಗೆ, ಮತ್ತು ಭವಿಷ್ಯದ ಕಡೆಗೆ. ನಮಗೆ ನಮ್ಮ ಕರ್ತನ ಕಡೆಗೆ ಸ್ವಸ್ಥಚಿತ್ತರಾಗಿರುವ, ಕರ್ತನ ಜನರ ಕಡೆಗೆ ಸ್ವಸ್ಥಚಿತ್ತರಾಗಿರುವ, ಮತ್ತು ನಮ್ಮ ಕರ್ತನ ಬರೋಣದ ಕಡೆಗೆ ಸ್ವಸ್ಥಚಿತ್ತರಾಗಿರುವ ಜವಾಬ್ದಾರಿ ಹೊಂದಿದ್ದೇವೆ. EC

## ಎಲ್ಲಾ ದಿನಗಳ ದಿನ (5:1-11)

ಯೇಸುವಿನ ಪುನರಾಗಮನವು ನಂಬಿಗಸ್ತರಾದ ಕ್ರೈಸ್ತರಿಗೆ ನಿರೀಕ್ಷೆಯನ್ನು ಒದಗಿಸುತ್ತದೆ. ಅದು ಭವಿಷ್ಯದ ನಿರೀಕ್ಷೆಯನ್ನು ಒದಗಿಸುತ್ತದಾದ್ದರಿಂದ, ಅದು ಸಮಾಧಾನ ಮತ್ತು ಆದರಣೆಯನ್ನು ಸಹ ಒದಗಿಸುತ್ತದೆ.

ನಾವು ಯೇಸುವಿನ ಬರೋಣವನ್ನು ಎದುರು ನೋಡುತ್ತಿರುವ ವೇಳೆ, ನಾವು ಆ ಮಹಾ ದಿನಕ್ಕಾಗಿ ಸಿದ್ಧತೆಯುಳ್ಳವರಾಗಿ ಬಾಳಬೇಕು. 1 ಥೆಸಲೋನಿಕ 5ನೇ ಅಧ್ಯಾಯದ ಮೊದಲ ಭಾಗವು ಈ ವಿಷಯವಾಗಿ ಮಾತಾಡುತ್ತದೆ. ಥೆಸಲೋನಿಕದಲ್ಲಿರುವ ಕ್ರೈಸ್ತರನ್ನು ಪ್ರೋತ್ಸಾಹಿಸುವದಕ್ಕೋಸ್ಕರ ಯೇಸುವಿನ ಪುನರಾಗಮನದ ಕುರಿತ ಚರ್ಚೆಯನ್ನು ಸೇರ್ಪಡೆಗೊಳಿಸಲಾಗಿತ್ತು, ಹೊರತು ಯೇಸುವು ಹಿಂದಿರುಗಿ ಬರುವನೆಂಬುದು ಅವರಿಗೆ ಗೊತ್ತಿರಲಿಲ್ಲ ಅಥವಾ ಅವರು ಭಕ್ತಿಹೀನ ಜೀವಿತಗಳನ್ನು ನಡಿಸುತ್ತಾ ಆತನ ಬರೋಣಕ್ಕಾಗಿ ಸಿದ್ಧತೆಯಿಲ್ಲದರಾಗಿದ್ದರೆಂಬ ಕಾರಣಕ್ಕಾಗಿ ಅಲ್ಲ. ಈ ವಿಭಾಗವು ಹೀಗೆ ಆರಂಭಗೊಳ್ಳುತ್ತದೆ, ". . . ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ" (5:1b) ಮತ್ತು "ನೀವು ಈಗ ಮಾಡುತ್ತಿರುವ ಪ್ರಕಾರವೇ" ಎಂಬದರೊಂದಿಗೆ ಅಂತ್ಯಗೊಳ್ಳುತ್ತದೆ (5:11b), ಇದು ಅವರಿಗೆ ಆತನ ಬರೋಣದ ಕುರಿತು ತಿಳಿದಿತ್ತು ಮತ್ತು ಉತ್ತಮವಾದ ಜೀವಿತಗಳನ್ನು ನಡಿಸುತ್ತಿದ್ದರೆಂಬುದನ್ನು ತೋರಿಸುತ್ತದೆ. ಈಗ ಅವರು ಮಾಡುತ್ತಿರುವದರ ಆಧಾರದಲ್ಲಿಯೇ ಇನ್ನಷ್ಟು ಪರಿಣಾಮಕಾರಿ ಜೀವಿಸುವಿಕೆಯಲ್ಲಿ ಬೆಳೆಯಬೇಕೆಂದು ಪೌಲನು ಥೆಸಲೋನಿಕದವರನ್ನು ಪ್ರೋತ್ಸಾಹಿಸುತ್ತಿದ್ದಾನೆ.

ಯೇಸುವಿನ ಬರೋಣದ ಕುರಿತ ವಾಸ್ತವಾಂಶಗಳನ್ನು ನಾವು ಎಷ್ಟು ಹೆಚ್ಚು

ಅರಿತುಕೊಳ್ಳುತ್ತೇವೋ ಅಷ್ಟು ಹೆಚ್ಚು ಜ್ಞಾನದಿಂದ ನಮ್ಮ ಜೀವಿತಗಳನ್ನು ಬಳಸಿಕೊಳ್ಳಬಹುದು ಮತ್ತು ಆ ಪುನರಾಗಮನಕ್ಕಾಗಿ ಸಿದ್ಧರಾಗಿರಬಲ್ಲೆವು. ಆತನ ಪುನರಾಗಮನವು ಹೇಗಿರುವದು, ಮತ್ತು ನಾವು ಹೇಗೆ ಸಿದ್ಧರಾಗಿರಬಲ್ಲೆವು?

*ಆತನ ಪುನರಾಗಮನಕ್ಕಾಗಿ ಸಿದ್ಧರಾಗಿರುವದು (5:1-3).* ಪೌಲನು ಯೇಸುವಿನ ಬರೋಣದ ನಿಶ್ಚಿತತೆಯ ಕುರಿತು ಮಾತಾಡಿದ್ದನು (5:1). ಅಲ್ಲದೆ ಆತನು ಆ ಪುನರಾಗಮನದ ಗಳಿಗೆಯ ಕುರಿತ ಅನಿಶ್ಚಿತತೆಯನ್ನು ಸಹ ತಿಳಿಸಿದ್ದನು. ಈ ಎರಡೂ ಸಂದೇಶಗಳನ್ನು ಥೆಸಲೋನಿಕದ ಎಳೆಯ ಕ್ರೈಸ್ತರು ಸ್ವೀಕರಿಸಿಕೊಂಡಿದ್ದರು.

ಕೆಲವು ಸಾರಿ ಬೋಧಕರಾಗಿ ನಾವು ಒಂದು ವಿಷಯದ ಕುರಿತು ಕಲಿಸಿಯಾದ ಬಳಿಕ ಅದರ ಬಗ್ಗೆ ಇನ್ನಷ್ಟು ಬೋಧನೆಯ ಅನಾವಶ್ಯಕವೆಂದು ಯೋಚಿಸುತ್ತೇವೆ. ಈ ಸಂದೇಶವು ನಿರುತ್ಸಾಹದಿಂದ ಕೂಡಿರಲಿಲ್ಲ; ಇದು ಪುನರಾವರ್ತಿಸಬೇಕೆಂದು ದೇವರು ಬಯಸಿದ ಒಂದು ಸಂದೇಶವಾಗಿತ್ತು. ಅಲ್ಲದೆ ಅದು ಬೆಳೆಯುವಂತೆಯೂ ಪರಿಪಕ್ವಗೊಳ್ಳುವಂತೆಯೂ ಸಭೆಗೆ ಸಹಾಯವಾಗುವದಾಗಿತ್ತು.

ಸಂದೇಶವು ಏನಾಗಿತ್ತು? ಅದು ರಾತ್ರಿಯಲ್ಲಿ ಕಳ್ಳನು ಬರುವ ರೀತಿಯಲ್ಲಿ ಕರ್ತನ ಬರೋಣವು ಥಕ್ಕನೆ ಮತ್ತು ಅನಿರೀಕ್ಷಿತವಾಗಿ ಬರುವದೆಂಬ ಸಂದೇಶವಾಗಿತ್ತು (5:2). ಯೇಸುವು ಇಂಥಿಂಥ ದಿನ ಮತ್ತು ಸಮಯದಲ್ಲಿ ಬರುವನೆಂದು ಮುಂತಿಳಿಸುವದಕ್ಕೆ ಪ್ರಯತ್ನಿಸಿರುವಂತಹ ಧಾರ್ಮಿಕ ನಾಯಕರಿಂದ ಈ ಸಂದೇಶವು ಅಂಗೀಕರಿಸಲ್ಪಟ್ಟಿರುವದಿಲ್ಲ. ಅವರು ಹೇಳಿಕೊಂಡಿದ್ದೆಲ್ಲವೂ ಕೇವಲ ವ್ಯರ್ಥವಾದ ಊಹಾಪೋಹಗಳಾಗಿರುತ್ತವೆ. ಅಂಥ ಘೋಷಿಸುವಿಕೆಗಳನ್ನು ಅನುಸರಿಸುವವರು ತಮ್ಮ ನಂಬಿಕೆಯನ್ನು ದೇವರ ವಾಕ್ಯದಲ್ಲಿ ಅಲ್ಲ, ಆದರೆ ಮನುಷ್ಯರಲ್ಲಿಯೇ ಇಡುವವರಾಗಿರುತ್ತಾರೆ. ಅವರು ನಿರಾಶೆಗೊಳ್ಳುವದು ಖಚಿತವಾಗಿರುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಪೌಲನಂತಹ ನಾಯಕರು ಯೇಸುವಿನ ಪುನರಾಗಮನದ ಕುರಿತ ನಿಶ್ಚಿತತೆಯುಳ್ಳ ಮತ್ತು ಅದರ ಕಾಲದ ಬಗ್ಗೆ ಅನಿಶ್ಚಿತತೆಯುಳ್ಳ ದೇವರ ಸಂದೇಶವನ್ನು ನಂಬಿದರು.

ಥೆಸಲೋನಿಕದವರು ಕ್ರೈಸ್ತರಾದಾಗ, ಯೇಸು ತಮ್ಮನ್ನು ರಕ್ಷಿಸುವನೆಂದು ಅವರಿಗೆ ಗೊತ್ತಿತ್ತು. ಅವರು ದೇವರ ಕೃಪಾಶ್ರಯದಲ್ಲಿರುವರೆಂದು ಮತ್ತು ಹೀಗೆ ತಮ್ಮ ಪಾಪಗಳ ಪರಿಣಾಮಗಳಿಂದ ತಪ್ಪಿಸಿಕೊಳ್ಳುವರೆಂದು ಬಲ್ಲವರಾಗಿದ್ದರು (ನೋಡಿರಿ 1:10). ಇತರ ಜನರು ಹೇಳಿಕೊಳ್ಳುತ್ತಿದ್ದೇನೆಂದರೆ ಯೇಸು ಹಿಂದಿರುಗಿ ಬರುವದಿಲ್ಲ ಮತ್ತು ತಮ್ಮ ಪಾಪಗಳಿಗೆ ಅವರನ್ನು ಹೊಣೆಗಾರರಾಗಿಸುವದಿಲ್ಲ ಎಂಬದೆ. ತಮ್ಮಮ್ಮ ಭದ್ರತೆಗೆ ಯಾವದೂ ಸಹ ಗಂಡಾಂತರವನ್ನೊಡ್ಡಲಾರದು ಎಂದು ಅವರು ಭಾವಿಸಿಕೊಂಡಿದ್ದರು. ಯೇಸುವಿನ ಬರೋಣವು ಅವಿಶ್ವಾಸಿಗಳ ಮೇಲೆ ದಂಡನೆಯನ್ನು ಮತ್ತು ನಾಶನವನ್ನು ತರುವದು. ಗರ್ಭಿಣಿ ಸ್ತ್ರೀಗೆ ಪ್ರಸವವೇದನೆಯು ಬರುವ ಹಾಗೆಯೇ, ಅದು ಬರುವದು (5:3). ಯೇಸುವು ತನ್ನಲ್ಲಿ ನಂಬಿಕೆಯಿಟ್ಟಿರುವವರನ್ನು ಕರೆದೊಯ್ಯುವದಕ್ಕೆ ಬರಲಿರುವನು. ನಂಬಿಕೆಯಿಲ್ಲದವರು ತಮ್ಮ ಪಾಪಗಳಿಗೆ ಸಿಕ್ಕುವ ಪರಿಣಾಮಗಳನ್ನು ಅನುಭವಿಸುವರು.

ಯೇಸುವಿನ ಪುನರಾಗಮನವು ಥಕ್ಕನೆ ಆಗುವದೆಂದು ಹೇಳಿದ್ದು ಕ್ರೈಸ್ತರನ್ನು ಹೆದರಿ ವಿಧೇಯರಾಗುವಂತೆ ಮಾಡುವದಕ್ಕಾಗಿ ಆಗಿರಲಿಲ್ಲ. ಅವರೆಲ್ಲರಿಗೂ ಸತ್ಯದ ಮತ್ತು ಆ

ವಿಷಯದ ಅರಿವು ಇತ್ತು. ದೇವರ ಪಕ್ಷದಲ್ಲಿರುವದರ ಮತ್ತು ಅವರ ಆತ್ಮೀಕ ಹಿತಾಸಕ್ತಿಯನ್ನು ನೋಡಿಕೊಳ್ಳುವಂತೆ ಯೇಸುವಿಗೆ ಅನುಮತಿಸುವರ ಪ್ರಯೋಜನಗಳ ಕುರಿತು ಅವರಿಗೆ ಮರು ನಿಶ್ಚಯಪಡಿಸುವಕ್ಕಾಗಿಯೇ ಈ ಸಂದೇಶವು ತಿಳಿಸಲ್ಪಟ್ಟಿತ್ತು. ಈ ಮಧ್ಯದಲ್ಲಿ, ಅವರು ಯೇಸುವಿನ ಬಯಕೆಯಂತೆ ತಮ್ಮ ಜೀವಿತಗಳನ್ನು ನಡಿಸುವದಕ್ಕೆ ಶಕ್ತರಾಗುವರು.

ಯೇಸುವಿನ ನಿಶ್ಚಿತವಾದ ಬರೋಣದ ಕುರಿತು ನಮಗೆ ಮನದಟ್ಟಾಗಿರುವದೋ? ಅದು ಯಾವ ಗಳಿಗೆಯಲ್ಲಾದರೂ ಸಂಭವಿಸಬಹುದೆಂಬುದನ್ನು ನಾವು ಗ್ರಹಿಸಿಕೊಂಡವರಾಗಿದ್ದೇವೋ? ನಾವು ನಮ್ಮ ದೈನಂದಿನ ಜೀವಿತಗಳಲ್ಲಿ ಇದನ್ನ ನೆನಪಿನಲ್ಲಿಟ್ಟುಕೊಂಡಿರುವೆವೋ? ಪ್ರತಿ ವಾರ ಮತ್ತು ಪ್ರತಿ ದಿನ ಸಹ ಈ ಮಹಾ ಸತ್ಯವನ್ನು ನಮಗೆ ಜ್ಞಾಪಕಮಾಡಿಕೊಂಡರೆ ಉತ್ತಮವಾಗಿರುವದು!

*ಬೆಳಕಿನ ಮಕ್ಕಳಾಗಿರುವದು (5:4-7).* ಹೊಸ ಒಡಂಬಿಕೆಯಲ್ಲಿ, ಬೆಳಕು ಮತ್ತು ಹಗಲು ಅನೇಕ ಸಾರಿ ದೇವರಿಗೆ ಸಂಬಂಧಿಸಲ್ಪಟ್ಟಿರುತ್ತವೆ; ಕತ್ತಲು ಮತ್ತು ರಾತ್ರಿಗಳು ಅನೇಕ ಸಾರಿ ಸೈತಾನನಿಗೆ ಸಂಬಂಧಗೊಳಿಸಲ್ಪಟ್ಟಿರುತ್ತವೆ. "ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ" ಎಂದು ನಮಗೆ ಹೇಳಲ್ಪಟ್ಟಿರುತ್ತದೆ (1 ಯೋಹಾನ 1:5b). ಯೇಸುವು "ಲೋಕಕ್ಕೆ ಬೆಳಕು" ಎಂದು ಕರೆಯಲ್ಪಟ್ಟಿದ್ದಾನೆ (ಯೋಹಾನ 8:12). ದೇವರನ್ನು ಹಿಂಬಾಲಿಸುವವರು "ಬೆಳಕಿನ ಮಕ್ಕಳು" ಆಗಿದ್ದಾರೆ (ಎಫೆಸ 5:8). ಅದಕ್ಕೆ ತದ್ವಿರುದ್ಧವಾಗಿ, ಸೈತಾನನು "ಅಂಧಕಾರದ ಧೊರೆತನ" ಹೊಂದಿದ್ದಾನೆ (ಕೊಲೊಸ್ಸೆ 1:13), ಮತ್ತು ಆತನನ್ನು ಹಿಂಬಾಲಿಸುವವರು "ಕತ್ತಲೆಯಲ್ಲಿ ನಡೆಯುವವರು" ಆಗಿದ್ದಾರೆ (ಯೋಹಾನ 12:35).

ಈ ಮಾತುಗಳು ದೇವರ ಸ್ವಭಾವ ಮತ್ತು ಸೈತಾನನ ಸ್ವಭಾವದ ನಡುವೆ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸುತ್ತವೆ. ದೇವರ ವಾಕ್ಯವು ಯಾವಾಗಲೂ ಸತ್ಯವಾಗಿರುತ್ತದೆ (ಯೋಹಾನ 17:17), ಆದರೆ ಸೈತಾನನು ಸುಳ್ಳುಗಾರನು ಮತ್ತು ಸುಳ್ಳುಗಳ ತಂದೆಯಾಗಿದ್ದಾನೆ (ಯೋಹಾನ 8:44). ಕ್ರೈಸ್ತರಾದ ನಮಗೆ ಈ ಪತ್ರಿಕೆಯು ಜ್ಞಾಪಿಸುವದೇನೆಂದರೆ ದೇವರು ನಮ್ಮನ್ನು ಪುತ್ರಸ್ವೀಕಾರ ಮಾಡಿಕೊಂಡಿರುವದರಿಂದ, ನಾವು "ಬೆಳಕಿನ ಮಕ್ಕಳು ಮತ್ತು ಹಗಲಿನ ಮಕ್ಕಳು" ಆಗಿದ್ದೇವೆ (5:5a).

ದೇವರು ಮತ್ತು ಸೈತಾನನ ನಡುವೆ ತದ್ವಿರುದ್ಧತೆಯಿರುವ ಪ್ರಕಾರವೇ, ದೇವರ ಪಕ್ಷದಲ್ಲಿರುವವರು ಮತ್ತು ಸೈತಾನನ ಪಕ್ಷದಲ್ಲಿರುವವರ ನಡುವೆ ಸಹ ತದ್ವಿರುದ್ಧತೆಯಿರತಕ್ಕದ್ದು (5:5b-7). ನಾವು ಪರಲೋಕದಲ್ಲಿರುವ ನಮ್ಮ ತಂದೆಯ ನಿಜವಾದ ಶಿಷ್ಯರಾಗಿದ್ದರೆ, ನಾವು ಆತನಂತೆಯೇ ಕಾಣಿಸುವೆವು. ನಾವು ನಮ್ಮ ತಂದೆಯಂತೆ ಹೇಗೆ ಕಾಣಿಸಿಕೊಳ್ಳುವದಕ್ಕೆ ಸಾಧ್ಯ? ನಾವು ನಡೆದುಕೊಳ್ಳುವ ರೀತಿಯಲ್ಲಿಯೇ! ಈ ನಡವಳಿಕೆಯನ್ನು "ಎಚ್ಚರವಾಗಿರುವಿಕೆ ಮತ್ತು ಸ್ವಸ್ಥಚಿತ್ತರಾಗಿರುವಿಕೆ" ಎಂದು ಬಣ್ಣಿಸಲ್ಪಟ್ಟಿರುತ್ತದೆ (ವ. 6b). ನಿರ್ಲಕ್ಷದ ಮನೋಭಾವ ಅಥವಾ ಅಮಲೇರಿದ ಮನಸ್ಸುವುಳ್ಳವರಾಗಿದ್ದರೆ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವದು ಕಷ್ಟಕರವಾಗುತ್ತದೆ.

ಥೆಸಲೋನಿಕದಲ್ಲಿ, ಕ್ರೈಸ್ತರಾಗಿ ಮಾರ್ಪಟ್ಟವರು ತಮ್ಮ ನಂಬಿಕೆಯ ನಿಮಿತ್ತವಾಗಿ ಹಿಂಸೆಗೆ ಗುರಿಯಾಗಿದ್ದರು. ದೇವರನ್ನು ಹಿಂಬಾಲಿಸುವದರಿಂದ ಅವರನ್ನು

ವಿಮುಖಗೊಳಿಸುವದಕ್ಕಾಗಿ ಸೈತಾನನು ತನಗೆ ಸಾಧ್ಯವಾದ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದನು. ಒಬ್ಬನು ಎಚ್ಚರಿಕೆಯಾಗಿಯೂ ತನ್ನ ಇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡವನಾಗಿಯೂ ಇರಲಿಲ್ಲವಾಗಿದ್ದರೆ ಆತನ ಮನವೊಲಿಸಿ ವಿಗ್ರಹಗಳನ್ನು ಆರಾಧಿಸುವದಕ್ಕೆ ಜೊತೆಗೂಡುವಂತೆ ಮಾಡುವದು ಎಷ್ಟು ಸುಲಭವಾಗಿದ್ದಿರುತ್ತಿತ್ತು! ಅವನ ಸುತ್ತಲಿನವರು ತಮ್ಮ ಅನೈತಿಕತೆ ಮತ್ತು ಭಕ್ತಿಹೀನತೆಯಲ್ಲಿ ಅವನು ಪಾಲ್ಗೊಳ್ಳುವಂತೆ ಅಪೇಕ್ಷಿಸುವಾಗ ಆತನು ಅದರಲ್ಲಿ ಭಾಗಿಯಾಗುವದು ಎಷ್ಟು ಸುಲಭವಾಗಿರುತ್ತಿತ್ತು! ಹಳೇ ದಾರಿಗಳಿಗೆ ಜಾರಿಕೊಳ್ಳುವದು ಸುಲಭ ಮತ್ತು ಪ್ರಖ್ಯಾತವುಳ್ಳದ್ದಾಗಿರುತ್ತಿತ್ತು.

ಆ ಕ್ರೈಸ್ತರಿಗೆ ತಮ್ಮ ಸುತ್ತಲಿನ ಶೋಧನೆಗಳನ್ನು ಎದುರಿಸುವದಕ್ಕೆ, ದೇವರ ಪ್ರತಿಯೊಂದು ವಾಕ್ಯ ಮತ್ತು ಕ್ರಿಯೆಯನ್ನು ಗೌರವಿಸುವದಕ್ಕೆ ಜಾಗ್ರತೆಯಿಂದಿರುವದಕ್ಕೆ ಅವರಿಗೆ ಎಚ್ಚರಿಕೆಯುಳ್ಳ ಮನಸ್ಸುಗಳ ಅಗತ್ಯವಿತ್ತು. ಅವರು ವ್ಯತ್ಯಾಸವಾದ ಜನರಾಗಿದ್ದರು, ಮತ್ತು ಅದರ ಕಾರಣದಿಂದ ಜನರು ಅವರನ್ನು ಹಿಂಸಿಸಿದರು; ಆದರೆ ಅವರು ತಾವು ಯಾರ ಮಕ್ಕಳೆಂಬುದನ್ನು-ದೇವರ ಮಕ್ಕಳು-ತೋರ್ಪಡಿಸುತ್ತಿದ್ದರು.

ನಮ್ಮ ವಿಷಯವೇನು? ನಾವು ಎಚ್ಚರಿಕೆಯುಳ್ಳವರೂ ಸ್ವಸ್ಥಚಿತ್ತರೂ ಆಗಿದ್ದೇವೋ, ಅಥವಾ ನಾವು ಸುಲಭವಾಗಿ ಹಣವನ್ನು ಜೂಜಾಟದಲ್ಲಿ ಕಳೆಯುವಂತೆ, ದೇವರ ನಾಮವನ್ನು ವ್ಯರ್ಥವಾಗಿ ಬಳಸುವಂತೆ, ಅಥವಾ ಬೇರೆಯವರು ಮಾಡುತ್ತಿದ್ದಾರೆಂಬುದಕ್ಕಾಗಿ ನಾವೂ ನಮ್ಮ ಧಣಿಗಳಿಗೆ ವಂಚಿಸಬೇಕೆಂದು ಮನವೊಲಿಸಲ್ಪಡುತ್ತಿದ್ದೇವೋ? ಬಹಳಷ್ಟು ಜನರನ್ನು ಆಕರ್ಷಿಸುವಂತಹ ಸೈತಾನನ ವ್ಯರ್ಥವಾದ ಮತ್ತು ವಿನಾಶಕರವಾದ ಕಾಲಹರಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವದನ್ನು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ ನಾವು ಎಲ್ಲರಿಗಿಂತ ವ್ಯತ್ಯಾಸವಾದವರಾಗಿ ನಿಲ್ಲುತ್ತೇವೆ. ನಾವು ಎಚ್ಚರವಾಗಿ ಮತ್ತು ನಮ್ಮ ಇಂದ್ರಿಯಗಳನ್ನು ಸಂಪೂರ್ಣ ಹತೋಟಿಯಲ್ಲಿಟ್ಟುಕೊಳ್ಳಲು ಬಯಸುವ ಕಾರಣದಿಂದ ಡ್ರಗ್ಸ್ ಅಥವಾ ಮದ್ಯವನ್ನು ನಿರಾಕರಿಸುವದಾದರೆ ಭಿನ್ನವಾಗಿ ಕಾಣುವೆವು. ನಾವು ನಮ್ಮ ಪ್ರಭಾವವನ್ನು ಬಲಹೀನಗೊಳಿಸುವ ಅಥವಾ ಕೆಟ್ಟ ಮಾದರಿಗಳನ್ನು ತೋರುವವರನ್ನಾಗಿ ಮಾಡಬಹುದಾದ ಸ್ಥಳಗಳಿಗೆ ಹೋಗದಿರುವದಕ್ಕೆ ತೀರ್ಮಾನಿಸಿಕೊಳ್ಳುವದಾದರೆ ಭಿನ್ನರಾಗಿ ನಿಲ್ಲುವೆವು. ನಾವು ಕತ್ತಲೆಯಿಂದ ತುಂಬಿರುವ ಲೋಕದಲ್ಲಿ ಹಗಲಿನ ಮಕ್ಕಳಾಗಿ ಜೀವಿಸುವದಾದರೆ ಬೇರೆಯವರಿಂದ ಗಮನಿಸಲ್ಪಡುವೆವು. ಫಿಲಿಪ್ಪಿಯಲ್ಲಿನ ಕ್ರೈಸ್ತರಿಗೆ ಹೇಳಲ್ಪಟ್ಟ ಪ್ರಕಾರ, "ಹೀಗೆ ನೀವು ನಿರ್ದೋಷಿಗಳೂ ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗುವಿರಿ" (ಫಿಲಿಪ್ಪಿ 2:15).

ದೇವರಂತಿರುವ ಹಾಗೆ, ಯೇಸುವು ಜೀವಿಸಿದ ರೀತಿ ಜೀವಿಸಬೇಕು "ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" ಎಂಬದಾಗಿ ನಮಗೆ ಉತ್ತೇಜನಗೊಳಿಸಲ್ಪಡುತ್ತಿರುವ ಹಾಗೆಯೇ ಅಂದಿನ ಕ್ರೈಸ್ತರಿಗೆ ಉತ್ತೇಜನಗೊಳಿಸಲಾಗಿತ್ತು (ಎಫೆಸ 5:1). ನಾವು ಪರಲೋಕದಲ್ಲಿರುವ ನಮ್ಮ ತಂದೆಯ ರೀತಿಯಲ್ಲಿ ಕಾಣಿಸುತ್ತೇವೋ? ಜನರು ಹೀಗೆ ಹೇಳಬಲ್ಲರೋ, "ಈತನು ಪರಲೋಕದಲ್ಲಿರುವ ಆತನ ತಂದೆಯ

ರೀತಿಯಲ್ಲಿಯೇ ಕಾಣಿಸುತ್ತಾನೆ"? ಅದೊಂದು ಎಲ್ಲಾ ಶ್ಲಾಘನೆಗಳಿಗಿಂತಲೂ ದೊಡ್ಡ ಶ್ಲಾಘನೆಯಾಗುವದು!

*ದೇವರ ಯುದ್ಧಾಯುಧಗಳನ್ನು ಧರಿಸಿಕೊಳ್ಳುವದು (5:8-10).* ಈ ವಿಧದಲ್ಲಿ ಜೀವಿಸುವಂತೆ ಥೆಸಲೋನಿಕದವರು ತಮ್ಮನ್ನು ಹೇಗೆ ಸಿದ್ಧಪಡಿಸಿಕೊಳ್ಳಬಲ್ಲರು? ಅವರು ಹೇಗೆ ಎಚ್ಚರವಾಗಿದ್ದು ಸೈತಾನನು ತರುವ ಸವಾಲುಗಳನ್ನು ಎದುರಿಸುವದಕ್ಕಾಗಿ ಸಿದ್ಧರಾಗಿರಬಲ್ಲರು? ದೇವರ ಸಂಪನ್ಮೂಲಗಳನ್ನು ಬಳಸಿಕೊಳ್ಳುವದರಿಂದಲೇ. ದೇವರಂತಿರುವದು ಸ್ವಭಾವಿಕವಾಗಿಯೇ ಬರುವಂತದ್ದಲ್ಲ. ಅವರು ತಮ್ಮ ಮೂಲಪ್ರವೃತ್ತಿಗಳನ್ನು ಅನುಸರಿಸುವ ಮೂಲಕ ದೇವರನ್ನು ಅನುಸರಿಸುವದಕ್ಕೆ ಸಾಧ್ಯವಿರಲಿಲ್ಲ. ಅವರು ತಮ್ಮ ಸ್ವಬಯಕೆಗಳನ್ನು ನೆರವೇರಿಸುವ ಮೂಲಕ ದೇವರ ಮಕ್ಕಳಾಗುವದಕ್ಕೆ ಸಾಧ್ಯವಿರಲಿಲ್ಲ. ಅವರು ದೇವರ ಸಲಕರಣೆಯನ್ನು ಬಳಸಬೇಕಿತ್ತು, "ವಿಶ್ವಾಸಪ್ರೀತಿಗಳೆಂಬ ವಜ್ರಕವಚವನ್ನೂ ರಕ್ಷಣೆಯ ನಿರೀಕ್ಷೆಯೆಂಬ ಶಿರಸ್ತ್ರಾಣವನ್ನೂ ಧರಿಸಿಕೊಂಡು" ಇರಬೇಕಿತ್ತು (5:8b). ಅವರ ವಿಷಯದಲ್ಲಿ ದೇವರು ಹೊಂದಿದ್ದ ಮುಖ್ಯವಾದ ಗುರಿಯು ಅವರ ರಕ್ಷಣೆಯೇ ಆಗಿತ್ತು, ಮತ್ತು ಅದು ಅವರ ಮುಖ್ಯ ಗುರಿಯು ಸಹ ಆಗಿರಬೇಕಿತ್ತು. ದೇವರು ಅವರಿಗೆ ಸಹಾಯವನ್ನು ಮಾಡಲಿದ್ದನು.

ದೇವರು ನಮ್ಮ ರಕ್ಷಣೆಯನ್ನು ಸಹ ಬಯಸುತ್ತಾನೆ, ಮತ್ತು ಕತ್ತಲೆಯ ರಾಜ್ಯದಿಂದ ಎದುರಾಗುವ ಗಂಡಾಂತರಗಳನ್ನು ಎದುರಿಸುವದಕ್ಕೆ ನಮ್ಮನ್ನು ಸಜ್ಜುಗೊಳಿಸುವನು. ನಾವು ಯಾವ ಸಲಕರಣೆಯನ್ನು ಬಳಸಬೇಕೆಂದು ದೇವರು ಬಯಸುತ್ತಾನೆ? ವಿಶ್ವಾಸ, ಪ್ರೀತಿ, ಮತ್ತು ನಿರೀಕ್ಷೆ.

ನಾವು ದೇವರಲ್ಲಿ ಭರವಸೆಯನ್ನಿಡುವಾಗ, ಆತನನ್ನು ಮತ್ತು ನಮ್ಮ ಸಹೋದರರನ್ನು ಪ್ರೀತಿಸುವಾಗ, ಮತ್ತು ನಮ್ಮ ನಿತ್ಯವಾದ ಹಿತಕ್ಕೋಸ್ಕರ ಆತನನ್ನೇ ದೃಷ್ಟಿಸುವಾಗ, ನಾವು ಕತ್ತಲೆಯ ಲೋಕವೊಂದರಲ್ಲಿ ಬೆಳಕಾಗಿ ಪ್ರಕಾಶಿಸುವವರಾಗುತ್ತೇವೆ. ನಾವು ಕತ್ತಲೆಯ ರಾಜ್ಯವನ್ನು ಮತ್ತು ಅದರ ಅರಸನನ್ನು-ಸೈತಾನನನ್ನು-ಎದುರಿಸುವವರಾಗುತ್ತೇವೆ. ಮಕ್ಕಳು ಹೇಗೆ ತಂದೆತಾಯಿಗಳನ್ನು ಪ್ರೀತಿಸುತ್ತಾರೆ, ವಿಶ್ವಾಸಿಸುತ್ತಾರೆ, ಮತ್ತು ತಮ್ಮ ಹಿತಕ್ಕೋಸ್ಕರ ಅವರ ಮೇಲೆಯೇ ಅವಲಂಬನೆಗೊಳ್ಳುತ್ತಾರೋ ಹಾಗೆಯೇ, ನಾವು ನಮ್ಮ ಜೀವಿತಗಳನ್ನು ನಮ್ಮ ತಂದೆಯ ಹಸ್ತಗಳಲ್ಲಿಡಬೇಕು. ಆತನಲ್ಲಿ ಭರವಸೆಯಿಡಿರಿ, "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುವನು" (1 ಪೇತ್ರ 5:7).

*ಒಬ್ಬರಿಗೊಬ್ಬರು ಸಹಾಯ ಮಾಡುವದು (5:11).* ದೇವರು ನಮ್ಮ ತಂದೆಯಾಗಿದ್ದನಾದ್ದರಿಂದ, ನಾವು ಸಹೋದರರು ಮತ್ತು ಸಹೋದರಿಯರಾಗಿದ್ದೇವೆ. ಸಭೆಯ ಸದಸ್ಯರಾಗಿ ನಮ್ಮ ಕುಟುಂಬಕ್ಕೆ ಸಹಾಯವನ್ನು ಮಾಡುವದು ನಮ್ಮ ಪ್ರಾಮುಖ್ಯವಾದ ಪಾತ್ರವಾಗಿರುತ್ತದೆ.

ನಮ್ಮ ಆತ್ಮೀಕ ಸಹೋದರರು ಹಾಗೂ ಸಹೋದರಿಯರಿಗೆ ಸಹಾಯವನ್ನು ಮಾಡುವ ಕುರಿತು ದೇವರು ನಮಗೆ ಮಾರ್ಗಸೂಚಿಗಳನ್ನು ಕೊಟ್ಟಿರುತ್ತಾನೆ: "ನೀವು . . . ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ"

(5:11). ಅದು ನಮ್ಮ ಗುರಿಯಾಗಿದೆಯೋ? ನಾವು ನಮ್ಮ ಸಹೋದರರನ್ನು ಮತ್ತು ಸಹೋದರಿಯರನ್ನು ನೋಡಿ, "ಈತನ ಭಕ್ತಿವೃದ್ಧಿಯಾಗುವ ಹಾಗೆ ನಾನು ಈ ವ್ಯಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದೇನೆ" ಎಂದು ಯೋಚಿಸಬಲ್ಲೆವೋ? "ನೀವು ಭಕ್ತಿವೃದ್ಧಿ ಹೊಂದಬೇಕೆಂಬುದಕ್ಕಾಗಿ ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತಿದ್ದೇನೆ" ಎಂದು ನಾವು ಅವರಿಗೆ ಮುಖಾಮುಖಿಯಾಗಿ ಮತ್ತು ಸಂಭಾಷಿಸುವ ವೇಳೆ ಹೇಳಬಲ್ಲೆವೋ? ಒಬ್ಬ ಜೊತೆಯ ಕ್ರೈಸ್ತನು ನಮ್ಮಲ್ಲೊಬ್ಬರ ಕುರಿತಾಗಿ, "ನಾನು ಭಕ್ತಿವೃದ್ಧಿ ಹೊಂದುವಂತೆ ನನ್ನನ್ನು ಪ್ರೋತ್ಸಾಹಗೊಳಿಸುತ್ತಿರುವಂಥ ಸಹೋದರನು ಅಥವಾ ಸಹೋದರಿಯು ಅಲ್ಲಿದ್ದಾನೆ ನೋಡು" ಎಂದು ಹೇಳಬಲ್ಲನೋ?

ಕತ್ತಲೆಯಿಂದ ಸುತ್ತವರೆಯಲ್ಪಟ್ಟಿರುವ ಬೆಳಕಿನ ರಾಜ್ಯವೊಂದರಲ್ಲಿ, ಈ ಕ್ರೈಸ್ತರು ಕೇವಲ ಆ ರಾಜ್ಯದ ಭಾಗವಷ್ಟೆ ಆಗಿರುವದಿಲ್ಲ, ಆದರೆ ದೇವರ ಕುಟುಂಬದ ಭಾಗವಾಗಿದ್ದಾರೆಂಬುದನ್ನು ಅವರಿಗೆ ನಿರಂತರವಾಗಿ ಜ್ಞಾಪಿಸಲ್ಪಡಬೇಕೆಂಬುದು ದೇವರ ಬಯಕೆಯಾಗಿರುತ್ತದೆ. ನಮಗೆ ಸಹಾಯ ಮಾಡುವಂತಹ, ಬೆಂಬಲಿಸುವಂತಹ, ಪ್ರೋತ್ಸಾಹಿಸುವಂತಹ, ನಮ್ಮ ಕಷ್ಟಗಳಲ್ಲಿ ಮನಃಮರಗುವಂತಹ, ನಮ್ಮನ್ನು ಎಚ್ಚರಿಸುವಂತಹ ಮತ್ತು ನಮ್ಮನ್ನು ಪ್ರೀತಿಸುವ ಸಹೋದರರು ಹಾಗೂ ಸಹೋದರಿಯರಿಂದ ತುಂಬಿರುವ ಸಭೆಗಿಂತಲೂ ಇದನ್ನು ಇನ್ಯಾರು ಉತ್ತಮ ದಾರಿಯಲ್ಲಿ ಜ್ಞಾಪಿಸಲ್ಪಡುವದಕ್ಕೆ ಸಾಧ್ಯ?

ಕ್ರೈಸ್ತರಾಗಿ ನಮಗೆ ಯಾವ ವಿಧದಲ್ಲಿಯೂ ಏಕಾಂಗಿತನದ ಭಾವನೆಯು, ಹೊರಗಿಡಲ್ಪಟ್ಟವರು, ನಮ್ಮನ್ನು ಬೇರೆಯವರು ಕಾಳಜಿ ಮಾಡುವದಿಲ್ಲ ಎಂಬ ಅಥವಾ ನಾವು ಅವರೊಳಗೆ ಸರಿಹೊಂದುವದಿಲ್ಲ ಎಂಬಂತಹ ಯಾವದೇ ಯೋಚನೆಗಳು ಇರಕೂಡದು. ನಮಗೆ ನಿರಂತರವಾದ ಬೆಂಬಲವನ್ನು ಕೊಡುವ ಪಾತ್ರವು ನಮ್ಮ ಜೊತೆಯ ಕ್ರೈಸ್ತರಿಗೆ ಇರುತ್ತದೆ-ನಾವು ಬದುಕುಳಿಯಬೇಕೆಂದು ಮಾತ್ರವೇ ಅಲ್ಲದೆ, ನಾವು ಬೆಳೆದು ಪರಿಪಕ್ವಗೊಳ್ಳುವ ಹಾಗೆ ಭಕ್ತಿವೃದ್ಧಿ ಮತ್ತು ಬಲವನ್ನು ಹೊಂದುವಂತೆ ಸಹ ಸಹಾಯವನ್ನು ಮಾಡುವರು.

ಏಕೆ ಇದು ಯಾವಾಗಲೂ ಸಭೆಯಲ್ಲಿ ನಡೆಯುವದಿಲ್ಲ? ಬಹುಶಃ ಈ ಸಹಾಯ ಮಾಡುವಿಕೆ ಬಗ್ಗೆ ನಮಗೆ ಕಲಿಸಲ್ಪಟ್ಟಿರುವದಿಲ್ಲವೆಂದು ತೋರುತ್ತದೆ. ಬಹುಶಃ ನಮಗೆ ಇದು ಕಲಿಸಲ್ಪಟ್ಟಿದೆ ಆದರೆ ಈ ಸಂದೇಶವನ್ನು ನಾವು ನಮ್ಮ ಹೃದಯದೊಳಗೆ ತೆಗೆದುಕೊಳ್ಳುವದಿಲ್ಲವೆಂದು ತೋರುತ್ತದೆ. ಬಹುಶಃ ನಮಗೆ ಸಹಾಯವನ್ನು ಕೇಳುವದಕ್ಕಾಗಲಿ ಅಥವಾ ಮಾಡುವದಕ್ಕಾಗಲಿ ಸಂಕೋಚ ಇರಬಹುದು.

ಈ ವಿಷಯದಲ್ಲಿ ದೇವರು ಬಯಸುವದನ್ನು ಮಾಡುವದು ಪ್ರತಿಯೊಬ್ಬ ಕ್ರೈಸ್ತನ, ಪ್ರತಿಯೊಂದು ಕುಟುಂಬದ, ಪ್ರತಿಯೊಂದು ಸಭೆಯ, ಪ್ರತಿಯೊಬ್ಬ ಹಿರಿಯನ, ಪ್ರತಿಯೊಬ್ಬ ಪ್ರಸಂಗಿಯ, ಪ್ರತಿಯೊಬ್ಬ ಬೋಧಕನ ಕಳಕಳಿಯಾಗಿರತಕ್ಕದ್ದು. ಈ ವಿಧದಲ್ಲಿ ಜೀವಿಸುವ ಮೂಲಕ ತನ್ನ ಕುಟುಂಬದಲ್ಲಿರುವ ಪ್ರತಿಯೊಬ್ಬರು ಸಹಾಯ ಮಾಡಬೇಕು ಮತ್ತು ಸಹಾಯವನ್ನು ಪಡೆಯಬೇಕೆಂಬುದು ದೇವರ ಇಚ್ಛೆಯಾಗಿದೆ. ಈ ಸಹಾಯವು ನಮ್ಮನ್ನು ಕ್ರಿಸ್ತನ ಬರೋಣಕ್ಕೆ ಸಿದ್ಧಗೊಳಿಸುವದು!

*ಮುಕ್ತಾಯ.* ಯೇಸುವಿನ ಪುನರಾಗಮನವು ಈ ಜೀವನದ ಪರಾಕಾಷ್ಠೆಯು ಮತ್ತು ನಂಬಿಗಸ್ತರಾದ ಕ್ರೈಸ್ತರಿಗೆ ಒಂದು ಇದಕ್ಕಿಂತ ಉತ್ತಮ ಜೀವನದ ಆರಂಭವಾಗಿರುತ್ತದೆ. ಆ ಬರೋಣದಲ್ಲಿ ಮತ್ತು ಅದರ ನೂತನ ಆರಂಭದಲ್ಲಿ ಪಾಲುಗಾರರಾಗಬೇಕೆಂಬುದು ಪ್ರತಿಯೊಬ್ಬ ಕ್ರೈಸ್ತನ ಗುರಿಯಾಗಿರಬೇಕು.

ನಾವು ಈ ಘಟನೆಯನ್ನು ಸಂತೋಷದಿಂದ ಎದುರು ನೋಡುತ್ತೇವೋ? ನಾವು ನಮ್ಮ ತುಟಿಗಳಿಂದ ಅಥವಾ ನಮ್ಮ ಮನಸ್ಸುಗಳಿಂದ ಉತ್ತರಿಸಬೇಕು ಎಂಬುದಷ್ಟೆ ಅಲ್ಲ, ಆದರೆ ನಾವು ನಮ್ಮ ಜೀವಿತಗಳಿಂದ ಸಹ ಉತ್ತರಿಸಬೇಕು. ನಾವು ಬೆಳಕಿನ ಮಕ್ಕಳಂತೆ ಜೀವಿಸಬೇಕು ಮತ್ತು ನಮ್ಮ ಸಹೋದರರು ಹಾಗೂ ಸಹೋದರಿಯರು ನಮ್ಮೊಂದಿಗೆ ದೇವರ ಬೆಳಕಿನಲ್ಲಿ ನಡೆಯುತ್ತಿರುವ ವೇಳೆ ಅವರಿಗೆ ಸಹಾಯವನ್ನು ಮಾಡಬೇಕು. TP

## ನಿಮ್ಮ ನಾಯಕರು (5:12, 13)

ಆತನು ಹಲವಾರು ಕಾರ್ಯರೂಪದ ಅನ್ವಯಿಕೆಗಳನ್ನು ಮಾಡುವದಕ್ಕೆ ಸಾಗಿದ ಹಾಗೆ, ಪೌಲನು ಸ್ಥಳೀಯ ಸಭೆಯಲ್ಲಿ ನಾಯಕರಾಗಿರುವವರ ಕಡೆಗೆ ಸಮರ್ಪಕವಾದ ಗೌರವವನ್ನು ಹೊಂದಿರಬೇಕೆಂದು ಪ್ರೋತ್ಸಾಹಿಸುತ್ತಾನೆ.

ಈ ನಾಯಕರು ಯಾರು? ಈ ಪದಗುಚ್ಛಗಳು ಅವರನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುತ್ತವೆ: ಇವರು ಅವರ ಮಧ್ಯದಲ್ಲಿ ಪ್ರಯಾಸ ಪಟ್ಟವರಾಗಿರುತ್ತಾರೆ, ಅವರ ಮೇಲೆ ಮುಖ್ಯಸ್ಥರಾಗಿರುವವರು, ಮತ್ತು ಅವರಿಗೆ ಬುದ್ಧಿಹೇಳಿದವರು ಆಗಿದ್ದರು. ಈ ಪದಗುಚ್ಛಗಳಲ್ಲಿ ಕೆಲವು ಹಿರಿಯರನ್ನೂ ಒಳಗೊಂಡಂತೆ ಸಭೆಯ ಎಲ್ಲಾ ನಾಯಕರಿಗೆ ಅನ್ವಯವಾಗಬಹುದಾಗಿದೆ.

*ನಿಮ್ಮ ನಾಯಕರ ಕೆಲಸವನ್ನು ಲಕ್ಷಿಸಿರಿ* (ವ. 12). "ಪ್ರಯಾಸ" ಎಂಬುದಕ್ಕೆ ಬಳಸಲ್ಪಟ್ಟಿರುವ ಪದವು ಶ್ರಮವಹಿಸಿ ಪ್ರಯಾಸಪಡುವದು ಎಂಬ ಅರ್ಥವನ್ನು ಕೊಡುತ್ತದೆ. ಇವರು ಸಭೆಗೋಸ್ಕರ ಕಠಿಣವಾಗಿ ಪರಿಶ್ರಮವನ್ನು ಪಡುತ್ತಿದ್ದ ವ್ಯಕ್ತಿಗಳಾಗಿದ್ದರು. ಈ ವಿಧವಾದ ಪ್ರಯಾಸವನ್ನು ಶ್ಲಾಘಿಸಬೇಕು.

*ನಿಮ್ಮ ನಾಯಕರನ್ನು ಬಹಳವಾಗಿ ಸನ್ಮಾನಿಸಿರಿ* (ವ. 13). ಈ ವ್ಯಕ್ತಿಗಳನ್ನು ಹೆಚ್ಚಾದ ಗೌರವದಿಂದ ಕಾಣತಕ್ಕದ್ದು. ಈ ಪದವು 3:10ರಲ್ಲಿ ಬಳಸಲ್ಪಟ್ಟಿರುವದನ್ನು ಸಹ ನೋಡಿದೆವು. ಇದು ಹೊಸ ಒಡಂಬಡಿಕೆಯಲ್ಲಿ ಕೇವಲ ಮೂರು ಸಾರಿ ಮಾತ್ರವೇ ಕಾಣಿಸುತ್ತದೆ: ಈ ವಚನ, 3:10, ಮತ್ತು ಎಫೆಸ 3:20. ಪ್ರತಿಯೊಂದು ಸನ್ನಿವೇಶದಲ್ಲಿ ಅದು ಮಹತ್ವಪೂರ್ಣವಾದ ಬಳಕೆಯನ್ನು ಹೊಂದಿದೆ. ಇಲ್ಲಿ ಅದು "ಬಹುವಾಗಿ" ಎಂದು ಅನುವಾದಿಸಲ್ಪಟ್ಟಿದೆ; 3:10ರಲ್ಲಿ, ಅದು "ಅತ್ಯಂತವಾಗಿ" ಎಂದು; ಮತ್ತು ಎಫೆಸ 3:20ರಲ್ಲಿ "ಅತ್ಯಧಿಕವಾದದ್ದನ್ನು" ಎಂದು ಅನುವಾದಿಸಲ್ಪಟ್ಟಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಈ ವ್ಯಕ್ತಿಗಳು ಗಮನಾರ್ಹವಾದ ರೀತಿಯಲ್ಲಿ ಗೌರವವನ್ನು ಹೊಂದತಕ್ಕದ್ದು.

*ನಿಮ್ಮ ನಾಯಕರನ್ನು ಪ್ರೀತಿಸಿರಿ.* ನಾವು ಅವರ ಕೆಲಸದ ಪ್ರಾಮುಖ್ಯತೆಯನ್ನು ಗುರುತಿಸಿದ ಹಾಗೆ ಅವರಿಗೆ ಪ್ರೀತಿಯಿಂದ ಗೌರವವನ್ನು ತೋರಿಸತಕ್ಕದ್ದು.

ದೇವರ ನಾಯಕರನ್ನು ಅವರು ಏನಾಗಿದ್ದಾರೆಂಬುದಕ್ಕಾಗಿ ಕಾಣಲ್ಪಡಬೇಕು-ದೇವರ

ಯೋಜನೆಯಲ್ಲಿ ಒಂದು ವಿಶೇಷ ಪಾತ್ರವನ್ನು ನೆರವೇರಿಸುವ ಅಮೂಲ್ಯರಾದ ವ್ಯಕ್ತಿಗಳಾಗಿದ್ದರು. ಯಾವನೂ ದೇವರನ್ನು ತಿರಸ್ಕರಿಸದೆ ದೇವರ ವ್ಯವಸ್ಥೆಯನ್ನು ತಿರಸ್ಕರಿಸಲಾರನು. EC

**ಬೇರೆಯವರ ಕಡೆಗೆ ಸಮರ್ಪಕವಾದ ಮನೋಭಾವ (5:13-15)**

ಇಲ್ಲಿ ಆಜ್ಞೆಗಳ ಒಂದು ಚಿಕ್ಕ ಪಟ್ಟಿಯು ಇದೆ. ನಾವು ವಿಧೇಯರಾಗತಕ್ಕಂಥ ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಪ್ರತಿಯೊಂದು ಆಜ್ಞೆಗಳ ಒಂದು ಪಟ್ಟಿಯನ್ನು ಮಾಡುವದು ಸವಾಲಿನ ಕೆಲಸವಾಗುತ್ತದೆ. ಇಲ್ಲಿರುವ ಪಟ್ಟಿಯು ಒಂದು ಪ್ರಾರಂಭಿಕ ಆಗಿರುತ್ತದೆ. ಪೌಲನು ಬೇರೆಯವರ ಸಂಗಡದ ಸಂಬಂಧಗಳ ಕುರಿತಾಗಿ ಬೋಧನೆಯನ್ನು ಕೊಡುವ ಮೂಲಕ ಪಟ್ಟಿಯನ್ನು ಆರಂಭಿಸುತ್ತಾನೆ. ನಾವು ಕ್ರಿಸ್ತನ ರೀತಿಯ ಮನೋವೃತ್ತಿಗಳನ್ನು ತೋರ್ಪಡಿಸಬೇಕಾದ ನಾಲ್ಕು ಗುಂಪು ಜನರ ಬಗ್ಗೆ ಪ್ರಸ್ತಾಪಿಸುತ್ತಾನೆ.

*ಕಷ್ಟವಾದ ಜನರ ಕಡೆಗೆ.* ಅಶಿಸ್ತುವುಳ್ಳ ವ್ಯಕ್ತಿಯನ್ನು ತಿದ್ದಬೇಕು. ಇಲ್ಲಿ ಬಳಸಲಾಗಿರುವ "ಅಶಿಸ್ತು" (ಅಕ್ರಮವಾಗಿ) ಎಂಬ ಪದವು "ಹೆಜ್ಜೆಯನ್ನು ತಪ್ಪಿರುವ" ಎಂಬರ್ಥವುಳ್ಳಂಥ ಪದವಾಗಿದೆ. ಇದು "ಸೋಮಾರಿ" ಎಂದು ಅನುವಾದಿಸಲ್ಪಟ್ಟಿದೆ. ಆತನನ್ನು ಗದರಿಸುವ ಮೂಲಕ ಮತ್ತು ಆತನ ಜೀವಿತವನ್ನು ತಿದ್ದಿಕೊಳ್ಳುವಂತೆ ಆತನಿಗೆ ಸಹಾಯವನ್ನು ಒದಗಿಸುವ ಮೂಲಕ ಆತನೆಡೆಗೆ ಕಠಿಣ ಪ್ರೀತಿಯನ್ನು ತೋರಿಸಬೇಕು.

*ಮನಗುಂದಿದವರು ಮತ್ತು ಬಲಹೀನರ ಕಡೆಗೆ.* "ಮನಗುಂದಿದವರಿಗೆ" ನಮ್ಮ ಧೈರ್ಯಪಡಿಸುವಿಕೆಯ ಅಗತ್ಯವಿರುತ್ತದೆ; "ಬಲಹೀನರಿಗೆ" ನಮ್ಮ ಸಹಾಯದ ಅಗತ್ಯವಿರುತ್ತದೆ. ಮನಗುಂದಿದವರು ನಮ್ಮ ಹೃದಯಗಳಲ್ಲಿದ್ದಾರೆ ಮತ್ತು ಅವರ ಬಗ್ಗೆ ನಾವು ಕಳಕಳಿ ಹೊಂದಿದ್ದೇವೆಂಬುದನ್ನು ಅವರಿಗೆ ತೋರಿಸಬೇಕು. ಆತ್ಮೀಕವಾಗಿ ಬಲಹೀನರಾದವರಿಗೆ "ಆಧಾರವಾಗಿ" ಇರಬೇಕು ಮತ್ತು ಅವರ ಸುತ್ತಲಿನ ದುಷ್ಟಶಕ್ತಿಗಳಿಗೆ ವಶವಾಗದಂತೆ ನೋಡಿಕೊಳ್ಳಬೇಕು. ಅವರು ಮಾತ್ರವೇ ಯುದ್ಧದಲ್ಲಿರುವವರಲ್ಲ ಎಂಬ ಭರವಸೆಯನ್ನು ಅವರಿಗೆ ನೀಡಬೇಕು.

*ದುಷ್ಟರು ಮತ್ತು ನಮ್ಮೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳುವವರ ಕಡೆಗೆ.* ನಾವು ಅಪಕಾರಕ್ಕೆ ಅಪಕಾರವನ್ನು ಮಾಡಬಾರದು, ಆದರೆ ಕೆಟ್ಟದ್ದಕ್ಕಾಗಿ ಒಳ್ಳೇದನ್ನೇ ಮಾಡಬೇಕು. ದುಷ್ಟರು ನಮ್ಮೊಂದಿಗೆ ನಡೆದುಕೊಳ್ಳುವ ಪ್ರಕಾರವೇ ನಾವು ಅವರೊಂದಿಗೆ ನಡೆದುಕೊಂಡರೆ, ನಾವು ದುಷ್ಟರ ಜೀವನ ನಡಿಸುವವರಾಗಿರುತ್ತೇವೆಯೇ, ಹೊರತು ಕ್ರೈಸ್ತರಲ್ಲ.

*ಎಲ್ಲಾ ಜನರ ಕಡೆಗೆ.* ನಾವು ಪ್ರತಿಯೊಬ್ಬರ ಕಡೆಗೆ ತಾಳ್ಮೆಯಿಂದಿರಬೇಕು. ನಾವು ಎಲ್ಲಾ ಜನರಿಗೂ ಒಳ್ಳೇದನ್ನು ಮಾಡಬೇಕು. ನಾವು ಒಂದು ಸಾಧುತ್ವದ ಮನೋವೃತ್ತಿಯನ್ನು ತೋರ್ಪಡಿಸಬೇಕು ಮತ್ತು ಎಲ್ಲಾ ಜನರ ಕಡೆಗೆ ಸೈರಣೆಯುಳ್ಳಂಥ ತಾಳ್ಮೆಯನ್ನು ತೋರಿಸಬೇಕು. ನಾವು ನಮ್ಮನ್ನು ನಿರಾಕರಿಸಿಕೊಂಡು ನಮ್ಮ ಸ್ವಂತ ಬಯಕೆಗಳಿಗಿಂತಲೂ ಬೇರೆಯವರ ಹಿತವನ್ನೇ ಪರಿಗಣನೆಗೆ ತೆಗೆದುಕೊಳ್ಳಬೇಕು.

ಜೀವನ ಬಹುಪಾಲು ಬೇರೆ ಜನರೊಂದಿಗಿನ ಸಂಬಂಧಗಳನ್ನು ಒಳಗೊಂಡಿರುತ್ತದೆ.

ನಾವು ಜೊತೆಯಾಗಿ ಜೀವಿಸಬೇಕಾದ ಮತ್ತು ಕೆಲಸ ಮಾಡಬೇಕಾದ ಎಲ್ಲಾ ವಿಧವಾದ ಜನರ ಗುಂಪುಗಳ ಪಟ್ಟಿಯನ್ನು ಮಾಡಲಿಲ್ಲ, ಆದರೆ ಆತನು ಪ್ರಾಮುಖ್ಯವಾದ ಗುಂಪುಗಳನ್ನಂತೂ ಪ್ರಸ್ತಾಪಿಸಿದ್ದಾನೆ. ಪ್ರತಿಯೊಂದು ಗುಂಪಿಗೆ ಸಂಬಂಧಿಸಿದಂತೆ ಕ್ರಿಸ್ತನ ರೀತಿಯ ಮನೋಭಾವವು ತೋರಿ ಬರುವದು. EC

## ಬೇರೆಯವರೊಂದಿಗೆ ಕ್ರೈಸ್ತನ ಸಂಬಂಧ (5:12-15)

ಸಭೆಯು ವಿಸ್ತೃತವಾದ ಕುಟುಂಬವಾಗಿದೆ. 1 ತಿಮೊಥೆ 3:5ರಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ಸ್ವಂತ ಮನೆಯವರನ್ನು ಆಳುವದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಮರಿಸುವನು?" "ದೇವರ ಸಭೆ"ಯು ದೇವರ ವಿಸ್ತೃತ ಕುಟುಂಬ ಎಂಬುದನ್ನು ಪೌಲನು ಸ್ಪಷ್ಟವಾಗಿ ಸೂಚಿಸುತ್ತಾನೆ.

ಶಾರೀರಿಕ ಕುಟುಂಬಗಳ ಸದಸ್ಯರಾಗಿ, ನಮಗೆ ತಂದೆತಾಯಿಗಳ, ಸಹೋದರರ, ಸಹೋದರಿಯರ, ಮತ್ತು ನೆರೆಯವರ ಜವಾದ್ದಾರಿಗಳು ಇರುತ್ತವೆ. ಅದೇ ರೀತಿಯಲ್ಲಿಯೇ, ದೇವರ ಮನೆಯ ಸದಸ್ಯರಾಗಿ ಸಭೆಯ ನಾಯಕರಿಗೆ, ಇತರ ಕ್ರೈಸ್ತರಿಗೆ ಮತ್ತು ಎಲ್ಲಾ ಜನರಿಗೆ ಜವಾಬ್ದಾರಿಗಳನ್ನು ಹೊಂದಿದ್ದೇವೆ.

*ಸಭೆಯ ನಾಯಕರ ಕಡೆಗೆ ನಮ್ಮ ಸಂಬಂಧ.* ಥೆಸಲೋನಿಕದ ನಾಯಕರು "ಕರ್ತನ ಕಾರ್ಯಗಳಲ್ಲಿ" ನಡಿಸುವವರಾಗಿದ್ದಾರೆಂದು ಪೌಲನು ಹೇಳುತ್ತಾನೆ (ವ. 12). ಅವರ ನಾಯಕತ್ವವು ಶಾರೀರಿಕ ಸಂಗತಿಗಳಲ್ಲಾಗಿರಲಿಲ್ಲ, ಆದರೆ ಆತ್ಮೀಕ ವಿಷಯಗಳಲ್ಲಿಯೇ ಆಗಿತ್ತು. ಅಲ್ಲದೆ, ಸ್ಥಳೀಯವಾಗಿ ("ನಿಮ್ಮಲ್ಲಿ ಪ್ರಯಾಸಪಟ್ಟು") ನಡಿಸುವವರಾಗಿದ್ದರು, ಹೊರತು ಯಾವದೋ ದೂರದ ಸ್ಥಳದಲ್ಲಿ ಅಲ್ಲ. ಆ ಸಂಬಂಧವನ್ನು ಬಣ್ಣಿಸುವ ವೇಳೆ, ಆತನು ತಾನು ಯಾರಿಗೆ ಬರೆಯುತ್ತಿದ್ದಾನೋ ಆ ನಾಯಕರನ್ನು ಸಹ ಬಣ್ಣಿಸುತ್ತಾನೆ. ಈ ನಾಯಕರಲ್ಲಿದ್ದಂಥ ಆ ಗುಣಸ್ವಭಾವಗಳ ಪಟ್ಟಿಯನ್ನು ಆತನು ಮಾಡುತ್ತಾನೆ.

ಮೊದಲನೆಯದಾಗಿ, ಈ ನಾಯಕರು "ನಿಮ್ಮಲ್ಲಿ ಪ್ರಯಾಸಪಟ್ಟು" ಕೆಲಸ ಮಾಡುತ್ತಾರೆಂದು ಥೆಸಲೋನಿಕದವರಿಗೆ ಹೇಳಿದನು. ನಾಯಕತ್ವವು ನಿಷ್ಕ್ರಿಯವಾದದ್ದಲ್ಲ. ನಿಜವಾದ ನಾಯಕರು, ಥೆಸಲೋನಿಕದ ನಾಯಕರ ಹಾಗೆಯೇ ಕರ್ತನ ಸಭೆಯಲ್ಲಿ ಪರಿಣಾಮಕರವಾಗಿ ಸೇವೆಯನ್ನು ಮಾಡುತ್ತಾರೆ.

ಎರಡನೆಯದಾಗಿ, ಅವರು "ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದಾರೆ" ಎಂದು ಹೇಳುತ್ತಾನೆ. NEBಯು "ನಿಮ್ಮ ನಾಯಕರು" ಎಂದು ಹೇಳುತ್ತದೆ. ಈ ವ್ಯಕ್ತಿಗಳು "ಕರ್ತನ ಕಾರ್ಯಗಳಲ್ಲಿ" ಸಭೆಯನ್ನು ನಡಿಸುವ ಮತ್ತು ಮಾರ್ಗದರ್ಶಿಸುವ ಜವಾಬ್ದಾರಿಯ ಭಾರವನ್ನು ಹೊತ್ತುಕೊಂಡಿದ್ದರು.

ಮೂರನೆಯದಾಗಿ, ಈ ವ್ಯಕ್ತಿಗಳು "[ಸಭೆಗೆ] ಬುದ್ಧಿ ಹೇಳುತ್ತಾರೆ" ಎಂದು ಹೇಳಿದನು. ಒಂದು ಸಭೆಯಲ್ಲಿರುವ ಜವಾಬ್ದಾರಿಯುತ ನಾಯಕರು ಬುದ್ಧಿ ಹೇಳುತ್ತಾರೆ, ಎಚ್ಚರಿಸುತ್ತಾರೆ, ಮತ್ತು ಬೋಧನೆ ನೀಡುತ್ತಾರೆ. ಅದೊಂದು ಸಹೋದರತ್ವದಿಂದ ಕೂಡಿದ ಸಮಾಲೋಚನೆ ಆಗಿರಬಹದು (ನೋಡಿರಿ 1 ಕೊರಿಂಥ 4:14) ಅಥವಾ ಸಾರ್ವಜನಿಕವಾಗಿ ಬೋಧನೆಯನ್ನು ನೀಡುವಿಕೆ ಆಗಿರಬಹುದು (ನೋಡಿರಿ ತೀತನಿಗೆ 1:9), ನಾಯಕರು ಸಹೋದರರಿಗೆ

ನಂಬಿಗಸ್ತರಾಗುಳಿಯುವಂತೆ ಕಲಿಸಬೇಕು.

ಆ ಹೆಸರಿಸಲ್ಪಡದ ನಾಯಕರು ಯಾರಾಗಿದ್ದಾರೆ? "ಮೇಲೆ ಮುಖ್ಯಸ್ಥರಾಗಿದ್ದು" ಎಂಬುದಕ್ಕಿರುವ ಗ್ರೀಕ್ ಪದವು προΐστημι (*proistēmi*). ಅದರರ್ಥವು "ಆಳು, ನಿರ್ದೇಶಿಸು, (ಒಬ್ಬರ) ಮುಖ್ಯಸ್ಥನಾಗಿರು"[53] ಎಂದಾಗಿದೆ. ಈ ಪದವು 1 ತಿಮೊಥೆ 5:17ರಲ್ಲಿ ಸಹ ಬಳಸಲ್ಪಟ್ಟಿದೆ, ಅಲ್ಲಿ ಪೌಲನು ಹಿರಿಯರ ಕೆಲಸದ ಬಗ್ಗೆ ಮಾತಾಡುತ್ತಿದ್ದನು. "ಮುಖ್ಯಸ್ಥರಾಗಿರುವದು" ಒಬ್ಬ ಹಿರಿಯನ ಕೆಲಸಕ್ಕೆ ಮಾತ್ರವೇ ಸರಿಹೊಂದುತ್ತದೆ. ಬೋದಕರು ಅಥವಾ ಸಭಾಸೇವಕರು ಸಭೆಯ "ಮುಖ್ಯಸ್ಥರಾಗಿ" ವಹಿಸಿಕೊಳ್ಳುವ ಕುರಿತು ಏನನ್ನೂ ಹೇಳಲಾಗಿರುವದಿಲ್ಲ. ಈ ಪಾತ್ರವು ಹಿರಿಯರಿಗೆ ಮೀಸಲಾಗಿರುತ್ತದೆ.

ಹಿರಿಯರು ಪ್ರಯಾಸ ಪಡುತ್ತಿದ್ದಾರೆ ಮತ್ತು ಬೋಧನೆ ನೀಡುತ್ತಿದ್ದಾರೆಂಬ ವಾಸ್ತವಾಂಶವು ಸಹ ಮಹತ್ವಪೂರ್ಣವಾದದ್ದು. ಈ ಕೆಲಸಗಳು ಹಿರಿಯರ ಪಾತ್ರಗಳಿಗೆ ಸರಿಹೊಂದುತ್ತವೆ. ಇಂದು ನಾವು ಹಿರಿಯರನ್ನು ಆಯ್ಕೆ ಮಾಡಿಕೊಳ್ಳುವಾಗ, ನಾವು ಪ್ರಾರ್ಥನಾಪೂರ್ವಕವಾಗಿ ಈಗಾಗಲೇ ಸಭೆಯಲ್ಲಿ ಕೆಲಸ ಮಾಡುತ್ತಿರುವ ಮತ್ತು ಬೋಧನೆ ಮಾಡುತ್ತಿರುವ ವ್ಯಕ್ತಿಗಳನ್ನು ಹುಡುಕಬೇಕು.

ತಮ್ಮ ನಾಯಕರ ಕಡೆಗೆ ಸದಸ್ಯರು ಯಾವ ಜವಾಬ್ದಾರಿಗಳನ್ನು ಹೊಂದಿದ್ದಾರೆ? ಮೊದಲನೆಯದಾಗಿ, ನಾವು ಅವರನ್ನು "ಲಕ್ಷಿಸಬೇಕು" (ವ. 12). ಸದಸ್ಯರು ತಮ್ಮ ನಾಯಕರನ್ನು "ತಿಳಿಯಬೇಕು" ಎಂದು KJV ಹೇಳುತ್ತದೆ. ನಾವು ಅವರನ್ನು "ತಿಳುಕೊಳ್ಳಬೇಕು" ಮತ್ತು ಅವರನ್ನು "ಲಕ್ಷಿಸುವದಕ್ಕೆ" ಅವರು ಮಾಡುತ್ತಿರುವ ಕೆಲಸವನ್ನು ತಿಳುಕೊಳ್ಳಬೇಕು. ಖಂಡಿತವಾಗಿಯೂ, ಲಕ್ಷಿಸಲ್ಪಡಬೇಕೆಂದರೆ ಹಿರಿಯರು ಥೆಸಲೋನಿಕದಲ್ಲಿದ್ದ ಹಿರಿಯರ ರೀತಿಯಲ್ಲಿರತಕ್ಕದ್ದು: ಪ್ರಯಾಸದಿಂದ ಕೆಲಸ ಮಾಡುವವರು, ಬೋಧನೆ ಹೇಳುವವರು, ಮತ್ತು ಮೇಲ್ವಿಚಾರಕರಾಗಿರುವವರು.

ಎರಡನೆಯದಾಗಿ, ನಾವು "ಅವರ ಕೆಲಸದ ನಿಮಿತ್ತ ಅವರನ್ನು ಬಹುವಾಗಿ ಸನ್ಮಾನಿಸಬೇಕು" (ವ. 13). ನಾವು ಅವರನ್ನು ನಿಜಕ್ಕೂ ಸನ್ಮಾನಿಸುವದಾದಲ್ಲಿ, ಅವರ ವಿರುದ್ಧವಾಗಿ ನಮಗೇನಾದರೂ ಇದ್ದರೆ, ಅವರ ಬಳಿಗೆ ಹೋಗುವೆವು. ಅವರು ನಮಗೆ ಸಭೆಗೆ ಹಾಜರಾಗುವದು, ಬೈಬಲ್ ಅಧ್ಯಯನಗಳಿಗೆ ಹಾಜರಾಗುವದು, ಮತ್ತು ಸುಳ್ಳು ಬೋಧನೆಗಳ ವಿರುದ್ಧವಾಗಿ ಕಾಪಾಡಿಕೊಳ್ಳುವಿಕೆ ಇತ್ಯಾದಿಗಳಂತಹ ವಿವಿಧ ಆತ್ಮೀಕ ಕಾರ್ಯಗಳ ಕುರಿತು ಬುದ್ಧಿಹೇಳುವಾಗ, ನಾವು ಅವರ ಮಾತುಗಳನ್ನು ಆಲಿಸುತ್ತೇವೆ. ದೇವರು ಅವರನ್ನು ನೇಮಿಸಿರುವ ಕಾರಣದಿಂದಲೇ ನಾಯಕರು ಸಭೆಯಲ್ಲಿದ್ದಾರೆ (ನೋಡಿರಿ ತೀತನಿಗೆ 1:5). ಒಂದು ಒಳ್ಳೇ ಕುಟುಂಬವನ್ನು ಹೊಂದಿಕೊಳ್ಳಬೇಕಾದರೆ, ನಮಗೆ ಒಳ್ಳೇ ನಾಯಕರ ಮತ್ತು ಗೌರವವನ್ನು ಕೊಡುವಂತಹ ಹಿಂಬಾಲಕರ ಅಗತ್ಯವಿರುತ್ತದೆ.

*ಇತರ ಕ್ರೈಸ್ತರ ಸಂಗಡ ನಮ್ಮ ಸಂಬಂಧ.* ಪೌಲನು ಹೀಗೆ ಬರೆದನು, "ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ" (ವ. 13b). ಇಲ್ಲಿ ಆತನು ಸದಸ್ಯರ ನಡುವಿನ ಸಂಬಂಧವನ್ನುದ್ದೇಶಿಸಿ ಮಾತಾಡುತ್ತಾನೆ. ಸಮುದಾಯದಲ್ಲಿನ ಸಂಬಂಧಗಳು ಪೌಲನಿಗೆ ಪ್ರಾಮುಖ್ಯವಾಗಿದ್ದವು, ಮತ್ತು ಇದನ್ನು ಆತನು ಥೆಸಲೋನಿಕದವರಿಗೆ ತಾನು ಬರೆದ ಪತ್ರಿಕೆಯಲ್ಲಿ ಒತ್ತಿ ಹೇಳಿದನು (ನೋಡಿರಿ ವ. 15b). ಆತನು ತನ್ನ ಪತ್ರಿಕೆಗಳಲ್ಲಿ,

"ಸಹೋದರರೇ" ಎಂಬ ಮಾತನ್ನು ಅರವತ್ತಕ್ಕೂ ಹೆಚ್ಚು ಸಾರಿ ಬಳಸುತ್ತಾನೆ, ಮತ್ತು ಇವುಗಳಲ್ಲಿ ಇಪ್ಪತ್ತು ಸಾರಿ 1 ಮತ್ತು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಳಲ್ಲಿ ಬಳಸಲಾಗಿರುತ್ತದೆ. ಆತನು ಸಮುದಾಯದೊಳಗೆ ಇರಬೇಕಾದ ಕುಟುಂಬ ಪ್ರೀತಿಯನ್ನು ಒತ್ತಿ ಹೇಳಿದನು. ನಾವು ಅದನ್ನು ಒಂದು ಉತ್ತಮ ಕುಟುಂಬವಾಗಿ ಹೇಗೆ ಮಾಡುವೆವು?

ಒಂದು ದಾರಿಯೆಂದರೆ ಒಬ್ಬರೊಂದಿಗೊಬ್ಬರು "ಸಮಾಧಾನವಾಗಿರುವ" ಮೂಲಕ. ನಾವು ನಮ್ಮ ನಾಯಕರನ್ನು ಸನ್ಮಾನಿಸುವಾಗ ಅಥವಾ ಅವರ ಮಾತುಗಳಿಗೆ ಕಿವಿಗೊಡುವಾಗ ಸಮಾಧಾನದಲ್ಲಿ ಜೀವಿಸುತ್ತೇವೆ. ಕಾರ್ಯಗಳು ನಮ್ಮಿಷ್ಟದಂತೆ ನಡೆಯದಿದ್ದಾಗ ಎಲ್ಲರ ಮುಂದೆ ಟೀಕೆಯನ್ನು ಮಾಡುದವರಿಂದ ದೂರವಿರುವ ಮೂಲಕ ಸಹ ನಾವು ಸಮಾಧಾನದಲ್ಲಿ ಜೀವಿಸುತ್ತೇವೆ. ನಾವೆಲ್ಲರೂ ಸಹ ಎದುರಿನ ವ್ಯಕ್ತಿಯ ಅಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುವ ಅಗತ್ಯವಿರುತ್ತದೆ. ನಮಗೆ ಮತ್ತೊಬ್ಬನೊಂದಿಗೆ ಘರ್ಷಣೆಯು ಇರುವಾಗ, ನಾವು ಆ ವ್ಯಕ್ತಿಯ ಬಳಿಗೆ ಹೋಗಿ ಸಮಾಧಾನ ಮಾಡಿಕೊಳ್ಳಬೇಕು (ಮತ್ತಾಯ 5:23, 24). ಹಗೆತನಗಳನ್ನಿಟ್ಟುಕೊಳ್ಳಬೇಡಿರಿ; ಸಂಧಾನ ಮಾಡಿಕೊಳ್ಳಿರಿ! ನಾವು ಸಮಾಧಾನದಲ್ಲಿ ಬಾಳಬೇಕೆಂದು ದೇವರ ಬಯಕೆಯಾಗಿರುತ್ತದೆ (ಮಾರ್ಕ 9:50; 2 ಕೊರಿಂಥ 13:11).

ಒಂದು ಉತ್ತಮ ಕುಟುಂಬವನ್ನು ಹೊಂದುವದಕ್ಕೆ ಇನ್ನೊಂದು ದಾರಿಯೆಂದರೆ "ಅಕ್ರಮವಾಗಿ ನಡೆಯುವವರಿಗೆ ಬುದ್ಧಿ ಹೇಳುವ" ಮೂಲಕ (ವ. 14a). ಒಂದು ಉತ್ತಮ ಶಾರೀರಿಕ ಕುಟುಂಬವನ್ನು ಹೊಂದಬೇಕೆಂದರೆ, ಶಿಸ್ತು ಇರುವದು ಅಗತ್ಯವಿರುತ್ತದೆ. ಆತ್ಮೀಕ ಕುಟುಂಬದ ವಿಷಯದಲ್ಲಿ ಸಹ ಅದು ಸತ್ಯವಾಗಿರುತ್ತದೆ. ಅಕ್ರಮವಾಗಿ ನಡೆಯುವವರು ಯಾರು? ಪಥವನ್ನು ಬಿಟ್ಟು ಪಕ್ಕಕ್ಕೆ ಸಂಚರಿಸುವ ಸೈನಿಕನೊಬ್ಬನನ್ನು ಬಣ್ಣಿಸುವದಕ್ಕೆ ಈ ಪದವು ಬಳಸಲ್ಪಡುತ್ತದೆ. ಥೆಸಲೋನಿಕದಲ್ಲಿದ್ದ ನಿರ್ದಿಷ್ಟವಾದ ಅಕ್ರಮವೆಂದರೆ ಕರ್ತನು ಬಹಳ ಶೀಘ್ರದಲ್ಲಿಯೇ ಬರುವನೆಂದು ಸಹೋದರರಲ್ಲಿ ಕೆಲವರು ನಂಬಿದ್ದರಿಂದ ಅವರು ಕೆಲಸ ಮಾಡುವದನ್ನು ನಿಲ್ಲಿಸಿ ಬಿಟ್ಟಿದ್ದರು. ಅವರು ಬೇರೆಯವರ ಮೇಲೆ ಒಂದು ಆರ್ಥಿಕ ಹೊರೆಯಾದರು ಮತ್ತು ಹರಟೆ ಹೊಡೆಯಲಾರಂಭಿಸಿದ್ದರು (2 ಥೆಸಲೋನಿಕ 3:10, 11).

ಅಕ್ರಮವಾಗಿ ನಡೆಯುವಿಕೆಯ ಸಾಮಾನ್ಯವಾದ ಅರ್ಥವೇನು? ಅದು ಯಾವದೇ ವಿಧದಲ್ಲಿಯೇ ಆಗಲಿ ಕರ್ತನ ಚಿತ್ತವನ್ನು ಮೀರುವದೇ ಆಗಿದೆ. ಅದು ಹರಟೆ, ಸೋಮಾರಿತನ, ಸಭೆಯನ್ನು ತೊರೆಯುವದು, ಅಥವಾ ಇತರ ಯಾವದೇ ಬೈಬಲ್ ವಿರುದ್ಧವಾದ ನಡವಳಿಕೆಯಂತಹ ಪಾಪಕೃತ್ಯಗಳ ಬಗ್ಗೆ ಪಶ್ಚಾತ್ತಾಪ ಪಡುವದಕ್ಕೆ ನಿರಾಕರಿಸುವದು ಆಗಿದೆ.

ಈ ದಾರಿ ತಪ್ಪಿರುವ ಕ್ರೈಸ್ತರಿಗೆ "ಬುದ್ಧಿ ಹೇಳುವಂತೆ" ಪೌಲನು ಥೆಸಲೋನಿಕದವರನ್ನು ಬೇಡಿಕೊಳ್ಳುತ್ತಾನೆ. Abraham Malherbe ಹೇಳುವದೇನೆಂದರೆ ಥೆಸಲೋನಿಕದಲ್ಲಿನ ವಿಶ್ವಾಸಿಗಳು ದಾರಿ ತಪ್ಪಿದವರಿಗೆ ಬುದ್ಧಿ ಹೇಳುತ್ತಿರುವದಾದಲ್ಲಿ, ಅವರು "ತಮ್ಮ ಪ್ರಯತ್ನಗಳಲ್ಲಿ ಇನ್ನಷ್ಟು ಬಲಯುತವಾಗಬೇಕು" ಎಂಬದಾಗಿ ಪೌಲನು ಹೇಳುತ್ತಿದ್ದಾನೆ ಎಂಬದೆ.[54]

ಯಾರು ಅಪನಂಬಿಗಸ್ತರನ್ನು ಎಚ್ಚರಿಸತಕ್ಕದ್ದು? ಈ ಸನ್ನಿವೇಶದಲ್ಲಿ ಹಿರಿಯರ ಕುರಿತು

ಚರ್ಚಿಸಲಾಗುತ್ತಿದೆಯೆಂಬುದನ್ನ ನಾವು ನೋಡಿದ್ದೇವೆ. ಖಂಡಿತವಾಗಿಯೂ, ಅವರಿಗೆ ಅತ್ಯಂಥ ಭಾರವಾದ ಜವಾಬ್ದಾರಿಯು ಇರುತ್ತದೆ, ಆದರೆ ಪೌಲನು ಅವರಿಗೆ ಮಾತ್ರವೇ ಸೀಮಿತಗೊಳಿಸಲಿಲ್ಲ. ಆತನು "ಸಹೋದರರೇ, . . . ನಿಮ್ಮನ್ನು ಬೇಡಿಕೊಳ್ಳುತ್ತೇವೆ" ಎಂದು ಹೇಳಿದನು (ವ. 14). ಒಬ್ಬರೊಬ್ಬರ ವಿಷಯದಲ್ಲಿ ಜಾಗ್ರತೆ ವಹಿಸಿಕೊಳ್ಳುವಂತೆ ಎಲ್ಲಾ ಸದಸ್ಯರಿಗೂ ಪ್ರೋತ್ಸಾಹಿಸಲಾಗಿರುತ್ತದೆ. ಪ್ರಶ್ನೆಯೇನೆಂದರೆ ನಂಬಿಗಸ್ತರಾಗಿ ಉಳಿಯುವಂತೆ ಒಬ್ಬರಿಗೊಬ್ಬರು ಸಹಾಯ ಮಾಡುವಷ್ಟರ ಮಟ್ಟಿಗೆ ನಾವು ನಮ್ಮ ಆತ್ಮೀಕ ಕುಟುಂಬದ ಕುರಿತು ಕಾಳಜಿಯನ್ನು ಹೊಂದಿದ್ದೇವೋ ಎಂಬುದೆ.

ಅಲ್ಲದೆ ನಾವು "ಮನಗುಂದಿದವರಿಗೆ ಧೈರ್ಯಪಡಿಸುವಾಗ" ಸಹ ನಮ್ಮ ಆತ್ಮೀಕ ಕುಟುಂಬಕ್ಕೆ ಸಹಾಯ ಮಾಡುವವರಾಗಿರುತ್ತೇವೆ (ವ. 14b). "ಮನಗುಂದಿದವರು" ಹತಾಶೆ ಮತ್ತು ನಿರಾಶೆಗೆ ಒಳಗಾಗಿರುವವರೇ ಆಗಿದ್ದಾರೆ. ಥೆಸಲೋನಿಕದಲ್ಲಿ ನಿರಾಶೆಯಿಂದ ತುಂಬಿದವರೊಳಗೆ ಬಹುಶಃ ತಮ್ಮ ಮರಣಿಸಿರುವ ಪ್ರಿಯರು ಎರಡನೆಯ ಬರೋಣದ ಮಹಾ ಘಟನೆಯನ್ನು ತಪ್ಪಿಸಿಕೊಳ್ಳುವರೋ ಎಂದು ಹೆದರಿದ್ದವರು ಸೇರಿದ್ದರು. ನಮ್ಮ ನಿರಾಶೆಗೊಂಡಿರುವ ಸಹೋದರರು ತಮ್ಮ ಪ್ರಿಯರನ್ನು ಕಳೆದುಕೊಂಡು ಏಕಾಂಗಿಗಳಾಗಿ ಜೀವಿಸಬೇಕಾದ ಪರಿಸ್ಥಿತಿಗಳೊಳಗಾಗಿರಬಹುದು. ಬಹುಶಃ ಅವರು ತಮ್ಮ ಉದ್ಯೋಗಗಳನ್ನು ಕಳಕೊಂಡಿರಬಹುದು ಅಥವಾ ಅವರು ಯಾವದೋ ಒಂದು ಶಾರೀರಿಕ ಸಮಸ್ಯೆಗಳ ಭಾರವುಳ್ಳವರಾಗಿರಬಹುದು.

ನಾವು ಯಾರಾದರೊಬ್ಬರು ಮನಗುಂದಿರುವದನ್ನು ನೋಡುವಾಗ, ಅವರನ್ನು ನಾವು ಧೈರ್ಯಪಡಿಸತಕ್ಕದ್ದು. ನಮ್ಮ ಸಹೋದರರನ್ನು ಧೈರ್ಯಪಡಿಸುವದರಿಂದ, ನಾವು ನಮ್ಮ ಉಪಸ್ಥಿತಿ ಮತ್ತು ಕಾಳಜಿಯ ಮಾತುಗಳಿಂದ ಅವರನ್ನು ಉತ್ತೇಜನಗೊಳಿಸುತ್ತೇವೆ ಮತ್ತು ಪ್ರೇರಣೆಗೊಳಿಸುತ್ತೇವೆ. ಈ ಜವಾಬ್ದಾರಿಯು ಕೇವಲ ಸಭೆಯ ಹಿರಿಯರಿಗಾಗಿ ಮಾತ್ರವೇ ಇರುವದಿಲ್ಲ-ಇದು ಎಲ್ಲಾ ಕ್ರೈಸ್ತರಿಗಾಗಿಯೂ ಇರುತ್ತದೆ.

ನಮ್ಮ ಆತ್ಮೀಕ ಕುಟುಂಬವನ್ನು ಉತ್ತಮಗೊಳಿಸುವದಕ್ಕೆ ಇನ್ನೊಂದು ದಾರಿಯೆಂದರೆ "ಬಲಹೀನರಿಗೆ ಆಧಾರವಾಗಿರುವದು" (ವ. 14c). ಈ ವಚನದಲ್ಲಿ, ಪೌಲನು ಆತ್ಮೀಕವಾಗಿ ಬಲಹೀನರಾಗಿರುವವರನ್ನು ಸೂಚಿಸುತ್ತಿದ್ದಾನೆ, ಹೊರತು ದೈಹಿಕವಾಗಿ ಬಲಹೀನರಾಗಿರುವವರನ್ನಲ್ಲ (ನೋಡಿರಿ ರೋಮಾ 14:1). ಅವರು ರಾಜ್ಯದೊಳಗೆ ಹುಟ್ಟಿದವರಾಗಿದ್ದರು, ಆದರೆ ಅವರ ಬೇರುಗಳು ಸುವಾರ್ತೆಯ ನೆಲದೊಳಗೆ ಆಳವಾಗಿ ಹೋಗಿರಲಿಲ್ಲ. ಅವರ ನಂಬಿಕೆಯು ಪರೀಕ್ಷೆಗೊಳಗಾದಾಗ, ವಾಕ್ಯದ ಬೀಜವು ಬೆಳೆಯಲಿಲ್ಲ (ನೋಡಿರಿ ಮಾರ್ಕ 4:17). ನಿಮ್ಮ ಸಭೆಯಲ್ಲಿ ಈ ರೀತಿಯಾಗಿರುವ ಯಾರನ್ನಾದರೂ ನೀವು ಬಲ್ಲಿರಾ?

ಎಲ್ಲಾ "ಸಹೋದರರು" ಅವರಿಗೆ ಆಧಾರವಾಗಿರಬೇಕು. ಇಬ್ಬರು ವ್ಯಕ್ತಿಗಳು ಕಣ್ಣು ಕಾಣದಂತೆ ಮಾಡುವ ಹಿಮದ ಗಾಳಿಯಲ್ಲಿ ನಡೆದು ಹೋಗುತ್ತಿರುವದನ್ನ ಊಹಿಸಿಕೊಳ್ಳಿರಿ, ಮತ್ತು ಅವರಲ್ಲಿ ಒಬ್ಬನು ಹೆಚ್ಚು ಕಡಿಮೆ ಹೆಪ್ಪುಗಟ್ಟಿದವನಾಗಿ ಮತ್ತು ಬಳಲಿದವನಾಗಿ ಇನ್ನೇನು ಕೆಳಕ್ಕೆ ಬೀಳಲಿದ್ದನು. ಬೀಳುವದೆಂದರೆ ಮರಣ ಎಂದರ್ಥ. ಆತನಿಗೆ ಆಧಾರವಾಗಿ ಹಿಡಿದುಕೊಂಡು ಸುರಕ್ಷಿತ ಸ್ಥಳಕ್ಕೆ ಸೇರಿಸಿರಿ!

ದೃಢವಾಗಿರುವ ಕ್ರೈಸ್ತರು ಸಹ "ಒಬ್ಬರಿಗೊಬ್ಬರು ಹಿತವನ್ನು" ಅಪೇಕ್ಷಿಸುತ್ತಾರೆ (ವ. 15). "ಹಿತವು" ಏನೆಂದರೆ ನಮ್ಮ ಜೊತೆಯ ಕ್ರೈಸ್ತರಿಗೆ ಇನ್ನಷ್ಟು ಭಕ್ತಿವಂತರಾಗುವಂತೆ ಸಹಾಯ ಮಾಡುವಂತದ್ದೆ ಆಗಿದೆ. ಜನರು ನಮ್ಮನ್ನು ನಿರಾಶೆಗೊಳಿಸಿದಾಗ್ಯೂ ಅಥವಾ ನೋವುಂಟು ಮಾಡಿದಾಗ್ಯೂ, ನಾವು ಆಗಲೂ ಅವರಿಗೆ ಒಳ್ಳೇದನ್ನೇ ಬಯಸಬೇಕು. ನಾವು ಅಂಥ ಜನರನ್ನು "ಹುಡುಕಬೇಕು," ಅವರಿಗಾಗಿ ಪ್ರಾರ್ಥಿಸಬೇಕು, ಮತ್ತು ಶ್ಲಾಘಿಸಬೇಕು (ನೋಡಿರಿ ರೋಮಾ 12:20, 21). ಪೌಲನು ಇಲ್ಲಿ ನಾಯಕರನ್ನು ಮಾತ್ರವೇ ಸಂಬೋಧಿಸಿ ಹೇಳುತ್ತಿಲ್ಲ, ಆದರೆ ಥೆಸಲೋನಿಕದಲ್ಲಿರುವ ಸಭೆಯ ಎಲ್ಲಾ ಸದಸ್ಯರನ್ನು ಸೂಚಿಸಿ ಹೇಳುತ್ತಿದ್ದಾನೆ. ಎಲ್ಲಾ ಕ್ರೈಸ್ತರು "ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸುವದಕ್ಕೆ" ಸಹಾಯ ಮಾಡಬೇಕು (ರೋಮಾ 12:21).

*ಎಲ್ಲಾ ಜನರೊಂದಿಗೆ ನಮ್ಮ ಸಂಬಂಧ.* ಪೌಲನು 12 ರಿಂದ 15 ವಚನಗಳಲ್ಲಿ ಪ್ರಾಥಮಿಕವಾಗಿ ಸಭೆಯ ನಾಯಕರು ಹಾಗೂ ಸದಸ್ಯರ ನಡುವಿನ ಸಂಬಂಧಗಳ ಗಮನ ವನ್ನು ಹರಿಸುತ್ತಾನಾದರೂ, ಆಗಾಗ ಆತನು ಕ್ರೈಸ್ತೇತರರನ್ನು ಸೇರ್ಪಡೆಗೊಳಿಸುವದಕ್ಕೆ ತನ್ನ ನೋಟವನ್ನು ವಿಸ್ತಾರಗೊಳಿಸುತ್ತಾನೆ. ಆತನು "*ಎಲ್ಲರಲ್ಲಿಯೂ* ದೀರ್ಘಶಾಂತರಾಗಿರಿ" ಎಂದು ಹೇಳುತ್ತಾನೆ (ವ. 14b; ಒತ್ತಿ ಹೇಳಿದ್ದು ನನ್ನದು); ಮತ್ತು ಪುನಃ, "ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ *ಎಲ್ಲರಿಗೂ* ಹಿತವನ್ನು ಮಾಡುವವರಾಗಿರಿ" ಎಂದು ಹೇಳುತ್ತಾನೆ (ವ. 15b; ಒತ್ತಿ ಹೇಳಿದ್ದು ನನ್ನದು). ಅಂಥ ಜನರೊಂದಿಗೆ ನಮ್ಮ ಸಂಬಂಧವು ಹೇಗಿರಬೇಕು?

ದೇವರು ಕ್ರೈಸ್ತೇತರರನ್ನು ಸಹ ಪ್ರೀತಿಸುತ್ತಾನೆ. ಅವರು ರಕ್ಷಿಸಲ್ಪಡಬೇಕೆಂಬುದು ಆತನ ಇಚ್ಛೆಯಾಗಿದೆ. ಪೇತ್ರನು ಹೀಗೆ ಬರೆದನು, "ಕರ್ತನು . . . ಯಾವನಾದರೂ ನಾಶವಾಗುವದರಲ್ಲಿ ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ" (2 ಪೇತ್ರ 3:9). ಯೇಸು "ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ಲೂಕ 19:10).

ನಾವು, ದೇವರಂತೆ ಮತ್ತು ಯೇಸುವಿನ ರೀತಿಯಲ್ಲಿ, ಎಲ್ಲಾ ಜನರನ್ನು ಪ್ರೀತಿಸಬೇಕು. ಯೇಸು ನಮಗೆ "[ನಮ್ಮ] ವೈರಿಗಳನ್ನು ಪ್ರೀತಿಸಬೇಕು" ಎಂದು ಹೇಳಿದನು (ಮತ್ತಾಯ 5:44) ನಾವು ಸಾಧ್ಯವಾದಾಗಲೆಲ್ಲಾ ಎಲ್ಲರೊಂದಿಗೂ ಸಮಾಧಾನದಿಂದ ಬಾಳತಕ್ಕದ್ದು (ರೋಮಾ 12:18). ನಾವು ದಯೆಯನ್ನು ತೋರಿದಾಗ್ಯೂ ಕೆಲವು ಸಾರಿ ಜನರು ನಮ್ಮೊಂದಿಗೆ ಕೀಳಾಗಿ ನಡಕೊಳ್ಳುವರು, ಆದರೆ ಪೌಲನ ಪ್ರಕಾರವಾಗಿ, ನಾವು ಎಂದಿಗೂ "ಅಪಕಾರಕ್ಕೆ ಅಪಕಾರವನ್ನು ಮಾಡಬಾರದು," ನಾವು "ಎಲ್ಲರಲ್ಲಿಯೂ ದೀರ್ಘಶಾಂತರಾಗಿ" ಇರಬೇಕು, ಮತ್ತು ನಾವು "ಎಲ್ಲರಿಗೂ ಹಿತವನ್ನು" ಬಯಸಬೇಕು (ವಚನಗಳು 14, 15). "ಆದದರಿಂದ ಸಮಯವಿರಲಾಗಿ ಎಲ್ಲರಿಗೂ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10). ಈ ವಿಧವಾಗಿ ದಯೆಯನ್ನು ವ್ಯಕ್ತಪಡಿಸುವ ಕಾರ್ಯಗಳ ಮೂಲಕ ಅವರ ವರ್ತನೆಯ ಹೊರತಾಗಿಯೂ ನಾವು ಅವರ ಆತ್ಮಗಳನ್ನು ಬೆಲೆಯುಳ್ಳವುಗಳೆಂದು ಎಣಿಸುತ್ತೇವೆಂಬುದನ್ನು ಅವಿಶ್ವಾಸಿಗಳಿಗೆ ತೋರಿಸಿ ಕೊಡುವವರಾಗುತ್ತೇವೆ. ಅವರು

ದೇವರ ಕಡೆಗೆ ತಿರುಗಿಕೊಳ್ಳುವಂತೆ ಒತ್ತಾಯಿಸಲ್ಪಡುವ ಹಾಗೆ, ಪಶ್ಚಾತ್ತಾಪ ಪಟ್ಟು, ತಮ್ಮ ಜೀವಿತಗಳನ್ನು ಆತನಿಗೆ ಸಮರ್ಪಿಸಿಕೊಳ್ಳುವಂತಾಗಬೇಕೆಂದು ಅವರಿಗೆ ಹಿತವನ್ನು ಕೋರುವವರಾಗಿರುತ್ತೇವೆ.

ಸಂಬಂಧಗಳು ದೇವರ ಕುಟುಂಬದ ಒಂದು ಪ್ರಾಮುಖ್ಯವಾದ ಭಾಗವಾಗಿರುತ್ತವೆ. ನಮ್ಮ ನಾಯಕರೊಂದಿಗೆ, ಜೊತೆಯ ಎಲ್ಲಾ ಸದಸ್ಯರೊಂದಿಗೆ, ಮತ್ತು ಯೇಸು ಕ್ರಿಸ್ತನ ಕುರಿತಾದ ಶುಭವಾರ್ತೆಯನ್ನು ಕೇಳಿಸಿಕೊಳ್ಳುವ ಅಗತ್ಯವಿರುವ ಮಿಕ್ಕ ಎಲ್ಲರೊಂದಿಗೆ ಸರಿಯಾಗಿ ಸಂಬಂಧವನ್ನಿಟ್ಟುಕೊಳ್ಳುವಂತೆ ದೇವರು ನಮಗೆ ಸಹಾಯ ಮಾಡಲಿ. EE

## ಒಂದು ಕ್ರೈಸ್ತೀಯ ಮನೋಭಾವವನ್ನು ಬೆಳೆಸಿಕೊಳ್ಳುವದು (5:16-18)

ಪೌಲನು ಹಿಂಸೆಯ ಕಾರಣದಿಂದ ಅವಸರವಾಗಿ ಥೆಸಲೋನಿಕವನ್ನು ತೊರೆದು ಹೋದ ಬಳಿಕ, ಆತನು ಅವರಿಗೆ ಇನ್ನಷ್ಟು ಬೋಧನೆಯನ್ನು ಕೊಡುವದಕ್ಕೆ ಪುನಃ ಬರೆಯುತ್ತಾನೆ. 16 ರಿಂದ 18 ವಚನಗಳಲ್ಲಿ, ಆತನು ಅವರಿಗೆ ಮೂರು ಕ್ರೈಸ್ತೀಯ ಮನೋಭಾವಗಳ ಕುರಿತು ಬರೆಯುತ್ತಾನೆ: ಸಂತೋಷವಾಗಿರುವಿಕೆ, ಅವಲಂಬಿತರಾಗಿರುವಿಕೆ, ಮತ್ತು ಕೃತಜ್ಞತಾಭಾವನೆ. ಈ ಆಜ್ಞೆಗಳನ್ನು ಕೊಡುವವನಾಗಿ, ಆತನು ವರ್ತಮಾನ ಕಾಲದಲ್ಲಿರುವ ಆಜ್ಞಾರ್ಥಕರೂಪದಲ್ಲಿ ಬರೆಯುತ್ತಾನೆ, ಅಂದರೆ ಕ್ರೈಸ್ತರು ಈ ಮನೋಭಾವಗಳನ್ನು ಬೆಳೆಸಿಕೊಂಡು ಅವುಗಳನ್ನು ನಿರಂತರವಾಗಿ ತಮ್ಮ ಜೀವಿತಗಳಲ್ಲಿ ತೋರ್ಪಡಿಸುವ ಹಂಗಿನಲ್ಲಿದ್ದಾರೆ.

*ಸಂತೋಷವಾಗಿರುವಿಕೆ*: *"ಯಾವಾಗಲೂ ಸಂತೋಷಿಸಿರಿ"* (ವ. 16). ಜೀವನದ ಕಡೆಗೆ ಕ್ರೈಸ್ತನು ಹೊಂದಿರುವ ಮನೋಭಾವವು ಸಂತೋಷದಿಂದ ತುಂಬಿರತಕ್ಕದ್ದು. ದೇವರು ನಮಗೆ ಹಿಂದಿನ ಪಾಪಗಳಿಂದ ರಕ್ಷಣೆಯನ್ನು ಕೊಟ್ಟು ಆಶೀರ್ವದಿಸಿದ್ದಾನೆ, "[ನಮ್ಮ] ಪಾಪಗಳನ್ನು ತೊಳೆದಿರುತ್ತಾನೆ" (ಅಪೊಸ್ತಲರ ಕೃತ್ಯಗಳು 22:16). ನಾವು ನಂಬಿಗಸ್ತರಾಗುಳಿದರೆ ನಮಗೆ ಪರಲೋಕದಲ್ಲಿ ನಿತ್ಯಜೀವವನ್ನು ಬಾಧ್ಯತೆಯಾಗಿ ಕೊಡುವ ವಾಗ್ದಾನ ಮಾಡಿದ್ದಾನೆ (ಎಫೆಸ 1:13, 14). ಆದುದರಿಂದ, ಪೌಲನೊಂದಿಗೆ ಸೇರಿ ನಮ್ಮ ರಕ್ಷಣೆಗೆ ಸಂತೋಷದಿಂದ ಪ್ರತಿಕ್ರಿಯಿಸುವವರಾಗಿರಬೇಕು: "ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತೇನೆ" (ಫಿಲಿಪ್ಪಿ 4:4).

ಜೀವನದಲ್ಲಿ ಅದರದ್ದೇ ಆಗಿರುವ ಸಮಸ್ಯೆಗಳಿದ್ದಾಗ್ಯೂ, ಕ್ರೈಸ್ತರಾಗಿ ನಾವು ಒಳ್ಳೇ ಸಮಯಗಳು ಹಾಗು ಕೆಟ್ಟ ಸಮಯಗಳು ಎರಡರಲ್ಲಿಯೂ ಸಂತೋಷಿಸಬಲ್ಲೆವು. ಪೌಲನು ಫಿಲಿಪ್ಪಿ 4:4ನ್ನು ಬರೆಯುವ ವೇಳೆ, ಆತನು ಸೆರೆಮನೆಯಲ್ಲಿದ್ದನು. ಆತನು ಥೆಸಲೋನಿಕದವರಿಗೆ ಬರೆಯುವ ವೇಳೆಯಲ್ಲಿ, ಅವರು ಹಿಂಸೆ ಮತ್ತು ವೇದನೆಗಳಲ್ಲಿದ್ದರು. ಬಾಧೆ ಮತ್ತು ನೋವುಗಳ ಹೊರತಾಗಿಯೂ, ನಾವು ಸಂತೋಷಿಸುತ್ತೇವೆ ಯಾಕೆಂದರೆ ನಾವು ಈಗ ಅನುಭವಿಸುವ ಯಾವದಕ್ಕಿಂತಲೂ ನಮ್ಮ ಬಾಧ್ಯತೆಯು ಎಷ್ಟೋ ಹೆಚ್ಚು ಶ್ರೇಷ್ಠವಾದದ್ದಾಗಿದೆ. ಆದಕಾರಣ ನಾವು ಎಲ್ಲದರಲ್ಲಿಯೂ ಸಂತೋಷ ಪಡೋಣ.

*ಅವಲಂಬಿತರಾಗಿರುವಿಕೆ*: *"ಎಡೆಬಿಡದೆ ಪ್ರಾರ್ಥನೆಮಾಡಿರಿ"* (ವ. 17). ಯಾವ ಮಗುವು ಸಹ ತನಗೆ ತಾನೇ ಸಾಕಾದವನಾಗಿರುವದಿಲ್ಲ, ಮತ್ತು ನಾವು ಆತ್ಮೀಕ ಮಕ್ಕಳಾಗಿದ್ದೇವೆ

(ನೋಡಿರಿ ಯೆರೆಮೀಯ 10:23). ನಮಗೆ ದೇವರ ಅಗತ್ಯವಿದೆ. ಆದದರಿಂದ, ನಾವು ನಮಗೋಸ್ಕರ ಮಾಡಿರುವ ಕಾರ್ಯಕ್ಕಾಗಿ ಆತನಿಗೆ ಸ್ತೋತ್ರಗಳನ್ನು ಅರ್ಪಿಸುವವರಾಗಿದ್ದರೂ ಸರಿಯೇ (2 ಕೊರಿಂಥ 9:15) ಅಥವಾ ಸಂಕಷ್ಟಗಳ ಮಧ್ಯದಲ್ಲಿ ಹಾದು ಬರುವದಕ್ಕೆ ಸಹಾಯವನ್ನು ಕೇಳುವವರಾಗಿದ್ದರೂ ಸರಿಯೇ (ಅಪೊಸ್ತಲರ ಕೃತ್ಯಗಳು 4:29), ನಾವು ಪ್ರಾರ್ಥನೆಯ ಮೂಲಕ ಆತನೊಂದಿಗೆ ಸಂಪರ್ಕವನ್ನಿಟ್ಟುಕೊಂಡಿರಬೇಕು.

"ಎಡೆಬಿಡದೆ ಪ್ರಾರ್ಥಿಸುವದು" ಎಂದರೆ ನಿರಂತರವಾಗಿ ಪ್ರಾರ್ಥಿಸುತ್ತಲೇ ಇರುವದು ಎಂದರ್ಥವಲ್ಲ. ಬದಲಾಗಿ ನಾವು ಮಾಮೂಲಿ, ದೈನಂದಿನ ಕಾರ್ಯಗಳ ಮಧ್ಯದಲ್ಲಿ ಸಹ, ಕ್ರಮವಾಗಿ ದೇವರ ಸಂಗಡ ಮಾತಾಡುವಂತೆ ಮಾಡುವ ಒಂದು ಅವಲಂಬನೆಯ ಭಾವನೆಯನ್ನು ಹೊಂದಿರಬೇಕೆಂದು ಅದರರ್ಥವಾಗಿದೆ (ನೋಡಿರಿ ಎಫೆಸ 6:18; ಲೂಕ 18:1). ನಾವು ವಾಹನ ಚಾಲನೆ ಮಾಡುವಾಗ ಅಥವಾ ನಡೆದು ಹೋಗುತ್ತಿರುವ ವೇಳೆಯಲ್ಲಿ ಸಹ (ನಾವು ಕಣ್ಣುಗಳನ್ನು ಮುಚ್ಚದೆ ಪ್ರಾರ್ಥಿಸಬಲ್ಲೆವು) ನಾವು ಪ್ರಾರ್ಥಿಸಬಹುದಾಗಿದೆ. ದೇವರು ಆಲಿಸುತ್ತಾನೆ!

ನಾವು ಎಲ್ಲಾ ವೇಳೆಗಳಲ್ಲಿ ಪ್ರಾರ್ಥಿಸುವಾಗ, ನಮಗೆ ದೇವರ ಅಗತ್ಯತೆಯಿದೆ ಎಂಬುದನ್ನು-ಆತನ ಮೇಲಿನ ನಮ್ಮ ಅವಲಂಬನೆಯನ್ನು-ನಾವು ತೋರ್ಪಡಿಸುವವರಾಗಿರುತ್ತೇವೆ. ಒಂದು ಮಗುವಿಗೆ ಹೇಗೆ ತಂದೆತಾಯಿಗಳ ಅಗತ್ಯವಿರುತ್ತದೋ, ಹಾಗೆಯೇ ನಮಗೆ ಯಾವಾಗಲೂ ದೇವರ ಅಗತ್ಯವಿದೆ. ನಾವು ಆತನ ಮೇಲೆ ಅವಲಂಬನೆಗೊಳ್ಳದವರಷ್ಟು ದೊಡ್ಡವರಾಗಿ ಬೆಳೆಯುವದಕ್ಕೆ ಸಾಧ್ಯವಿಲ್ಲ. ನಾವು ಎಷ್ಟರ ಮಟ್ಟಿಗೆ ಆತನ ಮೇಲೆ ಅವಲಂಬಿತರಾಗಿದ್ದೇವೆಂಬುದನ್ನು ತೋರ್ಪಡಿಸುವವರಾಗುವ ಹಾಗೆ, ನಾವು "ಎಡೆಬಿಡದೆ ಪ್ರಾರ್ಥನೆಮಾಡುವರು" ಆಗುವಂತೆ ದೇವರು ನಮಗೆ ಸಹಾಯ ಮಾಡಲಿ!

*ಕೃತಜ್ಞತಾಭಾವನೆ*: *"ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ"* (ವ. 18a). ಪೌಲನು 17ನೇ ವಚನದಲ್ಲಿ ಪ್ರಸ್ತಾಪಿಸಿದ ಪ್ರಾರ್ಥನೆಯು ವಿಶೇಷವಾಗಿ ಕೃತಜ್ಞತಾಸ್ತುತಿಯ ಪ್ರಾರ್ಥನೆಯಾಗಿರುತ್ತದೆ. ಹೇಗೂ, ಕೃತಜ್ಞತೆಗಳನ್ನು ಅರ್ಪಿಸುವದೆಂದರೆ ಯಾವನೋ ಒಬ್ಬನ ಕಡೆಗೆ ಅಥವಾ ಯಾವದೋ ಒಂದರ ಕಡೆಗೆ ಕೃತಜ್ಞತೆಯ ಭಾವನೆಯನ್ನು ಹೊಂದಿರುವದಕ್ಕಿಂತಲೂ ಅಧಿಕವಾದದ್ದಾಗಿದೆ. ಅದರಲ್ಲಿ ದೇವರಿಗೆ ಕೃತಜ್ಞತೆಗಳನ್ನು ವ್ಯಕ್ತಪಡಿಸುವದು ಸೇರಿರುತ್ತದೆ. ನಾವು ಮೂವತ್ತು ವರ್ಷದಿಂದ ಹೆಂಡತಿಯಾಗಿದ್ದವಳು ಗಂಡನಿಗೆ ಆತನು ಆಕೆಯನ್ನು ಪ್ರೀತಿಸುತ್ತಾನೋ ಎಂದು ಕೇಳಿದಾಗ, ಗಂಡನು "ನಾನು ನಿನ್ನನ್ನು ಪ್ರೀತಿಸುತ್ತೇನೆಂದು ಒಂದು ಸಾರಿ ಹೇಳಿದ್ದೇನಲ್ಲಾ, ನಾನು ಮನಸ್ಸು ಬದಲಾಯಿಸಿಕೊಂಡರೆ ನಿನಗೆ ತಿಳಿಸುತ್ತೇನೆ ಬಿಡು" ಎಂದು ಹೇಳುವ ರೀತಿಯಲ್ಲಿರುವದಕ್ಕೆ ಪ್ರಯತ್ನಿಸಬಾರದು. ಬದಲಾಗಿ, ನಾವು ನಮ್ಮ ಪ್ರೀತಿಯನ್ನು ಆತನಿಗೆ ವ್ಯಕ್ತಪಡಿಸಬೇಕೆಂದು ದೇವರು ಇಚ್ಛಿಸುತ್ತಾನೆ. ಆತನಿಗೆ ಇದು ನಮ್ಮಿಂದ ಅಗತ್ಯವಿದೆ ಎಂಬ ಕಾರಣಕ್ಕಾಗಿ ಅಲ್ಲ, ಆದರೆ ನಾವು ಆತನ ಮೇಲೆ ಎಷ್ಟು ಅವಲಂಬಿತರಾಗಿದ್ದೇವೆಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ಆತನು ಬಯಸುತ್ತಾನೆಂಬ ಕಾರಣಕ್ಕಾಗಿಯೇ ನಾವು ಅದನ್ನು

ಮಾಡಬೇಕೆಂದು ಆತನು ಇಚ್ಛಿಸುತ್ತಾನೆ.

ಪೌಲನು ಕೃತಜ್ಞತಾಸ್ತುತಿಗಳನ್ನು ಅರ್ಪಿಸಬೇಕೆಂದು ನೀಡಿದ ಆಜ್ಞೆಯಲ್ಲಿ "ಎಲ್ಲಾದರಲ್ಲಿಯೂ" ಎಂಬ ಮಾತುಗಳನ್ನು ಸೇರಿಸಿದನೆಂಬುದನ್ನು ಗಮನಿಸಿರಿ. ಫಿಲಿಪ್ಪಿ 4:11ರಲ್ಲಿ, ಪೌಲನು ಹೀಗೆ ಬರೆದನು, "ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ." "ನಾವು ದೇವರಿಗೆ ಸಮಾಧಾನ ಮತ್ತು ಸಮೃದ್ಧಿಗಳಿಗಾಗಿ ಮಾತ್ರವೇ ಅಲ್ಲ, ಆದರೆ ವೇದನೆ ಹಾಗೂ ಹಿಂಸೆಗಳಿಗಾಗಿ ಸಹ" ಕೃತಜ್ಞತಾಸ್ತುತಿಗಳನ್ನು ಅರ್ಪಿಸಬೇಕು (ಅಪೊಸ್ತಲರ ಕೃತ್ಯಗಳು 5:41) ಎಂದು McGarvey ಮತ್ತು Pendleton ನಮಗೆ ಜ್ಞಾಪಕ ಪಡಿಸುತ್ತಾರೆ.[55] ಅವುಗಳು ಆತ್ಮೀಕ ಬೆಳವಣಿಗೆಗಾಗಿ ಸದವಕಾಶಗಳಾಗಿರಬಲ್ಲವು.

ನಾವು ಕೃತಜ್ಞತೆಯುಳ್ಳವರಾಗಿರಬೇಕು ಯಾಕೆಂದರೆ ಇದು "ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ" ಆಗಿದೆ (ವ. 18b). ಇದು ಪೌಲನ ಅಥವಾ ಬೋಧಕರ ಬಯಕೆಯಲ್ಲ, ಅದು ದೇವರ ಬಯಕೆಯೇ ಆಗಿದೆ! ನಾವು ನಮ್ಮ ಕುಟುಂಬಗಳಿಗಾಗಿ, ಆಹಾರ, ಬಟ್ಟೆ, ಮನೆಗಳು, ಸಂಕಷ್ಟಗಳು, ಮತ್ತು ಸಮಸ್ಯೆಗಳಿಗಾಗಿ ದೇವರಿಗೆ ಕೃತಜ್ಞತಾಸ್ತುತಿಯನ್ನು ಅರ್ಪಿಸುತ್ತೇವೋ?

ನಾವು ಸಂತೋಷವುಳ್ಳವರಾಗಿ, ಅವಲಂಬಿತರಾಗಿ, ಮತ್ತು ದೇವರ ಕೃತಜ್ಞತೆಯುಳ್ಳ ಮಕ್ಕಳಾಗಿರತಕ್ಕದ್ದು. ಆತನು ಒಬ್ಬ ತಂದೆಯು ಹೇಗೋ ಹಾಗೆಯೇ ನಮ್ಮನ್ನು ಆರೈಕೆ ಮಾಡುತ್ತಾನೆ. ನಾವು ನಮ್ಮ ಕೃತಜ್ಞತಾಭಾವನೆಯನ್ನು ತೋರಿಸುವವರಾಗಿರೋಣ ಮತ್ತು ಆತನ ಪುತ್ರರು ಹಾಗೂ ಪುತ್ರಿಯರಾಗಿ ಸಮರ್ಪಕವಾದ ಕ್ರೈಸ್ತೀಯ ಮನೋಭಾವಗಳನ್ನು ಬೆಳೆಸಿಕೊಳ್ಳೋಣ! EE

## ದೂರವಿರಬೇಕಾದ ಕೆಲವು ಅತಿರೇಕಗಳು (5:19, 20)

ಜನರು ಒಂದು ಅತಿರೇಕದಿಂದ ಮತ್ತೊಂದು ಅತಿರೇಕದ ತಳಕ್ಕೆ ಸೇರಿಕೊಂಡು ಬಿಡುವ ಪ್ರವೃತ್ತಿ ಹೊಂದಿರುತ್ತಾರೆ. 19 ರಿಂದ 20 ವಚನಗಳಲ್ಲಿ, ಥೆಸಲೋನಿಕದ ಸಭೆಯು ಇಟ್ಟುಕೊಂಡಿದ್ದ ಕೆಲವೊಂದು ಅತಿರೇಕದ ದೃಷ್ಟಿಕೋನಗಳನ್ನು ಕುರಿತು ಮಾತಾಡುತ್ತಾನೆ. ಪೌಲನ ಮೌಲ್ಯಮಾಪನದ ಪ್ರಕಾರ, ಸಮತೋಲವು ಪ್ರಾಮುಖ್ಯವಾಗಿತ್ತು. ಆತನು ಸಭೆಗೆ ಮಧ್ಯದ ನಿಲುವನ್ನು ಹೊಂದಿರಬೇಕೆಂದು ಬೇಡಿಕೊಳ್ಳುತ್ತಾನೆ. ಅವರು ದೂರವಿರಬೇಕೆಂದು ಪೌಲನು ಬಯಸಿದ ಈ ಅತಿರೇಕದ ಅಭಿಪ್ರಾಯಗಳಾವವು?

*ಪವಿತ್ರಾತ್ಮನ ಕುರಿತು ಅತಿರೇಕದ ಅಭಿಪ್ರಾಯಗಳು.* ಪೌಲನು ಹೀಗೆ ಹೇಳುತ್ತಾನೆ, "ಪವಿತ್ರಾತ್ಮನನ್ನು ನಂದಿಸಬೇಡಿರಿ" ಎಂದು ಹೇಳುತ್ತಾನೆ (ವ. 19). ಆತನು ಇಲ್ಲಿ ದೇವತ್ವದ ಮೂರನೆಯ ವ್ಯಕ್ತಿಯಾದ, ಪವಿತ್ರಾತ್ಮನ ಕುರಿತು ಮಾತಾಡಿದನು. ಪವಿತ್ರಾತ್ಮನು ಆಗ ಮತ್ತು ಈಗ, ದೇವರಿಗೆ ವಿಧೇಯರಾಗುವವರಿಗೆ ದಯಪಾಲಿಸಲ್ಪಟ್ಟಿರುತ್ತಾನೆ (ಅಪೊಸ್ತಲರ ಕೃತ್ಯಗಳು 5:32). ಪಂಚಾಶತ್ತಮ ದಿನದಂದು ಅಪೊಸ್ತಲರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರೆಂಬದಾಗಿ ಲೂಕನು ಬರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 2:1-4). ಪೌಲನು ತನ್ನ ವಾಚಕರಿಗೆ ಪವಿತ್ರಾತ್ಮನನ್ನು "ನಂದಿಸಬೇಡಿರಿ" ಎಂದು

ವಿನಂತಿಸಿಕೊಂಡನು.

ಪೌಲನು ಬಹುಶಃ ಮನಸ್ಸಿನಲ್ಲಿ ಪವಿತ್ರಾತ್ಮನ ಅದ್ಭುತಕರವಾದ ವರಗಳಾದ ವಾಣಿಗಳನ್ನಾಡುವ (ಅನ್ಯಭಾಷೆ), ಅರ್ಥಹೇಳುವ, ಅದ್ಭುತಗಳು, ಮತ್ತು ಪ್ರವಾಧನೆಯ ವರಗಳನ್ನು ಇಟ್ಟುಕೊಂಡು ಹೇಳಿರಬಹುದಾಗಿದೆ (1 ಕೊರಿಂಥ 12:8-11). ಇವುಗಳು ಮೊದಲ ಶತಮಾನದಲ್ಲಿ ಕೆಲವು ಕ್ರೈಸ್ತರು ಹೊಂದಿದ್ದ ವರಗಳಾಗಿವೆ. ಅವರು ಏಕೆ ಅಂತ ವರಗಳನ್ನು ಹತ್ತಿಕ್ಕುವದಕ್ಕೆ ಬಯಸುವರು? ಯಾಕೆಂದರೆ ಕೆಲವರು ಈ ವರಗಳನ್ನು ಹೊಂದಿದ್ದೇವೆಂದು ಸುಳ್ಳಾಗಿ ಹೇಳಿಕೊಳ್ಳುತ್ತಿದ್ದರು (ನೋಡಿರಿ 1 ಯೋಹಾನ 4:1). ಸುಳ್ಳು ಪ್ರವಾದಿಗಳು ಅಥವಾ ತೊಂದರೆ ಮಾಡುವವರು ಜನರನ್ನು ಎಷ್ಟರ ಮಟ್ಟಿಗೆ ನಿರಾಶೆಗೊಳಿಸಿದರೆಂದರೆ ಅದರಿಂದ ಅವರು ಅತಿರೇಕದ ಪ್ರತಿಕ್ರಿಯೆಯನ್ನು ತೋರುವಂತಾಯಿತು.

ಕಪಟದ ಅದ್ಭುತಕರ ವರಗಳ ಪ್ರದರ್ಶನಗಳ ಕಾರಣದಿಂದ, ಪರಿಪಕ್ವವಿಲ್ಲದ ಕ್ರೈಸ್ತರು ತಮಗೆ ಒಂದು ಅದ್ಭುತಕರ ವರವಿದೆಯೆಂದು ಹೇಳಿಕೊಳ್ಳುವ ಯಾರನ್ನೇ ಆಗಲಿ ಕೇಳಿಸಿಕೊಳ್ಳಲು ಸಂಕೋಚ ಪಡುತ್ತಿದ್ದರು, ಮತ್ತು ವರಗಳನ್ನು ಹೊಂದಿದ್ದ ನಾಯಕರು ಸಹ ಅವುಗಳನ್ನು ಬಳಸುವದಕ್ಕೆ ಹಿಂದೆಟು ಹಾಕುತ್ತಿದ್ದರು. ಇದು ಕೊರಿಂಥದಲ್ಲಿ ಕಂಡು ಬರುವದಕ್ಕೆ ಒಂದು ವಿರುದ್ಧವಾದ ಅತಿರೇಕವಾಗಿರುತ್ತದೆ (1 ಕೊರಿಂಥ 14). ಈ ಎಲ್ಲಾ ನಂದಿಸುವಿಕೆಯು ಪವಿತ್ರಾತ್ಮನ ಅಗ್ನಿಯ ಮೇಲೆ ತಣ್ಣಿರನ್ನು ಎರಚಿದಂತಿತ್ತು, ಹೀಗೆ ದೇವರ ಸಂದೇಶಕ್ಕೆ ಅಡ್ಡಿಯಾಗುತ್ತಿತ್ತು.

ಇದು ಇಂದು ನಮಗೆ ಹೇಗೆ ಅನ್ವಯವಾಗುತ್ತದೆ? ಇಂದು ಪವಿತ್ರಾತ್ಮನು ಈ ವಿಧವಾದ ಅದ್ಭುತಕರ ವರಗಳನ್ನು ದಯಪಾಲಿಸುವದಿಲ್ಲವಾದ್ದರಿಂದ, ಆತನು ದಯಪಾಲಿಸುತ್ತಾನೆಂದು ಹೇಳಿಕೊಳ್ಳುವದಕ್ಕೆ ಬೆಂಬಲವನ್ನು ನೀಡಲು ಈ ವಾಕ್ಯಭಾಗವನ್ನು ದುರುಪಯೋಗ ಪಡಿಸಿಕೊಂಡಂತಾಗುತ್ತದೆ. ನಾವು ಅದೇ ರೀತಿಯಲ್ಲಿ ಪವಿತ್ರಾತ್ಮನನ್ನು ನಂದಿಸುವದಕ್ಕೆ ಸಾಧ್ಯವಿರುವದಿಲ್ಲ. ಹೇಗೂ, ಅತಿರೇಕ ತೀರ್ಪುಗಳನ್ನು ಮಾಡುವದರಿಂದ ದೂರವಿರಬೇಕೆಂಬದರ ಕುರಿತ ಪೌಲನ ಸಂದೇಶವು ನಾವು ಕೇಳಿಸಿಕೊಳ್ಳಬೇಕಾದ ಅಗತ್ಯವಿರುವ ಒಂದು ತತ್ವವಾಗಿರುತ್ತದೆ.

ನಾವು ಇಷ್ಟಪಡದ ಸಂಗತಿಗಳನ್ನು ನೋಡುವಾಗ ಜನರ ಕಡೆಗೆ ಅತಿರೇಕರ ಪ್ರತಿಕ್ರಿಯೆಗಳನ್ನು ತೋರುವ ಪ್ರವೃತ್ತಿ ಹೊಂದಿರುತ್ತೇವೆ. ನಮ್ಮ ಮುಂದೆ ವಂಚನೆ ಮಾಡುವವರೆಂಬ ಖ್ಯಾತಿ ಇರುವಂತ ಕೆಲವು ಅಪ್ರಾಮಾಣಿಕರಾದ ಟಿವಿ ಸುವಾರ್ತಿಕರಿದ್ದಾರೆ. ಆದದರಿಂದ, ಕೆಲವರು ಬೋಧಕರೆಲ್ಲರೂ (ಅಥವಾ ಆ ವಿಷಯದಲ್ಲಿ ನೋಡಿದರೆ, ಕ್ರೈಸ್ತರೆಲ್ಲರೂ) ಕಪಟಿಗಳೆಂಬ ನಿರ್ಣಯಕ್ಕೆ ಬಂದು ಬಿಡುತ್ತಾರೆ. ಇದೊಂದು ಅಸಮತೋಲನವುಳ್ಳ ಪ್ರತಿಕ್ರಿಯೆಯಾಗಿರುತ್ತದೆ. ಕೆಲವು ಬೋಧಕರು ಇಂದು ಹೊಸ ಒಡಂಬಡಿಕೆಯ ನಮೂನೆಯ ಸಭೆಯ ಇರುವಿಕೆಯ ಬಗ್ಗೆ ಕಲಿಸಿದಿರುವ ತಪ್ಪು ಮಾಡುತ್ತಾರೆ, ಆದರೆ ಪ್ರತಿಯೊಬ್ಬರು ಈ ತಪ್ಪನ್ನು ಮಾಡುತ್ತಾರೆಂಬದಾಗಿ ಸಂಶಯಿಸುವ ಪ್ರಲೋಭನೆಗೆ ಒಳಗಾಗದಿರೋಣ. ಯಥಾರ್ಥವಾದ ಸಂದೇಶಗಳಿಗೆ ನಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುವ ಹಾಗೆ ಸೈತಾನನು ಭಯ ಮತ್ತು ಹತಾಶೆಗಳನ್ನು ಬಳಸಿಕೊಳ್ಳುತ್ತಾನೆ. ನಾವು ಎಲ್ಲಾ ಬೋಧಕರನ್ನು ಸಂಶಯಿಸುತ್ತಾ ತಿರುಗಾಡಿದರೆ, ನಾವು ಎಂದಿಗೂ ಪವಿತ್ರಾತ್ಮನ

ಸಂದೇಶವನ್ನ ಕೇಳಿಸಿಕೊಳ್ಳದೆಯೇ ಹೋಗಬಹುದು.

*ಪ್ರವಾದನೆಯ ಕುರಿತ ಅತಿರೇಕದ ಅಭಿಪ್ರಾಯಗಳು.* 20ನೇ ವಚನದಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ಪ್ರವಾದನೆಗಳನ್ನು ಹೀನೈಸಬೇಡಿರಿ." ಈ ಒಂದು ನಿರ್ದಿಷ್ಟವಾದ ಅದ್ಭುತಕರ ವರವನ್ನು ಪೌಲನು ಬಹಳವಾಗಿ ಶಿಫಾರಸ್ಸು ಮಾಡುತ್ತಾನೆ (ನೋಡಿರಿ 1 ಕೊರಿಂಥ 14:5). ಇದರ ಹೊರತಾಗಿಯೂ, ಕೆಲವರು ಪ್ರವಾದಿಗಳೆಂಬ ಕಟಪ ನಾಟಕವನ್ನಾಡಿದ ಕಾರಣದಿಂದ, ನಿಜವಾದ ಪ್ರವಾದನೆಯ ನುಡಿಗಳು ಸಹ ಥೆಸಲೋನಿಕದವರ ತಾತ್ಸಾರಕ್ಕೆ ಗುರಿಯಾಗಿದ್ದವು. ಅತಿಯಾದ ಪ್ರತಿಕ್ರಿಯೆಯನ್ನು ತೋರದಂತೆ ಪೌಲನು ಸಭೆಗೆ ಹೇಳುತ್ತಾನೆ ಯಾಕೆಂದರೆ ಹಾಗೆ ಮಾಡುವದರಿಂದ ದೇವರಿಂದ ಬರುವ ನಿಜವಾದ ಪ್ರಕಟನೆಗಳನ್ನು ತಿರಸ್ಕರಿಸುವಂತಾಗುತ್ತದೆ.

ಇದು ಈ ದಿನ ಹೇಗೆ ಅನ್ವಯವಾಗುತ್ತದೆ? ಪುನಃ, ಇಂದು ಆಗಿನಂತೆ ಅದ್ಭುತಕರವಾಗಿ ಪ್ರೇರಿತವಾದ ಪ್ರವಾದನೆಗಳು ಇರುವದಿಲ್ಲ, ಆದರೆ ನಾವು ಪ್ರಸಂಗಿಗಳಿಗೆ, ಬೋಧಕರಿಗೆ, ಅಥವಾ ಹಿರಿಯರಿಗೆ ಅತಿರೇಕದ ಪ್ರತಿಕ್ರಿಯೆಗಳನ್ನು ತೋರಿದ ತಪ್ಪಿಗೊಳಗಾಗಬಲ್ಲೆವು. ನಾವು ಸಭೆಯಲ್ಲಿ ಒಂದು ವಾಕ್ಯಾಧಾರಿತವಲ್ಲದ ಪ್ರಸಂಗ ಅಥವಾ ಪಾಠವೊಂದನ್ನು ಕೇಳಿಸಿಕೊಳ್ಳುವಾಗ, ನಾವು ಏಕಾಏಕಿ ಎಲ್ಲಾ ಬೋಧಿಸುವಿಕೆ ಅಥವಾ ಉಪದೇಶವು ಸಂಶಯಾತ್ಮಕವೆಂಬ ನಿರ್ಣಯಕ್ಕೆ ಬರಬಾರದು. ಪೌಲನು ಹೀಗೆ ಹೇಳುವನು, "ಅತಿರೇಕಗಳಿಂದ ದೂರವಾಗಿರಿ; ದೇವರ ವಾಕ್ಯವನ್ನ ಹೀನೈಸಬೇಡಿರಿ!" ಯಾವಾಗೆಲ್ಲಾ ಒಂದು ಸತ್ಯವಾದ ಬೈಬಲಾಧಾರಿತ ಸಂದೇಶವು ಸಾರಲ್ಪಡುತ್ತದೋ ಅದನ್ನು ನಾವು ಹೀನೈಸಬಾರದು, ಆದರೆ ಅದನ್ನ ಅಂಗೀಕರಿಸಿಕೊಳ್ಳಬೇಕು! EE

## ವಿವೇಚಿಸುವದಕ್ಕೆ ಕಲಿತುಕೊಳ್ಳುವದು: "ಎಲ್ಲವನ್ನೂ ಪರಿಶೋಧಿಸಿರಿ" (5:21, 22)

ಸತ್ಯವಾದ ಮತ್ತು ಸುಳ್ಳಾದ ಬೋಧನೆಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕೆಂದು ಪೌಲನು ಥೆಸಲೋನಿಕದವರನ್ನು ಬೇಡಿಕೊಳ್ಳುತ್ತಾನೆ. ಆತನು ಹೀಗೆ ಹೇಳುತ್ತಾನೆ, "ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ" (ವಚನಗಳು 21, 22). ನಾವು ಕೇಳಿಸಿಕೊಳ್ಳುವಂತಹ ವಿವಿಧ ಸಂಗತಿಗಳನ್ನು ನಾವು ಹೇಗೆ ಪರಿಶೋಧಿಸಬೇಕು?

*ಮೊದಲನೆಯದಾಗಿ, ಇದೊಂದು ವೈಯಕ್ತಿಕವಾದ ಜವಾಬ್ದಾರಿಯಾಗಿದೆ ಎಂಬುದನ್ನು ಗಮನಿಸುವದು ಪ್ರಾಮುಖ್ಯವಾಗಿರುತ್ತದೆ.* ಅಪೊಸ್ತಲರ ಕೃತ್ಯಗಳು 17:11ರಲ್ಲಿ, ಬೆರೋಯದ ಕ್ರೈಸ್ತರು ಪೌಲನ ಬೋಧನೆಗಳು ಸತ್ಯವೋ ಎಂದು ದಿನಾಲೂ ಶಾಸ್ತ್ರಗಳನ್ನು ಪರಿಶೋಧಿಸುತ್ತಿದ್ದಾರಾದ್ದರಿಂದ, ಅವರು "ಸದ್ಗುಣವುಳ್ಳವರು" ಎಂದು ಪರಿಗಣಿಸಲ್ಪಟ್ಟಿದ್ದರೆಂದು ಲೂಕನು ಬರೆಯುತ್ತಾನೆ. ನಾವು ಪ್ರಸಂಗಗಳಲ್ಲಿ ಅಥವಾ ಬೈಬಲ್ ತರಗತಿಗಳಲ್ಲಿ ಕೇಳಿಸಿಕೊಳ್ಳುವ ಸಂಗತಿಗಳು ಶಾಸ್ತ್ರಗಳಿಗುನುಣವಾಗಿದೆಯೋ ಇಲ್ಲವೋ ಎಂಬುದನ್ನು ವಿವೇಚಿಸಿಕೊಳ್ಳುವದಕ್ಕಾಗಿ ಅವುಗಳನ್ನು ಪರಿಶೋಧಿಸುವದು ನಮ್ಮ ಜವಾಬ್ದಾರಿಯಾಗಿರುತ್ತದೆ.

*ಎರಡನೆಯದಾಗಿ, ನಾವು ಯಾವದು ಸತ್ಯವೆಂಬದಾಗಿ ದೃಢತೀರ್ಮಾನ*

*ಮಾಡಿಕೊಳ್ಳುತ್ತೇವೋ ಅದನ್ನು "ಭದ್ರವಾಗಿ ಹಿಡಿದುಕೊಳ್ಳಬೇಕು."* ನಾವು ಹಿಡಿದುಕೊಳ್ಳಬೇಕಾದ "ಒಳ್ಳೇದು" ಯಾವದು? ಮೂಲಭೂತವಾದ ಬೈಬಲನುಸಾರದ ಸತ್ಯಗಳನ್ನು ನೆನಪಿಟ್ಟುಕೊಳ್ಳಿರಿ: ದೇವರ ಮೇಲೆ ಪ್ರೀತಿ, ಕ್ರಿಸ್ತನಿಗೆ ನಂಬಿಗಸ್ತಿಕೆ, ಕುಟುಂಬದ ಮೇಲೆ ಪ್ರೀತಿ, ಲೈಂಗಿಕ ಶುದ್ಧತೆ, ಮತ್ತು ಬೇರೆಯವರಿಗೆ ಸೇವೆ ಮಾಡುವದು. ಇವುಗಳನ್ನು ಭದ್ರವಾಗಿ ಹಿಡಿದುಕೊಳ್ಳಿರಿ, ಅವುಗಳನ್ನು ಹೃದಯದಲ್ಲಿರಿಸಿಕೊಳ್ಳಿರಿ, ಮತ್ತು ಅವುಗಳನ್ನು ಆಚರಣೆಗೆ ತನ್ನಿರಿ.

*ಮೂರನೆಯದಾಗಿ, ನಾವು ಕೆಟ್ಟತನದಿಂದ ದೂರವಾಗಿರಬೇಕು. ಅದನ್ನು ನಿಮ್ಮೆಡೆಗೆ ಎಳೆದುಕೊಳ್ಳದಿರಿ; ಅದನ್ನು ದೂರಕ್ಕೆ ತಳ್ಳಿರಿ.* ನಮಗೂ ಕೆಟ್ಟತನಕ್ಕೂ ಯಾವದೇ ಸಂಬಂಧವಿಲ್ಲ. KJV ತರ್ಜುಮೆಯಲ್ಲಿ ನಾವು ಕೆಟ್ಟತನದ "ಸಕಲ ತೋರಿಕೆಯಿಂದ" ದೂರವಿರಬೇಕೆಂದು ಹೇಳುತ್ತದಾದರೂ, ಪೌಲನು ಇಲ್ಲಿ ಕೆಟ್ಟತನದ ತೋರಿಕೆಯನ್ನಷ್ಟೆ ಅಲ್ಲದೆ, ಸ್ವತಃ ಕೆಟ್ಟತನದಿಂದಲೇ ದೂರವಿರಬೇಕೆಂಬುದನ್ನು ಒತ್ತಿ ಹೇಳುತ್ತಾನೆ. ಈ ದಿನಗಳಲ್ಲಿ ನಾವು ದೂರವಿರಬೇಕಾದ ಕೆಟ್ಟತನಗಳಾವವು? ಗರ್ಭಪಾತ, ಬೈಬಲಿಗೆ ವಿರುದ್ಧವಾಗಿರುವ ಮರುವಿವಾಹಗಳು, ಸಲಿಂಗಕಾಮದ ಬಂಧಗಳು, ತೆರಿಗೆ ವಂಚನೆ, ಮತ್ತು ಪಾಷಂತನಗಳಂತಹ ಈ ಕಾರ್ಯಗಳಿಂದ ದೂರವಾಗಿರಿ. EE

## ಪರಿಪಕ್ವತೆಯ ಕುರಿತು ದೇವರ ದೃಷ್ಟಿಕೋನ (5:12-23)

ನಮ್ಮಲ್ಲಿ ಬಹಳಷ್ಟು ಮಂದಿ ನಮ್ಮ ಸ್ವಂತ ಆತ್ಮೀಕತೆಯ ಕುರಿತು ಮೌಲ್ಯಮಾಪನವನ್ನು ಹೊಂದಿರುತ್ತೇವೆ. ನಾವು ಇದನ್ನು ನಮ್ಮ ಸ್ವಂತ ಆತ್ಮೀಕ ಮಟ್ಟದ ಕುರಿತಾದ ನಮ್ಮ ಅಭಿಪ್ರಾಯವೆಂದು ಯೋಚಿಸಿಕೊಳ್ಳುವದು. ದೇವರು ತನ್ನ ಮಕ್ಕಳ ಪರಿಪಕ್ವತೆಯ ಕುರಿತು ಹೊಂದಿರುವ ದೃಷ್ಟಿಕೋನ ಯಾವದು? 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಕಡೇ ವಿಭಾಗವು ಕೇವಲ ಒಂದು ಯಾವದನ್ನು "ಮಾಡಬೇಕು" ಮತ್ತು "ಮಾಡಬಾರದು" ಎಂಬುದರ ಒಂದು ಪಟ್ಟಿಯಂತೆ ಕಾಣಿಸುತ್ತದೆ. ವಾಸ್ತವಿಕತೆಯಲ್ಲಿ, ಅದು ಪರಿಪಕ್ವತೆಗೆ ಒಂದು ಅದ್ಭುತವಾದ ಮಾರ್ಗದರ್ಶಿಯಾಗಿರುತ್ತದೆ, ಪರಿಪಕ್ವವಾದ ಕ್ರೈಸ್ತೀಯ ಜೀವಿತಕ್ಕೆ ಬೇಕಾದ ಕ್ರಿಯೆಗಳನ್ನು ಮತ್ತು ಮನೋಭಾವಗಳನ್ನು ನಮ್ಮ ಮುಂದಿಡುತ್ತದೆ. ನಮ್ಮ ಪರಿಪಕ್ವತೆಗಾಗಿ ದೇವರ ನಿರ್ದೇಶನಗಳಾವವು?

*ನಮ್ಮ ಸಂಬಂಧಗಳಲ್ಲಿ ಪರಿಪಕ್ವತೆಯುಳ್ಳವರಾಗಿರುವದು (5:12-15).* ಕ್ರೈಸ್ತತ್ವವು ಒಂದು ಸಂಬಂಧವಾಗಿರುತ್ತದೆ. ಅದು ಕ್ರಿಸ್ತನ ಮುಖಾಂತರ ದೇವರೊಂದಿಗೆ ಸ್ನೇಹವನ್ನು ಹೊಂದಿರುವಿಕೆ ಆಗಿದೆ. ನಾವು ದೇವರ ಸಂಗಡ ಹೊಂದಿರುವ ಸಂಬಂಧವು ಇತರರೊಂದಿಗಿರುವ ನಮ್ಮ ಸಂಬಂಧಗಳೊಳಗೆ ಪ್ರತಿಬಿಂಬಿಸಲ್ಪಡಬೇಕೆಂದು ದೇವರು ಯೋಜನೆಯನ್ನು ಮಾಡಿರುತ್ತಾನೆ.

"ದೇವರಿಗೆ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" ಎಂಬುದು ಎಫೆಸ 5:1ರ ಆಜ್ಞೆಯಾಗಿದೆ. ಜೀವಿಸುವದಕ್ಕಾಗಿರುವ ಈ ನಿಮಯವು ದಯೆ, ಪ್ರೀತಿ, ಮತ್ತು ಕ್ಷಮಾಪಣೆಗಳ ಗುಣಸ್ವಭಾವಗಳನ್ನು ಕುರಿತು ಮಾತಾಡುವ ವಾಕ್ಯಭಾಗದಲ್ಲಿ ನೆಲೆಸಿರುತ್ತದೆ. ಅದು ಈ ಗುಣಸ್ವಭಾವಗಳ ಉತ್ಪನ್ನವಾಗಿರುವ ಯೇಸುವಿನ ಯಜ್ಞದಲ್ಲಿ

ದೃಷ್ಟಾಂತಗೊಳಿಸಲ್ಪಟ್ಟಿರುತ್ತದೆ.

ನಾವು ನಮ್ಮ ಸಂಬಂಧಗಳಲ್ಲಿ ದೇವರ ಗುಣಸ್ವಭಾವವನ್ನು ಹೇಗೆ ತೋರ್ಪಡಿಸುತ್ತೇವೆ? 5:12-15 ವಚನಗಳು ನಮಗೆ ಏನನ್ನು ಮಾಡಬೇಕೆಂದು ಹೇಳುತ್ತವೆಂಬುದನ್ನು ನೋಡಿರಿ:

> ಸಹೋದರರೇ, ಯಾರು ನಿಮ್ಮಲ್ಲಿ ಪ್ರಯಾಸಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ. ಸಹೋದರರೇ, ಅಕ್ರಮವಾಗಿ ನಡೆಯುವವರಿಗೆ ಬುದ್ಧಿಹೇಳಿರಿ, ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ. ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ ಎಂದು ನಿಮ್ಮನ್ನು ಪ್ರಬೋಧಿಸುತ್ತೇವೆ ಯಾರೂ ಅಪಕಾರಕ್ಕೆ ಅಪಕಾರಮಾಡದಂತೆ ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ.

ಸೋಮಾರಿಗಳಾಗಿರುವ ಅಥವಾ ತೊಂದರೆಗಳನ್ನು ಉಂಟು ಮಾಡುವ ಜನರನ್ನು ನಾವು ಬಲ್ಲೆವು. ನಮಗೆ ಭಯದಿಂದ ತುಂಬಿರುವ ಮತ್ತು ಬಲಹೀನರಾಗಿರುವ ಜನರು ಕಂಡು ಬರುತ್ತಾರೆ. ಅವರಿಗೆ ದೇವರ ದಾರಿಯಲ್ಲಿ ಪ್ರತ್ಯುತ್ತರ ನೀಡಿರಿ. ಇದೇ ಪರಿಪಕ್ವತೆಯಾಗಿದೆ: ಇವರೆಲ್ಲರಿಗೂ ಯಾವದೇ ಒಳ್ಳೇದನ್ನು ಕೊಡುವದು, ಎಲ್ಲರೂ ಬೆಳೆಯಬಲ್ಲ ಮತ್ತು ಅಭಿವೃದ್ಧಿಗೊಳ್ಳಬಹುದಾದ ಸಮಾಧಾನ ಹಾಗೂ ಪ್ರೀತಿಯ ಪರಿಸ್ಥಿತಿಯನ್ನು ಸೃಷ್ಟಿಸಲು ಪ್ರಯತ್ನಿಸುವದು.

ಇದೊಂದು ಅಗತ್ಯವಿರುವ ಮತ್ತು ಪ್ರಯೋಜನಕರವಾದ ಕೆಲಸವಾಗಿರುತ್ತದೆ. ಅದು ಕಾರ್ಯರೂಪದಲ್ಲಿರುವ ಕ್ರೈಸ್ತ ಪರಿಪಕ್ವತೆಯಾಗಿರುತ್ತದೆ. ಅದು ದೇವರ ಕೆಲಸವಾಗಿದೆ! ಇದು ಯೇಸುವು ಮಾಡಿದ ಕೆಲಸವಾಗಿದೆ, ಮತ್ತು ಅದು ಪೂರ್ತಿಗೊಳ್ಳುವ ತನಕ ಆತನು ಅದರಲ್ಲಿ ತಾಳ್ಮೆಯಿಂದ ಕೆಲಸ ಮಾಡಿದ್ದನು. ಯೇಸು "ಆತನು ಉಪಕಾರಗಳನ್ನು ಮಾಡುತ್ತಾ ಸಂಚರಿಸಿದನು" (ಅಪೊಸ್ತಲರ ಕೃತ್ಯಗಳು 10:38). ಇತರರಿಗೆ ಒಳ್ಳೇದನ್ನು ಮಾಡುವದು ಸಂಬಂಧಗಳಲ್ಲಿ ಪರಿಪಕ್ವತೆಯನ್ನು ತೋರಿಸುತ್ತದೆ.

ನಾವು ಬೇರೆಯವರೊಂದಿಗಿರುವ ನಮ್ಮ ಸಂಬಂಧಗಳನ್ನು ಪರೀಕ್ಷಿಸಿಕೊಳ್ಳುವಾಗ ಏನನ್ನು ಕಾಣುತ್ತೇವೆ? ಅವರ ಅಗತ್ಯತೆಗಳನ್ನು ಕಂಡು ದೂರವಾಗಿ, ಚಿಂತೆಯಿಲ್ಲದವರಾಗಿ, ಮತ್ತು ಅಸಡ್ಡೆಯಿಂದ ಇದ್ದೇವೋ? ನಾವು ಬೇರೆಯವರ ಮೇಲೆ ಅಧಿಕಾರ ಚಲಾಯಿಸುವವರಾಗಿ ಅವರು ಎಲ್ಲವನ್ನೂ ನಾವು ಹೇಳಿದಂತೆಯೇ ಮಾಡಬೇಕೆಂದು ಒತ್ತಾಯಿಸುತ್ತಿದ್ದೇವೋ? ಇವುಗಳು ಬೇರೆಯವರೊಂದಿಗೆ ಸಂಬಂಧಗೊಳಿಸುವ ಪರಿಪಕ್ವವಿಲ್ಲದ ದಾರಿಗಳಾಗಿವೆ.

ನಾವು ಈ ವಿಧದಲ್ಲಿ ವರ್ತಿಸುತ್ತಿರುವದಾದರೆ, ಅಥವಾ ಈ ವಿಧದಲ್ಲಿ ವರ್ತಿಸಬೇಕೆಂಬ ಶೋಧನೆಗೊಳಗಾಗಿದ್ದಲ್ಲಿ, ಬೇರೆಯವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದರ ಕುರಿತ ದೇವರ ಬೋಧನೆಯನ್ನು ನಾವು ಮತ್ತೊಮ್ಮೆ ಓದಬೇಕಾಗುತ್ತದೆ. ನಾವು ಅವುಗಳನ್ನು

ಕಾರ್ಯರೂಪದಲ್ಲಿ ಕೈಕೊಂಡು ನಡೆಯಲಾರಂಭಿಸಬೇಕು ಮತ್ತು ಬಳಿಕ ನಮ್ಮ ಸಂಬಂಧಗಳಲ್ಲಿ ವೃದ್ಧಿಗೊಂಡು ಪರಿಪಕ್ವತೆಯನ್ನು ಹೊಂದುವದಕ್ಕಾಗಿ ಆ ಕಾರ್ಯರೂಪದ ಆಚರಣೆಗಳನ್ನು ಮುಂದುವರೆಸಬೇಕು.

*ನಮ್ಮ ವೈಯಕ್ತಿಕ ಜೀವಿತಗಳಲ್ಲಿ ಪರಿಪಕ್ವತೆಯುಳ್ಳವರಾಗಿರುವದು (5:16-22).* ದೇವರು ನಮ್ಮಿಂದ ಬಯಸುವ ರೀತಿಯಲ್ಲಿ ಬೇರೆಯವರಿಗೆ ಸಹಾಯ ಮಾಡುವದಕ್ಕೆ ಪ್ರಯತ್ನಿಸುವದು ನಾವು ಮಾಡಬಹುದಾದ ಅತ್ಯಂಥ ಪ್ರಾಮುಖ್ಯವಾದ ಕೆಲಸವಾಗಿರುತ್ತದೆ. ಅದು ಹತಾಶೆಯುಂಟು ಮಾಡುವಂತದ್ದು ಮತ್ತು ಬಳಲಿಹೋಗುವಂತೆ ಸಹ ಮಾಡುವಂತದ್ದಾಗಿದೆ. ಇದು ನಮ್ಮ ಆತ್ಮಗಳ ಬಲವನ್ನು ಬರಿದು ಮಾಡುವ ಸಾಮರ್ಥ್ಯವುಳ್ಳದ್ದಾಗಿರುವದಾದಲ್ಲಿ, ನಾವು ಬೇರೆಯವರಿಗೆ ಸಹಾಯ ಮಾಡುವದಕ್ಕೆ ಉತ್ತಮವಾಗಿ ಸಿದ್ಧತೆಯುಳ್ಳವರಾಗುವ ಹಾಗೆ, ನಾವು ನಮ್ಮ ಭಕ್ತಿವೃದ್ಧಿ ಮಾಡಿಕೊಳ್ಳುವದಕ್ಕೆ ಜಾಗ್ರತೆ ವಹಿಸತಕ್ಕದ್ದು. ಇದನ್ನು ಉತ್ತಮವಾದ ದಾರಿಯಲ್ಲಿ ಮಾಡಬೇಕೆಂದರೆ, ನಾವು ನಮ್ಮ ಸ್ವಂತ ಪರಿಪಕ್ವತೆಯ ಕಡೆಗೆ ಗಮನವನ್ನು ಹರಿಸಬೇಕಾಗುವದು.

ಇದು ಹೇಗೆ ಮಾಡಲ್ಪಡಬಹುದು? ಆ ಪ್ರಶ್ನೆಗೆ ಉತ್ತರವು ಇಲ್ಲಿದೆ:

> ಯಾವಾಗಲೂ ಸಂತೋಷಿಸಿರಿ; ಎಡೆಬಿಡದೆ ಪ್ರಾರ್ಥನೆಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ. ಪವಿತ್ರಾತ್ಮವನ್ನು ನಂದಿಸಬೇಡಿರಿ; ಪ್ರವಾದನೆಗಳನ್ನು ಹೀನೈಸಬೇಡಿರಿ; ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ (5:16-22).

ಯಾವದು ಆಜ್ಞೆಗಳ ಒಂದು ಪಟ್ಟಿಯೆಂಬಂತೆ ಕಾಣಬಹುದಾಗಿದೆಯೋ ಅದು ವಾಸ್ತವಿಕದಲ್ಲಿ ಉಜ್ಜೀವನಕ್ಕಾಗಿ, ವೈಯಕ್ತಿಕ ನವ ಚೈತನ್ಯವನ್ನು ಪಡೆದುಕೊಳ್ಳಲು ದೇವರ ಪಾಕಸೂತ್ರವಾಗಿರುತ್ತದೆ. ಈ ಚಟುವಟಿಕೆಗಳು ಕ್ರೈಸ್ತರನ್ನು ಪ್ರೋತ್ಸಾಹಗೊಂಡವರಾಗಿ ಇರುವಂತೆ ಮಾಡುತ್ತವೆ ಮತ್ತು ಪರಿಪಕ್ವತೆಯೆಡೆಗಿನ ಅವರ ಪ್ರಗತಿಯಲ್ಲಿ ಭಕ್ತಿವೃದ್ಧಿಗೊಂಡವರನ್ನಾಗಿ ಇಡುತ್ತದೆ.

ಈ ಚಟುವಟಿಕೆಗಳಲ್ಲಿ ನಾವು ಪಾಲ್ಗೊಳ್ಳುವಾಗ ನಮ್ಮ ಜೀವಿತಗಳಲ್ಲಿ ಏನು ಸಂಭವಿಸುತ್ತದೆ? ನಾವು ಸಂತೋಷಿಸುವೆವು; ನಾವು ಪ್ರಾರ್ಥಿಸುವವರಾಗಿರುತ್ತೇವೆ; ನಮ್ಮನ್ನು ಮಾರ್ಪಡಿಸುವಂತೆ ಪವಿತ್ರಾತ್ಮನನ್ನು ಕೇಳುವವರಾಗಿರುತ್ತೇವೆ. ನಾವು ದೇವರ ವಾಕ್ಯವನ್ನು ಅವಲಂಬಿಸುವವರು ಆಗುತ್ತೇವೆ, ಭಕ್ತಿಗೆ ಪ್ರಯೋಜನಕರವಾದದ್ದನ್ನು ಅಮೂಲ್ಯವೆಂದು ಇಟ್ಟುಕೊಂಡು ನಮ್ಮ ಜೀವಿತಗಳನ್ನು ಭಕ್ತಿಗೆ ಹಾನಿ ಮಾಡುವಂತದ್ದನ್ನು ತಿರಸ್ಕರಿಸುವವರಾಗುತ್ತೇವೆ. ಈ ಮನೋಭಾವಗಳು ಮತ್ತು ಚಟುವಟಿಕೆಗಳು ದೇವರ ನಮ್ಮಿಂದ ಬಯಸುವ ರೀತಿಯಲ್ಲಿ ಪ್ರೀತಿಸುವವರು, ಕ್ಷಮಿಸುವವರು, ತಾಳ್ಮೆಯಿಂದ ಸಹಾಯ ಮಾಡುವವರು ಆಗಿರುವಂತೆ ಸನ್ನದ್ಧುಗೊಳಿಸುವವು.

ನಾವು ಈ ಪ್ರಯೋಜನಕರವಾದ ಚಟುವಟಿಕೆಗಳನ್ನು ಯಾವಾಗಲೋ ಒಮ್ಮೆ ಮಾತ್ರವಲ್ಲದೆ, ನಮ್ಮ ಜೀವನಶೈಲಿಯ ಭಾಗವಾಗಿ ಹೇಗೆ ಮಾಡಿಕೊಳ್ಳಬಲ್ಲೆವು?

ಮೊದಲನೆಯದಾಗಿ, ಅವುಗಳು ಪ್ರಾಮುಖ್ಯವಾಗಿರುತ್ತವೆಂಬ, ಬೆಳವಣಿಗೆಗೆ ಸಾರಭೂತವಾದವುಗಳೆಂದು ಸಹ ನಮಗೆ ಮನವರಿಕೆಯಾಗಬೇಕು. ಹಾಗೆಂದು ಯಾರು ಹೇಳುತ್ತಾರೆ? ದೇವರು ಹಾಗೆ ಹೇಳುತ್ತಾನೆ! ಎರಡನೆಯದಾಗಿ, ನಾವು ಅವುಗಳನ್ನು ಮಾಡುವದಕ್ಕೆ ಆರಂಭಿಸಬೇಕು. ಬಹುಶಃ ನಾವು ಅಂಥ ಆರಂಭವನ್ನು ಮಾಡದೆ ಬಿಟ್ಟುಬಿಡುವದಕ್ಕೆ ಕಾರಣಗಳನ್ನು ಯೋಚಿಸಬಹುದು, ಆದರೆ ನಾವು ಆರಂಭಿಸುವ ತನಕ ಈ ಸದ್ಗುಣಗಳು ಎಂದಿಗೂ ನಮ್ಮ ಜೀವನದ ಭಾಗವಾಗುವದಕ್ಕೆ ಸಾಧ್ಯವಿಲ್ಲ-ಆದ್ದರಿಂದ ನಾವು ಒಂದು ಆರಂಭವನ್ನು ಮಾಡೋಣ! ಮೂರನೆಯದಾಗಿ, ನಾವು ಒಳ್ಳೇ ಕ್ರಿಯೆಗಳನ್ನು ಮಾಡುವದರಲ್ಲಿ ಮುಂದುವರೆಯಬೇಕು. ನಾವು ಅವುಗಳನ್ನು ಮರೆಯುವದಾದರೆ ಅಥವಾ ನಿರ್ಲಕ್ಷಿಸುವದಾದರೆ, ನಾವು ಪುನಃ ದಾರಿಗೆ ಬರುವದಕ್ಕಾಗಿ ಹೆಚ್ಚುವರಿ ಪರಿಶ್ರಮವನ್ನು ಪಡಬಹುದಾಗಿದೆ.

*ದೇವರ ಸಹಾಯ ಸ್ವೀಕರಿಸಲು ಮುಕ್ತರಾಗಿರುವದು (5:23).* ಪರಿಪಕ್ವವುಳ್ಳ ಜೀವಿತಗಳನ್ನು ನಡಿಸುವದಕ್ಕೆ ಪ್ರಯತ್ನಿಸುವದರಲ್ಲಿ, ನಾವು ನಮ್ಮ ಸ್ವಂತ ಬಲಹೀನತೆಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿರುವೆವು. ನಾವು ನಮ್ಮ ಸ್ವಂತ ವಿಫಲತೆಗಳನ್ನು ಗ್ರಹಿಸಿಕೊಳ್ಳುವೆವು. ನಾವು ಕೆಲವು ಸಾರಿ ದೇವರು ಬಯಸುವದನ್ನು ನಿರ್ಲಕ್ಷಿಸುವೆವು ಅಥವಾ ಅದಕ್ಕೆ ವಿರುದ್ಧ ಬಂಡಾಯ ಸಹ ಏಳುವೆವು. ನಾವು ಕೇವಲ ನಮ್ಮ ಮೇಲೆ ಮಾತ್ರವೇ ಆತುಕೊಂಡಿದ್ದಲ್ಲಿ, ನಾವು ನಿಶ್ಚಯವಾಗಿಯೂ ವಿಫಲರಾಗುವೆವು. ಪರಿಪೂರ್ಣತೆಯು ಕೇವಲ ಯೇಸುವಿನ ಮೂಲಕವಾಗಿ ದೇವರಲ್ಲಿ ಮಾತ್ರವೇ ಸಿಕ್ಕುತ್ತದೆ. ಪರಿಪಕ್ವವುಳ್ಳವರಾಗಿರಬೇಕೆಂಬ ಈ ಸವಾಲನ್ನು ಎದುರಿಸಲು ದೇವರು ನಮಗೆ ಸಹಾಯವನ್ನು ಮಾಡುವನು (ನೋಡಿರಿ 5:23).

ದೇವರು ಔದಾರ್ಯತೆಯುಳ್ಳ ದೇವರಾಗಿದ್ದು ತನ್ನ ಜೀವನ ಮತ್ತು ಪರಿಶುದ್ಧತೆಯನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತಾನೆ. ಇದನ್ನು ಸಾಧ್ಯವಾಗಿಸುವದಕ್ಕಾಗಿ ಆತನು ಯೇಸುವನ್ನು ಕೊಟ್ಟನು. ಪರಿಪಕ್ವವುಳ್ಳ ಕ್ರೈಸ್ತರಾಗಿ, ನಾವು ಎಲ್ಲದರಲ್ಲಿಯೂ ದೇವರ ಸಹಾಯವನ್ನು ಹುಡುಕುವೆವು. ದೇವರು ಈ ಜೀವನದಲ್ಲಿ ಮತ್ತು ನಿತ್ಯತ್ವದಲ್ಲಿ ನಮ್ಮನ್ನು ನೋಡಿಕೊಳ್ಳುವನು. ನಾವು ದೇವರ ಮೇಲೆ ಅವಲಂಬಿತರಾಗಿರಬಲ್ಲೆವು. ನಾವು ದೇವರ ಮೇಲೆ ಅವಲಂಬನೆಗೊಳ್ಳ*ತಕ್ಕದ್ದು*.

*ಮುಕ್ತಾಯ.* ಹೃದಯ ಮತ್ತು ಮನಸ್ಸುಗಳಲ್ಲಿನ ಕ್ರೈಸ್ತೀಯ ಪರಿಪಕ್ವತೆಯು ನಮ್ಮ ನುಡಿಗಳು ಮತ್ತು ಕ್ರಿಯೆಗಳಲ್ಲಿ ತೋರಿ ಬರುವವು. ನಾವು ಪರಿಪಕ್ವತೆಯನ್ನು ಸಾಧಿಸುವದಕ್ಕೆ ಪರಿಶ್ರಮ ಪಡುತ್ತಿರುವದಾದರೆ, ಫಲಿತಗಳು ಗೋಚರವಾಗುತ್ತವೆ-ನಮ್ಮೊಳಗೆ ಮಾತ್ರವೇ ಅಲ್ಲ, ಆದರೆ ನಮ್ಮ ಸುತ್ತಲು, ನಾವು ಪ್ರಭಾವಗೊಳಿಸುವವರ ಜೀವಿತಗಳಲ್ಲಿ ಕಂಡು ಬರುವವು. ನಾವು ವ್ಯತ್ಯಾಸವಾದವರೆಂದು ಗುರುತಿಸಲ್ಪಡುವೆವು. ನಾವು ದೇವಜನರೆಂದು ಗುರುತಿಸಲ್ಪಡುವೆವು! ದೇವರು ನಮ್ಮ ಸಂಗಡ ಇರುವಾಗ, ನಾವು ಈ ಜೀವನದಲ್ಲಿ ಪರಿಪಕ್ವತೆಯನ್ನು ಹೊಂದಬಲ್ಲೆವು ಮತ್ತು ಮುಂದಿನ ಜೀವನದಲ್ಲಿ ಆತನೊಂದಿಗೆ ಅನ್ಯೋನ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ಸಿದ್ಧರಾಗಿರಬಲ್ಲೆವು. TP

**“ಮಾಡಬಾರದು ಎಂಬವುಗಳು” (5:19-22)**

ಕ್ರೈಸ್ತತ್ವವು ಒಂದು ನಕಾರಾತ್ಮಕ ಧರ್ಮವಲ್ಲ, ಆದರೆ ಅದು ಕೆಲವೊಂದು “ಮಾಡಬಾರದು ಎಂಬವುಗಳನ್ನು” ಹೊಂದಿರುವದಂತೂ ನಿಜವಾಗಿದೆ. ನಾವು ಶುಭವಾರ್ತೆಗೆ ಬರಬೇಕೆಂದರೆ ಕೆಟ್ಟವಾರ್ತೆಯನ್ನು ಹಾಯ್ದು ಸಾಗಬೇಕು. ಪರಿಶುದ್ಧರಾಗಿರುವದಕ್ಕೆ ಸಮರ್ಪಣೆ ಮಾಡಿಕೊಂಡರೆ ಯಾವದೇ ವಿಧವಾದ ಅಶುದ್ಧತೆಯನ್ನು ತಿರಸ್ಕಾರ ಮಾಡಬೇಕಾದ ಅಗತ್ಯವಿರುವ ಪ್ರಕಾರವೇ, ಸತ್ಯದಲ್ಲಿ ನಡೆಯುವದೆಂದರೆ ದೋಷವಾದದ್ದನ್ನು ವಿರೋಧಿಸಬೇಕೆಂದು ಅರ್ಥವಾಗಿರುತ್ತದೆ.

ದೇವರು ನಮಗೆ ಕೊಟ್ಟಿರುವ ವಾಕ್ಯಕ್ಕೆ ಒಬ್ಬನು ನಂಬಿಗಸ್ತನಾಗಿರಬೇಕೆಂದರೆ ಅವಶ್ಯಕವಾಗಿರುವಂಥ ನಾಲ್ಕು ನಕಾರಾತ್ಮಕಗಳನ್ನು ಪೌಲನು ಕೊಡುತ್ತಾನೆ.

*ಪವಿತ್ರಾತ್ಮನನ್ನ ನಂದಿಸಬೇಡಿರಿ.* “ನಂದಿಸು” ಎಂಬ ಪದದ ಅರ್ಥವು ಪವಿತ್ರಾತ್ಮನನ್ನು ಹತ್ತಿಕ್ಕುವದು ಎಂದಾಗಿದೆ. ಒಬ್ಬ ಮನುಷ್ಯನು, “ಕರ್ತನೇ, ನಮ್ಮೊಳಗೆ ಆತ್ಮೀಕತೆಯ ಒಂದು ಕಿಡಿಯಿರುವಾದರೆ, ಆ ಕಿಡಿಗೆ ನೀರನ್ನು ಹಾಕು” ಎಂದು ಹೇಳಿದನು. ಆತನು ತನ್ನ ರೂಪಕಗಳನ್ನು ಅದಲುಬದಲು ಮಾಡಿಕೊಂಡನು, ಆದರೆ ಆತನ ತಾತ್ಪರ್ಯವೇನಾಗಿತ್ತೆಂಬುದು ನಮಗೆ ತಿಳಿದದೆ. ನಾವು ಪವಿತ್ರಾತ್ಮನ ಸ್ವರವನ್ನು “ನಂದಿಸಬಾರದು” ಅಥವಾ “ನೀರು ಹಾಕಬಾರದು” ಎಂಬದಾಗಿ 19ನೇ ವಚನವು ಹೇಳುತ್ತದೆ.

*ಪ್ರವಾದನೆಗಳನ್ನು ಹೀನೈಸಬೇಡಿರಿ.* “ಹೀನೈಸು” ಎಂದರೆ ಒಂದು ಸಂಗತಿಯನ್ನು ಕನಿಷ್ಠಗೊಳಿಸು ಅಥವಾ ಲಘುವಾಗಿಸು ಎಂದಾಗಿದೆ.

*ಪರಿಶೋಧಿಸದೆ ಸ್ವೀಕಸಿರಿಕೊಳ್ಳಬೇಡಿರಿ.* ನಾವು ಯಾವ ಸಂದೇಶವನ್ನು ಬೇಕಾದರೂ ಸುಮ್ಮನೇ ಸ್ವೀಕರಿಸುವಂತಿಲ್ಲ. ನಮಗೊಂದು ಸಂದೇಶವು ಎದುರಿಗೆ ಇರುವಾಗ, ನಾವು ಅದನ್ನು ಜಾಗರೂಕತೆಯಿಂದ ಪರಿಶೋಧಿಸಬೇಕು, ಅದನ್ನು ಪರೀಕ್ಷಿಸಬೇಕು. ಅದು ಸತ್ಯವೆಂದು ನಮಗೆ ಖಚಿತವಾದಲ್ಲಿ, ಆಗ ನಾವು ಅದನ್ನು ಸ್ವೀಕರಿಸಿಕೊಳ್ಳಬೇಕು. ಕ್ರಮವು ಹೇಗೆಂದರೆ ಮೊದಲು ಪರಿಶೋಧಿಸಬೇಕು ಮತ್ತು ನಂತರ ಸ್ವೀಕರಿಸಿಕೊಳ್ಳಬೇಕು.

*ಕೆಟ್ಟತನದಲ್ಲಿ ಪಾಲ್ಗೊಳ್ಳದಿರಿ.* ನಾವು ಕೆಟ್ಟತನಕ್ಕೆ ವಿರುದ್ಧವಾಗಿದ್ದೇವೆ. ಆದ್ದರಿಂದ ನಾವು ಅದರ ಯಾವದೇ ರೂಪದೊಂದಿಗೆ ಸಹ ಸಂಪರ್ಕವನ್ನಿಟ್ಟುಕೊಳ್ಳಲು ಬಯಸುವದಿಲ್ಲ. ನಾವು ವಿಶೇಷವಾಗಿ ಯಾವದೇ ವಿಧವಾದ ಸುಳ್ಳು ಬೋಧನೆ ಅಥವಾ ಪ್ರವಾದನೆಗೆ ವಿರುದ್ಧವಾಗಿದ್ದೇವೆ. ಸುಳ್ಳು ಬೋಧನೆಯನ್ನು ವಿರೋಧಿಸುವದು ಬಹುಶಃ ಈ ಪದಗುಚ್ಛದ ಅರ್ಥವಾಗಿರಬಹುದು.

Raymond C. Kelcy ಹೀಗೆ ಬರೆದನು, “ಕೆಟ್ಟತನವು ಯಾವ ರೂಪದಲ್ಲಿ ಕಾಣಿಸಿಕೊಂಡಾಗ್ಯೂ ಅದರಿಂದ ದೂರವಾಗಿರಬೇಕು ಎಂಬ ಆಜ್ಞೆಯನ್ನು ಪೌಲನು ಕೊಡುತ್ತಿರುವ ಸಾಧ್ಯತೆಯಿರುತ್ತದೆ; ಹೇಗೂ ಸನ್ನಿವೇಶವನ್ನು ಹೋಲಿಸಿ ನೋಡುವದಾದರೆ ಅದು ಎಲ್ಲಾ ವಿಧವಾದ ಸುಳ್ಳು ಪ್ರವಾದನೆಯಿಂದ ದೂರವಿರಬೇಕೆಂದಾಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ.”[56]

ಈ ನಕಾರಾತ್ಮಕ ಆಜ್ಞೆಗಳು ನಮಗೆ ಕೊಡಲ್ಪಟ್ಟಿರುವ ವಾಕ್ಯಕ್ಕೆ ನಾವು

ನಿಷ್ಠೆಯಿಂದಿರುವದಕ್ಕೆ ಸಹಾಯ ಮಾಡುವವು, ಮತ್ತು ಅವುಗಳು ನಮ್ಮನ್ನು ಕೆಟ್ಟತನದಿಂದ ಕಾಯುವವು. ಅವುಗಳು ಕ್ರಿಸ್ತನಿಗಾಗಿ ಜೀವಿಸುವವರಿಗೆ ಅಗತ್ಯವಾಗಿರುವಂಥ ದೊಡ್ಡ ಗುಣಗಳಾಗಿವೆ. EC

**ಸಂಪೂರ್ಣ ಹಾರೈಕೆ (5:23, 24)**

ಪೌಲನ ಮುಕ್ತಾಯದಲ್ಲಿ ತಿಳಿಸುವ ವಂದನೆಯಲ್ಲಿ, ಪೌಲನು ಥೆಸಲೋನಿಕದವರಿಗೋಸ್ಕರ ಮಾಡಿದ ಸುಂದರವಾದ ಒಂದು ಪ್ರಾರ್ಥನೆ/ಹಾರೈಕೆಯನ್ನು ನೋಡುತ್ತೇವೆ. ಇದು ಪ್ರತಿಯೊಬ್ಬ ಕ್ರೈಸ್ತನು ತನ್ನ ಸಹೋದರರು ಮತ್ತು ಸಹೋದರಿಯರಿಗೆ ಏನನ್ನು ಬಯಸುತ್ತಾನೆಂಬುದನ್ನು ವ್ಯಕ್ತಪಡಿಸುತ್ತದೆ.

*ಸಂಪೂರ್ಣ ಶುದ್ಧೀಕರಣ.* ಪ್ರತಿಯೊಬ್ಬನು ತನ್ನನ್ನು ದೇವರ ಸೇವೆಗೋಸ್ಕರ ಪ್ರತ್ಯೇಕಿಸಿಕೊಳ್ಳುವದನ್ನು ಬಯಸಬೇಕು. ಸುವಾರ್ತೆಗೆ ವಿಧೇಯನಾಗಿರುವ ಪ್ರತಿಯೊಬ್ಬನೂ ತಾನು ಕ್ರಿಸ್ತನವನಾಗಿ ಪರಿವರ್ತನೆಗೊಳ್ಳುವ ವೇಳೆ ಶುದ್ಧೀಕರಣವನ್ನು ಹೊಂದಿರುತ್ತಾನೆ. ಒಂದು ಅರ್ಥದಲ್ಲಿ ಶುದ್ಧೀಕರಣವು ದೊರಕಿಸಿಕೊಳ್ಳಬಲ್ಲದ್ದೂ ಸಾಧಿಸಿಕೊಳ್ಳಬಲ್ಲದ್ದೂ ಆಗಿದೆ. ಕೊರಿಂಥದವರು ಶುದ್ಧರಾದರು ಎಂದು ಪೌಲನು ಹೇಳುತ್ತಾನೆ (1 ಕೊರಿಂಥ 6:11), ಆದರೆ ಅವರ ಶುದ್ಧೀಕರಣವು ಪರಿವರ್ತನೆಯ ವೇಳೆ ಸಂಪೂರ್ಣವಾಗಿರಲಿಲ್ಲ. ಅವರು ಅದರಲ್ಲಿ ಬೆಳೆಯಬೇಕಿತ್ತು. ದಿನದಿಂದ ದಿನಕ್ಕೆ, ನಾವು ಹೆಚ್ಚೆಚ್ಚಾಗಿ ದೇವರ ಚಿತ್ತಕ್ಕೆ ಒಳಗಾಗುತ್ತಾ ಹೋದಂತೆ, ನಾವು ಹೆಚ್ಚೆಚ್ಚಾಗಿ ಪರಿಶುದ್ಧಗೊಳ್ಳುತ್ತೇವೆ. ಪ್ರತಿಯೊಬ್ಬ ಕ್ರೈಸ್ತನ ಗುರಿಯು ದೇವರ ಚಿತ್ತಕ್ಕಾಗಿ ಸಂಪೂರ್ಣ ಶುದ್ಧೀಕರಣಗೊಂಡವರಾಗುವದೇ ಆಗಿರಬೇಕು.

ಥೆಸಲೋನಿಕದವರು ಆತ್ಮ, ಪ್ರಾಣ, ಶರೀರಗಳಲ್ಲಿ ಸಂಪೂರ್ಣವಾಗಿ ಶುದ್ಧೀಕರಣಗೊಂಡವರಾಗಬೇಕು ಎಂಬುದು ಪೌಲನ ಬಯಕೆಯಾಗಿತ್ತು. ಆತ್ಮ ಮತ್ತು ಪ್ರಾಣದ ನಡುವಿನ ವ್ಯತ್ಯಾಸವೇನು? ಯಾವದೇ ವ್ಯತ್ಯಾಸವಿಲ್ಲ ಎಂಬದಾಗಿ David Lipscomb ಒತ್ತಿ ಹೇಳುತ್ತಾನೆ.[57]

*ನಂಬಿಕೆಯಲ್ಲಿ ಸಂಪೂರ್ಣ ಜೋಪಾನವಾಗಿರುವದು.* ಈ ಸಹೋದರರು ಯೇಸುವಿನ ಬರಣದ ತಕನ ಸ್ಥೈರಿಸಿಕೊಂಡು ನಿಲ್ಲಬೇಕೆಂದು ಪೌಲನು ಇಚ್ಛಿಸಿದನು. ಯಾವ ಸಂಗತಿಯೇ ಆಗಲಿ ಅವರ ನಂಬಿಕೆ ಅಥವಾ ಆತ್ಮೀಕತೆಯನ್ನು ಹಾಳು ಮಾಡುವದು ಆತನಿಗೆ ಇಷ್ಟವಿರಲಿಲ್ಲ.

*ಯೇಸು ಬರುವ ವೇಳೆ ಸಂಪೂರ್ಣ ನಿರ್ದೋಷರಾಗಿರುವದು.* ಈ ಸಹೋದರರ ವಿರುದ್ಧ ಯಾವದೇ ನ್ಯಾಯವಾದ ದೋಷಾರೋಪಗಳಿಲ್ಲದವರಾಗಿ ಅವರು ಯೇಸುವನ್ನು ಸಂಧಿಸಬೇಕೆಂಬುದು ಪೌಲನ ಬಯಕೆಯಾಗಿತ್ತು. ಅವರು ಪರಿಪೂರ್ಣರಾಗಿರುವದಕ್ಕೆ ಸಾಧ್ಯವಿರಲಿಲ್ಲ, ಆದರೆ ಅವರು "ನಿರ್ದೋಷತೆಯುಳ್ಳ ಜನರು" ಆಗಿ ಆತನನ್ನು ಸಂಧಿಸಬಲ್ಲವರಾಗಿದ್ದರು.

ಇದು ಸಹೋದರರಿಗಾಗಿರುವ ಸಂಪೂರ್ಣವಾದ ಪ್ರಾರ್ಥನೆ ಅಥವಾ ಹಾರೈಕೆಯಾಗಿರುತ್ತದೆ. ಇದು ಪೂರ್ಣ ಹಾಗೂ ಸುರಚಿತವಾದ-ಕೋಮಲ,

ಕಾರ್ಯರೂಪದ, ಆತ್ಮೀಕವಾದ, ಮತ್ತು ನಿತ್ಯವಾದ-ಪ್ರಾರ್ಥನೆಯಾಗಿತ್ತು. ಈ ಹಾರೈಕೆಯು ನೆನಸಾಗುವದಾದರೆ, ಇತರ ಯಾವದೇ ಪ್ರಾಮುಖ್ಯತೆಯುಳ್ಳ ಯಾವ ಕಾರ್ಯದ ಅಗತ್ಯವೂ ಇರುವದಿಲ್ಲ.

ಈ ಹಾರೈಕೆಯಲ್ಲಿ ದೇವತ್ವದ ಮತ್ತು ಮಾನವತ್ವದ ಸರಿಹೊಂದಿಸುವಿಕೆಯು ಸೇರಿರುತ್ತದೆ. ದೇವರು ತನ್ನ ಪಾತ್ರವನ್ನು ಮಾಡುವನೆಂದು ಪೌಲನಿಗೆ ಗೊತ್ತಿತ್ತು. ಥೆಸಲೋನಿಕದವರು ತಮ್ಮ ಪಾತ್ರವನ್ನು ಮಾಡುವದಾದರೆ, ಪೌಲನ ಹಾರೈಕೆಯು ನೆನಸಾಗಲಿತ್ತು. EC

## ದೇವರ ಮಿನುಗು ನೋಟ (5:24)

ಒಬ್ಬನು ಇತರ ಕ್ರೈಸ್ತರಿಗಾಗಿ ಮಾಡಬಹುದಾದ ಅತ್ಯಂಥ ದೊಡ್ಡದಾದ ಹಾರೈಕೆಯ ಜೊತೆಯಲ್ಲಿ ದೇವರ ಕುರಿತಾದ ಒಂದು ಹೇಳಿಕೆಯು ಸೇರಿರುತ್ತದೆ. ಅದು ಕೇವಲ ಒಂದು ಕ್ಲುಪ್ತವಾದ ವಾಕ್ಯವಾಗಿರುತ್ತದೆ, ಆದರೆ ದೇವರ ಶೋಭಾಯಮಾನವಾದ ಲಕ್ಷಣಗಳಲ್ಲೊಂದನ್ನು ನಮಗೆ ಜ್ಞಾಪಿಸುತ್ತದೆ.

ಜನರು "ತಾವು ಆರಾಧಿಸುವ ದೇವರಂತೆಯೇ ಆಗುವರು" ಎಂಬುದನ್ನು ನಾವು ಬಲ್ಲೆವು. ಈ ವಾಸ್ತವಾಂಶವು ನಮಗೆ ಈ ವಾಕ್ಯದ ಪದಗುಚ್ಛದ ಮೂಲಕ ಆತನನ್ನು ಅಧ್ಯಯನ ಮಾಡುವದಕ್ಕಾಗಿ ಒಂದು ಕಾರಣವನ್ನು ಒದಗಿಸುತ್ತದೆ: "ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು" (5:24). ಈ ಸತ್ಯವು ನಮ್ಮನ್ನು ದೇವರ ಸಾರೂಪ್ಯಕ್ಕೆ ಮತ್ತಷ್ಟು ಹತ್ತರಕ್ಕೆ ನಡಿಸಬಲ್ಲದು. ಈ ವಾಕ್ಯದಲ್ಲಿ ನಾವು ಏನನ್ನು ಕಾಣುತ್ತೇವೆ?

*ದೇವರ ಗುಣಸ್ವಭಾವವನ್ನು ದೃಷ್ಟಿಸುವದು.* ದೇವರಿಗಿರುವ ಎಲ್ಲಾ ಗುಣಗಳಲ್ಲಿ, ನಮ್ಮಂತಹ ಪಾಪಿಗಳಿಗೆ ಅತ್ಯಂಥ ಪ್ರೋತ್ಸಾಹವನ್ನು ಒದಗಿಸುವಂತದ್ದೆಂದರೆ ದೇವರು ಭರವಸೆಗೆ ಯೋಗ್ಯನೆಂಬುದನ್ನು ಗ್ರಹಿಸಿಕೊಳ್ಳುವದೇ ಆಗಿದೆ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ, ಅಲ್ಲದೆ ಆತನು ನಿಷ್ಠಾವಂತನು ಸಹ ಆಗಿದ್ದಾನೆ. ಏನೇ ಸಂಭವಿಸಿದರೂ ಸರಿಯೇ, ದೇವರು ತಾನು ಏನಾಗಿದ್ದಾನೋ ಅದರಲ್ಲಿ ಸ್ವಲ್ಪವೂ ಚಂಚಲಗೊಳ್ಳುವದಿಲ್ಲ. ನಮಗೆ ಅಥವಾ ನಮ್ಮ ಸುತ್ತಲು ಏಕೆ ಕೆಲವೊಂದು ಸಂಗತಿಗಳು ನಡೆಯುತ್ತವೆಂಬುದು ನಮಗೆ ತಿಳಿಯದಿರಬಹುದು, ಆದರೆ ದೇವರು ತನ್ನ ವಾಗ್ದಾನಗಳನ್ನು ಯಾವಾಗಲೂ ಕಾಪಾಡಿಕೊಳ್ಳುವನು ಎಂಬ ಕಂಠೋಕ್ತವಾದ ಹೇಳಿಕೆಯಲ್ಲಿ ನಮ್ಮ ನಂಬಿಕೆಯನ್ನಿಡಬಹುದು.

*ದೇವರ ಕ್ರಿಯೆಗಳ ಕುರಿತು ಯೋಚಿಸುವದು.* ಆಗಾಗ ಒಬ್ಬ ವ್ಯಕ್ತಿಯ ವಿಷಯದಲ್ಲಿ, "ಆತನು ಹೇಗೆ ನಡೆದುಕೊಳ್ಳುವನೆಂಬುದು ನಮಗೆ ತಿಳಿಯದು," ಅಥವಾ "ಅವನ ಬಗ್ಗೆ ನಾವು ಎಚ್ಚರದಿಂದಿರಬೇಕು, ಯಾಕೆಂದರೆ ಅವನು ಯಾವಾಗ ಹೇಗೆ ಪ್ರತಿಕ್ರಿಯಿಸುವನೋ ತಿಳಿಯುವದೇ ಇಲ್ಲ!" ಎಂದು ಹೇಳಲಾಗುತ್ತದೆ. ಎಂದಿಗೂ ಹೆದರದಿರಿ, ದೇವರು ಯಾವಾಗಲೂ ತನ್ನ ಗುಣಸ್ವಭಾವದೊಂದಿಗೆ ಸಾಮರಸ್ಯತೆಯುಳ್ಳವನಾಗಿಯೇ ನಡಕೊಳ್ಳುವನು. ಯಾವನೂ ಸಹ ದೇವರು ತಪ್ಪು ಮಾಡುವದನ್ನಾಗಲಿ ಅಥವಾ ಎರಡು

ಮುಖಗಳುಳ್ಳವನಾಗಿರುವದನ್ನು ಕಾಣಲಾರನು.

*ದೇವರ ಸ್ಥಿರತೆಯನ್ನು ನೆನಪಿನಲ್ಲಿಟ್ಟುಕೊಳ್ಳುವದು.* ನಿನ್ನೆಯ ದಿನ ದೇವರು ಹೇಗಿದ್ದನೋ, ಹಾಗೆಯೇ ನಾಳೆಯೂ ಇರುವನು. ದೇವರಲ್ಲಿ "ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ" ಎಂದು ಯಾಕೋಬನು ಹೇಳುತ್ತಾನೆ (ಯಾಕೋಬ 1:17). ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರು ಎಂದಿಗೂ ಮಾರ್ಪಡುವದಿಲ್ಲ.

ಖಂಡಿತವಾಗಿಯೂ ನಾವು ದೇವರ ಕುರಿತಾಗಿ ಎಲ್ಲವನ್ನೂ ತಿಳುಕೊಳ್ಳುವದಕ್ಕೆ ಆರಂಭಿಸುವದಕ್ಕಾಗುವದಿಲ್ಲ. ಆತನು ಎಷ್ಟೋ ವಿಸ್ತಾರವಾದವನು, ಎಷ್ಟೋ ಅನುಭವಾತೀತನು, ಎಷ್ಟೋ ಬಲಿಷ್ಠನು ಆಗಿದ್ದಾನೆ; ಆದಾಗ್ಯೂ ನಾವು ಆತನ ಕುರಿತು *ಕೆಲವೊಂದು* ಸತ್ಯಗಳನ್ನು ತಿಳಿದುಕೊಳ್ಳಬಲ್ಲೆವು. ನಾವು ಆತನ ಪ್ರಾಮಾಣಿಕತೆಯ ಮೇಲೆ ನಮ್ಮ ನಿತ್ಯವಾದ ನಿರೀಕ್ಷೆಯನ್ನಿಡಬಹುದಾಗಿದೆ. ಇದರ ಬಗ್ಗೆ ಯೋಚಿಸುವದು ನಮ್ಮನ್ನು ಆತನಿಗೆ ನಂಬಿಗಸ್ತರಾಗುಳಿಯುವಂತೆ ಮಾಡುತ್ತದೆ ಮತ್ತು ಆತನ ಮೇಲಿನ ನಮ್ಮ ಪ್ರೀತಿಯಲ್ಲಿ ಬೆಳೆಯುತ್ತಲೇ ಇರುವಂತೆ ಮಾಡುವದು. ಒಂದು ಬದಲಾಗುವ, ಅನಿಶ್ಚಿತತೆಯುಳ್ಳ ಲೋಕದಲ್ಲಿ, ತನ್ನಲ್ಲಿ ವಿಶ್ವಾಸಿಸುವವರಿಗೆ ದೇವರು ನಂಬಿಗಸ್ತನಾಗಿರುವದನ್ನು ಕಂಡುಕೊಳ್ಳುವದು ನಮ್ಮ ಹೃದಯಗಳಿಗೆ ನೆಮ್ಮದಿಯನ್ನು ಕೊಡುತ್ತದೆ. EC

**"ಸದಾ-ಸೂಕ್ತವಾದ" ಮನವಿಗಳು (5:25-27)**

ಒಬ್ಬನು ತನ್ನ ಸಹೋದರರಿಗೆ ವಿದಾಯ ನೀಡುವ ವೇಳೆ ಅವರಿಗೆ ಏನನ್ನು ಹೇಳುವನು? ಮೂರು ಮನವಿಗಳು ಯಾವಾಗಲೂ ಸೂಕ್ತವಾದವುಗಳಾಗಿವೆ.

*"ನಮಗೋಸ್ಕರ ಪ್ರಾರ್ಥನೆ ಮಾಡಿರಿ."* ಪೌಲನು ಥೆಸಲೋನಿಕದವರಿಗೆ ತಿಮೊಥೆಯ, ಸೀಲ ಮತ್ತು ತನಗೋಸ್ಕರ ಪ್ರಾರ್ಥನೆ ಮಾಡಬೇಕೆಂದು ಹೇಳಿದನು. ನೆನಪಿರಲಿ, ಪೌಲನು ದೇವರ ಪವಿತ್ರಾತ್ಮನಿಂದ ಪ್ರೇರಿತನಾದ ಒಬ್ಬ ಅಪೊಸ್ತಲನಾಗಿದ್ದನು, ಆದರೆ ತಂದೆಯ ಮುಂದೆ ತನ್ನ ಸಹೋದರರು ಅವನ ಹೆಸರನ್ನು ತೆಗೆದುಕೊಳ್ಳಬೇಕಾದ ಅಗತ್ಯವಿರುವದನ್ನು ಕಂಡನು. ಪೌಲನಿಗೆ ಪ್ರಾರ್ಥನೆಗಳ ಅಗತ್ಯವಿದ್ದದ್ದಾದರೆ, ನಮಗೂ ಅಗತ್ಯವಿರುತ್ತವೆ.

*"ಸಹೋದರರನ್ನು ವಂದಿಸಿರಿ."* ಪೌಲನು ಥೆಸಲೋನಿಕದಲ್ಲಿರುವ ಪ್ರತಿಯೊಬ್ಬ ಸಹೋದರರು ಹಾಗೂ ಸಹೋದರಿಯರಿಗೆ ವಂದನೆ ಹೇಳುವದಕ್ಕೆ ಬಯಸಿದನು. ಯಾರೊಬ್ಬರೂ ಕೈ ಬಿಡಲ್ಪಡುವದು ಆತನಿಗೆ ಇಷ್ಟವಿರಲಿಲ್ಲ. ವಂದನೆಯನ್ನು ಸಹೋದರನಿಂದ ಸಹೋದರನಿಗೆ ಹಸ್ತಾಂತರಿಸಲ್ಪಡುವದು. ಕ್ರಿಸ್ತನ ದೇಹದ ಪ್ರತಿಯೊಬ್ಬ ಸದಸ್ಯನು ಸಹ ಪ್ರಾಮುಖ್ಯನು ಎಂಬುದನ್ನು ಒತ್ತಿ ಹೇಳಲಾಗುತ್ತಿದೆ. ಪ್ರತಿಯೊಬ್ಬ ಕ್ರೈಸ್ತನು ಆತನ ಕುಟುಂಬದ ಭಾಗವಾಗಿದ್ದಾನೆ, ಮತ್ತು ತತ್ಪರಿಣಾಮವಾಗಿ, ಸ್ವಲ್ಪ ಗಮನವನ್ನು ಪಡೆದುಕೊಳ್ಳುವ ಅಗತ್ಯ ಹೊಂದಿರುತ್ತಾನೆ.

ವಂದಿಸುವ ಮುದ್ದು ಪವಿತ್ರವಾದದ್ದಾಗಿತ್ತು, ಹೊರತು ಕಾಮುಕತೆ ಅಥವಾ ಕಾಮಾಭಿಲಾಷೆಯಿಂದ ಕೂಡಿದ ಮುದ್ದಾಗಿರಲಿಲ್ಲ. ಅಲ್ಲಿ ಔಪಚಾರಿಕತೆ ಮತ್ತು ಕಪಟತನ ಇರಬಾರದಿತ್ತು, ಸಾಮಾಜಿಕ ಭಿನ್ನತೆಗಳಿಂದ ಉದ್ಭವವಾಗುವ ದುರಾಗ್ರಹ ಭಾವನೆಗಳಿಂದ,

ಬಡವರ ವಿರುದ್ಧದ ಪಕ್ಷಪಾತ, ಶ್ರೀಮಂತರೆಡೆಗೆ ಒಲವು ಇತ್ಯಾದಿಗಳಿಂದ ಅದು ಮುಕ್ತವಾಗಿರಬೇಕಿತ್ತು. ಆ ಸಂಸ್ಕೃತಿಯಲ್ಲಿ, ಮುದ್ದಿಡುವದು ಸಮಲಿಂಗದ ವ್ಯಕ್ತಿಗಳ ನಡುವೆ ಸಂಭವಿಸುತ್ತಿತ್ತು.[58]

*"ಬೈಬಲ್ ಓದಿರಿ."* ಪೌಲನು ತನ್ನ ಪತ್ರಿಕೆಯು ಎಲ್ಲರಿಗೂ ಓದಿ ಹೇಳಲ್ಪಡಬೇಕೆಂದು ಬಯಸಿದನು. ಬಹುಶಃ ಅದು ಸಾರ್ವಜನಿಕವಾಗಿ ಓದಲ್ಪಟ್ಟು ಇಡೀ ಸಭೆಗೆ ಪ್ರಯೋಜನ ಆಗುವಂತಾಗಬೇಕೆಂಬುದು ಆತನ ಬಯಕೆಯಾಗಿದ್ದಿರಬಹುದು.

ಪೌಲನು ಓದಬೇಕೆಂದು ಹೇಳಿದ ಪತ್ರಿಕೆಯು ದೇವರ ವಾಕ್ಯವಾಗಿತ್ತು, ಯಾಕೆಂದರೆ ಅದನ್ನು ಬರೆಯುವಂತೆ ಆತನು ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟಿದ್ದನು. ಸಹೋದರರಿಗೆ ಅವರ ಮುಂದೆ ದೇವರ ವಾಕ್ಯವು ಇರಬೇಕಾದ ಅಗತ್ಯವಿತ್ತು.

ನಮ್ಮ ವಿಷಯದಲ್ಲಾದರೋ, ಈ ಮನವಿಯನ್ನು ಅನ್ವಯ ಮಾಡಿಕೊಳ್ಳುವದಾದರೆ, "ಗ್ರಂಥವನ್ನು ಓದಿರಿ!" ಎಂಬ ಬುದ್ಧಿವಾದ ಆಗುವದು. ದೇವರ ವಾಕ್ಯವನ್ನು ಓದಿರಿ ಮತ್ತು ಧ್ಯಾನಿಸಿರಿ ಎಂದು ಒಬ್ಬರನ್ನೊಬ್ಬರು ಜ್ಞಾಪಿಸುವದು ನಮಗೆ ಎಷ್ಟು ಸಮರ್ಪಕವಾಗಿರುತ್ತದೆ!

ಪೌಲನು ತನ್ನ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಿರುವ ಹಾಗೆ ಏನನ್ನು ಹೇಳಿದನು? ಆತನು, "ನಮಗೋಸ್ಕರ ಪ್ರಾರ್ಥನೆ ಮಾಡಿರಿ. ಸಹೋದರರಿಗೆ ವಂದಿಸಿರಿ. ಪತ್ರಿಕೆಯನ್ನು ಓದಿರಿ." ಇದಕ್ಕಿಂಥ ಹೆಚ್ಚಿನ ಸೂಕ್ತವಾದ ಮನವಿಗಳನ್ನು ನಾವು ಇನ್ನಾವವುಗಳನ್ನು ಹೊಂದಿರುವದಕ್ಕೆ ಸಾಧ್ಯ? EC

**ಒಂದು ವಿದಾಯದ ಪ್ರಾರ್ಥನೆ (5:28)**

ಪೌಲನು ಥೆಸಲೋನಿಕದವರಿಗೆ ಬರೆದ ಮೊದಲ ಪತ್ರಿಕೆಯ ಕಡೇ ಸಾಲು ಒಂದು ಸರಳವಾದ ವಾಕ್ಯವೆಂದರೆ ಒಂದು ಚಿಕ್ಕ ಪ್ರಾರ್ಥನೆ ಅಥವಾ ಹಾರೈಕೆ; ಅದು ಆತನ "ಬೀಳ್ಕೊಡುಗೆಯ" ರೀತಿಯಾಗಿತ್ತು.

ಕೆಲವೇ ಕೆಲವು ಮಾತುಗಳಲ್ಲಿ ಒಂದು ದೊಡ್ಡ ಹಾರೈಕೆಯನ್ನು ಮಾಡಬಹುದಾಗಿದೆ. ಒಬ್ಬನು ಬಹಳಷ್ಟನ್ನು ಹೇಳುವದಕ್ಕೆ ದೀರ್ಘವಾದ ಸಮಯವನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ಒಂದೇ ವಾಕ್ಯದಿಂದ ಒಂದು ಆತ್ಮವನ್ನು ಮರಣದಿಂದ ಜೀವಕ್ಕೆ ಎಬ್ಬಿಸಲ್ಪಡಬಲ್ಲದು. ಶಾಶ್ವತವಾದ ಸುವಾರ್ತೆಯನ್ನು ಆರು ನುಡಿಗಳಲ್ಲಿ ಹೇಳಬಹುದಾಗಿದೆ: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ." ಇದು ಯಾವ ವಿಧವಾದ ಹಾರೈಕೆಯಾಗಿದೆ?

*ಕೃಪೆಗಾಗಿರುವ ಒಂದು ಹಾರೈಕೆ.* ಅವರು ಅರ್ಹತೆಯಿಲ್ಲದೆ ಸಿಕ್ಕುವ ಕೃಪಾಕಟಾಕ್ಷವನ್ನು ಹೊಂದಬೇಕೆಂದು ಆತನು ಹಂಬಲಿಸಿದನು. ಅವರು ನಿಜಕ್ಕೂ ಯೋಗ್ಯರಾಗಿರದಂಥ ದಯೆಯು ಅವರಿಗೆ ಸಿಕ್ಕಬೇಕೆಂದು ಆತನು ಅಪೇಕ್ಷಿಸಿದನು. ಆತನ ಹಾರೈಕೆಯ ಈ ಭಾಗದಲ್ಲಿ ನಿಜವಾದ ಪ್ರೀತಿಯನ್ನು ನಾವು ಕಾಣುತ್ತೇವೆ. ಆತ್ಮೀಕ ಪ್ರೀತಿಯು ಇತರರಿಗೆ ಅವರು ಸಂಪಾದಿಸಿಕೊಳ್ಳದ್ದನ್ನು ಹಾರೈಸುತ್ತದೆ. ನಾವು ಬೇರೆಯವರಿಗಾಗಿ ಅಂತಹ ಹಾರೈಕೆಯನ್ನು ಮಾಡಬಲ್ಲೆವೋ?

*ಒಂದು ಆತ್ಮೀಕ ಹಾರೈಕೆ.* ನಾವು ಬೇರೆಯವರಿಗೆ ತೋರಬಹುದಾದ ಕೃಪೆಯು

ಪರಿಪೂರ್ಣತೆಯಿಲ್ಲದ್ದು ಮತ್ತು ಅಸಂಪೂರ್ಣವಾದದ್ದು, ಆದರೆ ಕ್ರಿಸ್ತನು ಕೊಡುವಂತ ಕೃಪೆಯು ಪರಿಪೂರ್ಣ, ಸಂಪೂರ್ಣ, ಮತ್ತು ಸರ್ವೋತ್ಕ್ರಷ್ಟವಾದದ್ದು. ಪೌಲನು ಅವರಿಗೆ ಅತ್ಯುನ್ನತವಾದ ಕೃಪೆಯನ್ನು, ದೇವಕುಮಾರನ ಕೃಪೆಯನ್ನು ಹಾರೈಸಿದನು.

*ನಿತ್ಯತ್ವದಿಂದ ಸುತ್ತಲ್ಪಟ್ಟ ಒಂದು ಹಾರೈಕೆ.* ಅವ*ರೊಂದಿಗೆ* ಕ್ರಿಸ್ತನ ಅರ್ಹತೆಯಿಲ್ಲದೆ ಸಿಕ್ಕುವ ಕೃಪೆಯು ಇರಬೇಕೆಂದು ಪೌಲನು ಕೋರಿದನು. ಅದು ಅವರ ಜೀವಿತಗಳಲ್ಲಿ ನಿರಂತರವಾಗಿ ನೆಲೆಸಲಿ ಎಂಬುದು ಆತನ ಪ್ರಾರ್ಥನೆಯಾಗಿತ್ತು. ನಾನು ರಕ್ಷಣೆ ಹೊಂದುವ ಅಗತ್ಯವಿದೆ, ಮತ್ತು ನಾನು ರಕ್ಷಿಸಲ್ಪಟ್ಟವನಾಗಿ ಕಾಪಾಡಲ್ಪಡುವ ಅಗತ್ಯವಿರುತ್ತದೆ. ನಾನೊಬ್ಬ ಕ್ರೈಸ್ತನಾದಾಗ ದೇವರ ಕೃಪೆಯನ್ನು ಪಡೆದುಕೊಂಡೆನು, ಮತ್ತು ನಾನು ಕ್ರೈಸ್ತೀಯ ಜೀವಿತವನ್ನ ಜೀವಿಸುತ್ತಿರುವ ಹಾಗೆ ನಾನು ಆ ಕೃಪೆಯಲಲ್ಇ ನಿಲ್ಲುತ್ತೇನೆ ಅಥವಾ ಜೀವಿಸುತ್ತೇನೆ. ನನ್ನನ್ನು ದೀರ್ಘಕಾಲದ ತನಕ ಬದುಕುಳಿಯುವಂತೆ ಮಾಡುವ ಏಕೈಕ ಕಾರ್ಯವೆಂದರೆ ದೇವರ ಕೃಪೆಯಲ್ಲಿ ಅನುದಿನವೂ ಇರುವದೇ.

ಇದೊಂದು ಮೂರು ಭಾಗಗಳುಳ್ಳ ಹಾರೈಕೆಯಾಗಿದೆ: ಕೃಪೆ, ಕ್ರಿಸ್ತನ ಕೃಪೆ, ಸದಾಕಾಲವೂ ಕ್ರಿಸ್ತನ ಕೃಪೆ! ಈ ಹಾರೈಕೆಯನ್ನು ಮಾಡಬೇಕೆಂದರೆ ಒಬ್ಬ ಕ್ರೈಸ್ತನಿರಬೇಕಾಗುತ್ತದೆ, ಮತ್ತು ಈ ಹಾರೈಕೆಯನ್ನು ಪಡೆದುಕೊಂಡು ಅದರಂತೆ ನಡೆಯುವವ ಯಾವನನ್ನೇ ಆಗಲಿ ಇದು ಒಬ್ಬ ಕ್ರೈಸ್ತನನ್ನಾಗಿಸುತ್ತದೆ. EC

### ಒಬ್ಬ ಅಪೊಸ್ತಲನ ಪತ್ರಿಕೆಯ ಮುಕ್ತಾಯ (5:23-28)

ಪೌಲನು ಸುಮಾರು ಕ್ರಿ.ಶ. 51ರಲ್ಲಿ ಥೆಸಲೋನಿಕದವರಿಗೆ ಈ ಪತ್ರಿಕೆಯನ್ನು ಬರೆದನು. ಆತನು ಅವರನ್ನು ಪ್ರೋತ್ಸಾಹಿಸುವದಕ್ಕಾಗಿ ಮತ್ತು ಕ್ರಿಸ್ತನ ಹಾಗೂ ಆತನ ಪುನರಾಗಮನದ ಕುರಿತಾಗಿ ಅರ್ಥಮಾಡಿಕೊಳ್ಳುವಂತೆ ಸಹಾಯವನ್ನು ಮಾಡುವದಕ್ಕಾಗಿ ಈ ಪತ್ರಿಕೆಯನ್ನು ಬರೆದನು. ಈಗ, ಈ ಕೊನೆಯ ಕೆಲವು ವಚನಗಳಲ್ಲಿ, ಆತನು ಥೆಸಲೋನಿಕದವರಿಗೆ ಬರೆಯುವ ತನ್ನ ಸಂದೇಶವನ್ನು ಅಂತ್ಯಗೊಳಿಸುತ್ತಾನೆ. 5:22ರಲ್ಲಿ, ಪೌಲನು ಸಭೆಗೆ "ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ" ಎಂದು ಬೇಡಿಕೊಂಡನು. 23 ರಿಂದ 28 ವಚನಗಳಲ್ಲಿ, ಅವರು ಕೆಟ್ಟತನದಿಂದ ದೂರವಾಗಿದ್ದು ಒಳ್ಳೇದನ್ನು ಮಾಡುವದಕ್ಕೆ ದೇವರೇ ಅವರಿಗೆ ಶಕ್ತಿಯ ಮೂಲ ಎಂಬುದನ್ನು ಪೌಲನು ಅವರಿಗೆ ನೆನಪಿಸುತ್ತಾನೆ.

*ಆತನು ತನ್ನ ಮೂಲಕ ಪರಿವರ್ತನೆಗೊಂಡವರಿಗಾಗಿ ಪ್ರಾರ್ಥಿಸುತ್ತಾನೆ* (ವಚನಗಳು 23, 24). ಆತನ ಮುಕ್ತಾಯದ ಮೊದಲ ಭಾಗದಲ್ಲಿ, ಪೌಲನು ಹೀಗೆ ಬರೆದನು, "ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ" (ವ. 23a). "ಪವಿತ್ರಮಾಡಲಿ" ಎಂದರೆ "ಆತ್ಮವನ್ನು ಆಂತರ್ಯದಲ್ಲಿ ಅಮೂಲಾಗ್ರವಾಗಿ ಉತ್ತಮಗೊಳಿಸುವ ಮೂಲಕ ಶುದ್ಧಗೊಳಿಸುವದು" ಎಂದರ್ಥವಾಗಿದೆ.[59]

ಕ್ರೈಸ್ತರು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾದ ಆಂತರ್ಯದಲ್ಲಿ ಶುದ್ಧೀಕರಣಗೊಳಿಸಲ್ಪಡುತ್ತಾರೆ (1 ಕೊರಿಂಥ 6:11). ಪರಿವರ್ತನೆಗೊಂಡ ಬಳಿಕ, ಅವರು ಪರಿಪಕ್ವಗೊಂಡ ಹಾಗೆ ತಮ್ಮ ಶುದ್ಧೀಕರಣದಲ್ಲಿ ಬೆಳೆಯುವದನ್ನು ಮುಂದುವರೆಸಬೇಕು (ನಿರಂತರವಾದ ಉತ್ತಮಗೊಳಿಸಲ್ಪಡುವಿಕೆ; ನೋಡಿರಿ 2 ಕೊರಿಂಥ 3:18; 1 ಥೆಸಲೋನಿಕ

4:3). ವಾಸ್ತವಿಕದಲ್ಲಿ, ಸಭೆಯು “ಪರಿಪೂರ್ಣವಾಗಿ” ಪವಿತ್ರಮಾಡಲ್ಪಡಬೇಕೆಂದು ಬಯಸಿದನು. ಅಂದರೆ, ಆತ್ಮೀಕವಾಗಿ, ನಾವು ದೇವರ ಆತ್ಮೀಕ ಸೇವೆಗೋಸ್ಕರ ಪ್ರತ್ಯೇಕಿಸಲ್ಪಟ್ಟವರಾಗಿರುವ ಹಾಗೆ ಪಾಪದಿಂದ ದೂರವಾಗಿದ್ದು ನಿರ್ಮಲರಾಗಿರಬೇಕೆಂದು ಆತನು ಅವರ ವಿಷಯದಲ್ಲಿ ಬಯಸಿದ್ದನು ಮತ್ತು ನಮ್ಮ ವಿಷಯದಲ್ಲಿ ಸಹ ಬಯಸುತ್ತಾನೆ. ನಾವು ನಮ್ಮನ್ನು ಕೇಳಿಕೊಳ್ಳಬೇಕು, “ನಮ್ಮ ಜೀವಿತಗಳಲ್ಲಿ ನಾವು ಯಾವ ಆತ್ಮೀಕ ಉದ್ದೇಶದ ಸೇವೆ ಮಾಡುತ್ತಿದ್ದೇವೆ?”

ಅಲ್ಲದೆ ದೇವರು ಈ ಸಹೋದರರನ್ನು “ಕಾಪಾಡಲಿ” ಎಂದು ಸಹ ಪ್ರಾರ್ಥಿಸಿದನು (ವ. 23b). ಅಂದರೆ, ಅವರು ಕ್ರಿಸ್ತನಲ್ಲಿರುವ ತಮ್ಮ ನಂಬಿಕೆಯನ್ನು ಭದ್ರವಾಗಿ ಹಿಡಿದುಕೊಂಡಿರಬೇಕೆಂದು ಪೌಲನು ಬಯಸಿದನು. ವಾಸ್ತವಾಂಶದಲ್ಲಿ, ದೇವರು ಅವರ “ಆತ್ಮ,” “ಪ್ರಾಣ,” ಮತ್ತು “ಶರೀರ”ಗಳನ್ನು ಕಾಪಾಡಬೇಕೆಂದು ಆತನು ಬಯಸಿದನು.

ಜನರು ಮೂರ ಭಾಗಗಳಿಂದ ರಚಿಸಲ್ಪಟ್ಟಿದ್ದಾರೆಂಬದಾಗಿ ಗ್ರೀಕ್ ರು ನಂಬಿದ್ದರು: ಆತ್ಮ, ಪ್ರಾಣ, ಮತ್ತು ಶರೀರ. ಪ್ರಾಣವು ಆತ್ಮಕ್ಕಿಂತಲೂ ಕೆಳಮಟ್ಟದ ಪ್ರಾಣಿ ಸ್ವಭಾವವಾಗಿರುತ್ತದೆಂದು ವ್ಯತ್ಯಾಸ ಮಾಡಿದ್ದರು, ಅವರು ಅದನ್ನು ಒಬ್ಬ ವ್ಯಕ್ತಿಯ ನಿರ್ಲಯವಾದ ಭಾಗವೆಂದು ಪರಿಗಣಿಸಿದ್ದರು. ಪೌಲನಿಗೆ ಈ ತತ್ವದ ಬಗ್ಗೆ ತಿಳಿದಿರುವ ಸಾಧ್ಯತೆಯಿದೆಯಾದರೂ, ಆತನು ಈ ವಚನದಲ್ಲಿ ಅದನ್ನು ಸೂಚಿಸ ಹೇಳುತ್ತಿಲ್ಲ. ಪೌಲನ ಮಟ್ಟಿಗಾದರೋ, ಆತ್ಮ ಮತ್ತು ಪ್ರಾಣ ಸಮಾನಾರ್ಥಕವಾದವುಗಳಾಗಿದ್ದು ಅವೆರಡೂ “ಮನುಷ್ಯನ ಆಂತರ್ಯ”ವನ್ನು ಬಣ್ಣಿಸುವಂತವುಗಳಾಗಿದ್ದವು (2 ಕೊರಿಂಥ 4:16). ಆತನು ಬಹುಶಃ ಕ್ರೈಸ್ತನು ಪರಿಪೂರ್ಣತೆಯಲ್ಲಿ ಸಂರಕ್ಷಿಸಲ್ಪಡಬೇಕು ಅಥವಾ ಕ್ರಿಸ್ತನೊಂದಿಗಿನ ಒಂದು ಸಂಬಂಧದೊಳಗೆ ಕಾಪಾಡಲ್ಪಡಬೇಕೆಂದು ಬಯಸುತ್ತಾನೆಂಬುದನ್ನು ಬಣ್ಣಿಸುವದಕ್ಕೆ ಆತನು ಎಲ್ಲರಿಗೂ ಪರಿಚಿತವಾಗಿದ್ದ ಪದಗಳನ್ನು ಬಳಸುತ್ತಿದ್ದಾನೆಂದು ತೋರುತ್ತದೆ.

ಕ್ರೈಸ್ತರು “ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ . . . ದೋಷಿಲ್ಲದೆ ಸಂಪೂರ್ಣವಾಗಿ” ಕಾಣಿಸಲ್ಪಡಬೇಕೆಂಬುದಾಗಿ ಪೌಲನು ಪ್ರಾರ್ಥಿಸಿದನು (ವ. 23c). ಖಂಡಿತವಾಗಿಯೂ ಸೈತಾನನು ಯಾವಾಗಲೂ ದೋಷಾರೋಪಗಳನ್ನು ಮಾಡುತ್ತಾನೆ, ಆದರೆ ಕ್ರೈಸ್ತರು ದೇವರಿಂದ ದೋಷಮುಕ್ತರಗೊಳಿಸಲ್ಪಟ್ಟು ನೀತಿವಂತರೆಂದು ನಿರ್ಣಯಿಸಲ್ಪಡುವರು. ದೋಷಮುಕ್ತರೆಂಬ ಘೋಷಣೆಯು ಕ್ರಿಸ್ತನ ಎರಡನೆಯ ಬರೋಣದ ವೇಳೆ ಸಂಭವಿಸುವದು. ಪೌಲನು ಈ ಬರೋಣದ ಕುರಿತಾಗಿ ಸುದೀರ್ಘವಾಗಿ ಮಾತಾಡಿದನು (4:13-5:11). ಆತನು ಈಗಲೂ ಅದನ್ನು ತನ್ನ ಮನೋನೇತ್ರಗಳಲ್ಲಿ ಹೊಂದಿರುತ್ತಾನೆ (ಯೋಹಾನ 5:28, 29; ಮತ್ತಾಯ 25:31-33 ರೊಂದಿಗೆ ಹೋಲಿಸಿರಿ). ಕ್ರಿಸ್ತನು ಹಿಂದಿರುಗಿ ಬರುವಾಗ, ನಂಬಿಗಸ್ತರು ಅಂಗೀಕರಿಸಿಕೊಳ್ಳಲ್ಪಡುವರು ಮತ್ತು ಬಂಡಾಯಗಾರರು ತಿರಸ್ಕರಿಸಲ್ಪಡುವರು. ಥೆಸಲೋನಿಕದವರು ಆ ಸಂದರ್ಭದಲ್ಲಿ ನಿರ್ದೋಷಿಗಳು ಮತ್ತು ಅಂಗೀಕರಿಸಲ್ಪಡುವವರು ಆಗಬೇಕೆಂದು ಪೌಲನು ಪ್ರಾರ್ಥಿಸಿದನು.

24ನೇ ವಚನದಲ್ಲಿ, ದೇವರು ಅವರ ನಿರ್ದೋಷಿಗಳಾಗಿರುವಿಕೆಯ “ಕಾರ್ಯವನ್ನು ಸಾಧಿಸುವನು” ಎಂಬದಾಗಿ ಪೌಲನು ಪ್ರಾರ್ಥಿಸುತ್ತಾನೆ. ಇಲ್ಲಿ, ಆತನು ದೇವರನ್ನು “ಶಾಂತಿದಾಯಕನಾದ ದೇವರು” ಎಂದು ಬಣ್ಣಿಸಿದನು (ವ. 23). ದೇವರು ಆಗಾಗ್ಗೆ ಆತನನ್ನು

"ಶಾಂತಿದಾಯಕನಾದ ದೇವರು" ಎಂದು ಕರೆದನು (ನೋಡಿರಿ ರೋಮಾ 15:33; 2 ಕೊರಿಂಥ 13:11). ದೇವರು "ಶಾಂತಿದಾಯಕನಾದ ದೇವರು" ಆಗಿದ್ದು ಅದರಲ್ಲಿ ಆತನು ಒಂದು ಸಮಾಧಾನಕರ ಮನೋಭಾವವುಳ್ಳವನೆಂದು ತೋರ್ಪಡಿಸಲ್ಪಟ್ಟಿದ್ದಾನೆ. ಮನುಷ್ಯರು ಆತನ ವಿರುದ್ಧವಾಗಿ ಬಂಡಾಯವೆದ್ದವರಾಗಿರುವ ವೇಳೆ, ಆತನು ಸಮಾಧಾನ ಯಜ್ಞವವನ್ನು, ತನ್ನ ಕುಮಾರನಾದ ಯೇಸುವನ್ನು ಕಳುಹಿಸಿ ಕೊಟ್ಟನು (ನೋಡಿರಿ ರೋಮಾ 5:8). ಆತನು ಮನುಷ್ಯರನ್ನು ತನಗೆ ಸಂಧಾನಪಡಿಸಿಕೊಳ್ಳುವದಕ್ಕಾಗಿ ತನ್ನ ಮಗನನ್ನು ಕಳುಹಿಸಿದನು (2 ಕೊರಿಂಥ 5:19). ಖಂಡಿತವಾಗಿಯೂ, ಆತನು ಒಬ್ಬ "ಶಾಂತಿ ದಾಯಕನಾದ ದೇವರು," ಆತನು ಸೇತುವೆಗಳನ್ನು ಕಟ್ಟುವವನು.

"ಕಾರ್ಯವನ್ನು ಸಾಧಿಸುವನು" ಎಂಬುದು ದೇವರು "ನಂಬಿಗಸ್ತನು" ಆಗಿರುವದರಿಂದ ಥೆಸಲೋನಿಕದವರೊಂದಿಗಿನ ತನ್ನ ಸಂಬಂಧದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವನು ಎಂಬ ವಾಸ್ತವಾಂಶದಲ್ಲಿ ನಂಬಿಕೆಯ ಒಂದ ವ್ಯಕ್ತಪಡಿಸುವಿಕೆ ಆಗಿರುತ್ತದೆ (ವ. 24). ದೇವರು ಯಾವಾಗಲೂ ತನ್ನ ವಾಗ್ದಾನವನ್ನು ಕಾಪಾಡಿಕೊಳ್ಳುತ್ತಾನೆ. ಆತನು ತನ್ನ ಮಕ್ಕಳು ಶುದ್ಧೀಕರಣ ಹೊಂದಿಕೊಳ್ಳುವದನ್ನು ಖಾತ್ರಿ ಪಡಿಸಿಕೊಳ್ಳಲು ಮತ್ತು ಕ್ರಿಸ್ತನು ಬರುವ ತನಕ ಅವರನ್ನು ನಿರ್ದೋಷಿಗಳನ್ನಾಗಿ ಕಾಪಾಡುವದಕ್ಕೆ ತಾನು ಮಾಡಬೇಕಾದದ್ದನ್ನು ಮಾಡುವನು.

ಇನ್ನೊಂದೆಡೆಯಲ್ಲಿ, ಕ್ರೈಸ್ತರು ತಾವು ಮಾಡಬೇಕಾಗಿರುವದನ್ನು ಮಾಡತಕ್ಕದ್ದು. ನಾವು ಯೂದನು ಹೇಳುವ ರೀತಿಯಲ್ಲಿ "ದೇವರ ಪ್ರೀತಿಯಲ್ಲಿ [ನಮ್ಮನ್ನು] ಕಾಪಾಡಿಕೊಳ್ಳಬೇಕು" (ವ. 21). ನಾವು ಆತನಿಗೆ ವಿಧೇಯರಾಗತಕ್ಕದ್ದು (ಯೋಹಾನ 14:23). ನಾವು ಹಾಗೆ ಮಾಡಿದರೆ, ಅಂತಿಮ ದಿನದಲ್ಲಿ ದೇವರು ನಮ್ಮ ಶುದ್ಧೀಕರಣವನ್ನು "ಸಾಧಿಸುವನು."

28ನೇ ವಚನದಲ್ಲಿ, ಪೌಲನು ಹೀಗೆ ಪ್ರಾರ್ಥಿಸಿದನು, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ." ಆತನು ಸಾಮಾನ್ಯವಾಗಿ ಈ ವಿಧವಾಗಿ ಪ್ರಾರ್ಥಿಸುವ ಮೂಲಕವಾಗಿ ತನ್ನ ಪತ್ರಿಕೆಗಳನ್ನು ಮುಕ್ತಾಯಗೊಳಿಸುತ್ತಿದ್ದನು (ನೋಡಿರಿ 2 ಕೊರಿಂಥ 13:14). "ಕೃಪೆ" ಎಂಬುದಕ್ಕಿರುವ ಗ್ರೀಕ್ ಪದವು *χάρις* (*charis*), ಮತ್ತು ಇದರ ಅರ್ಥವು ಯಾರೋ ಒಬ್ಬರ ಕೃಪಾಕಟಾಕ್ಷ ಎಂದಾಗಿರುತ್ತದೆ.[60] ಥೆಸಲೋನಿಕದ ಸಹೋದರರು ಕ್ರಿಸ್ತನ ಕೃಪೆಯನ್ನು ಹೊಂದಿದವರಾಗಿ ಆತನೊಂದಿಗೆ ಉತ್ತಮ ಸಂಬಂಧವುಳ್ಳವರಾಗಿರುವಂತೆ ಆತನು ಪ್ರಾರ್ಥಿಸಿದನು.

ಪೌಲನು ಥೆಸಲೋನಿಕದಲ್ಲಿನ ಸಭೆಯ ಶುದ್ಧೀಕರಣ ಮತ್ತು ಸಂರಕ್ಷಣೆಗಾಗಿ ಪ್ರಾರ್ಥಿಸಿದ ರೀತಿಯಲ್ಲಿಯೇ, ನಾವು ಸಹ ಸಭೆಯ ಸ್ಥಿತಿಯ ಕುರಿತು ಪ್ರಾರ್ಥಿಸುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದು. ನಂಬಿಗಸ್ತರಾಗಿರುವದಕ್ಕೆ ನಾವು ನಮ್ಮ ಪಾತ್ರವನ್ನು ಮಾಡುವದಾದರೆ, ದೇವರು ತನ್ನ ಪಾತ್ರವನ್ನು ಮಾಡುವನು. ಆ ವಿಧದಲ್ಲಿ, ಆ ನ್ಯಾಯತೀರ್ಪಿನ ಮಹಾ ದಿನದಂದು ಆತನ ಸಿಂಹಾಸನದ ಮುಂದೆ ಸಭೆಯು "ನಿರ್ದೋಷವಾಗಿ" ನಿಲ್ಲುವದು.

*ಆತನು ತನಗಾಗಿ ಪ್ರಾರ್ಥನೆ ಮಾಡಬೇಕೆಂದು ಸಹೋದರರನ್ನು ಕೇಳಿಕೊಂಡನು* (ವ. 25). ಪೌಲನು ಪ್ರಾರ್ಥನೆಯಲ್ಲಿ ನಂಬಿಕೆ ಹೊಂದಿದ್ದನು. ಆತನು ಅನೇಕ ಸಾರಿ

ತನಗೋಸ್ಕರ ಪ್ರಾರ್ಥಿಸುವಂತೆ ಬೇರೆಯವರನ್ನು ಕೇಳಿಕೊಳ್ಳುತ್ತಿದ್ದನು (ನೋಡಿರಿ 2 ಥೇಸಲೋನಿಕ 3:1; ಕೊಲೊಸ್ಸೆ 4:3; ಎಫೆಸ 6:18; ರೋಮಾ 15:30). "ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಲವಾಗಿದೆ" ಎಂದು ಯಾಕೋಬನು ಹೇಳುತ್ತಾನೆ. ಹೀಗೆ Elijah M. Hickok ಬರೆಯುತ್ತಾನೆ,

> ಯಾವ ವಿಧಾನದಿಂದ ಎಂಬುದು ನನಗೆ ತಿಳಿದಿರುವದು ವಿರಳ,
> ಆದರೆ ದೇವರು ಪ್ರಾರ್ಥನೆಗೆ ಉತ್ತರಿಸುವನೆಂದು ಬಲ್ಲೆನು
> ಆತನು ತನ್ನ ವಾಕ್ಯವನ್ನು ಕೊಟ್ಟಿದ್ದಾನೆಂದು ಬಲ್ಲೆನು
> ಅದು ಪ್ರಾರ್ಥನೆಯು ಯಾವಾಗಲೂ ಆಲಿಸಲ್ಪಡುತ್ತದೆಂದು ಹೇಳುತ್ತದೆ.
> ಅದು ಬೇಗನೆ ಅಥವಾ ತಡವಾಗಿ ಉತ್ತರಿಸಲ್ಪಡುವದು
> ಮತ್ತು ಆದ್ದರಿಂದ ನಾನು ಪ್ರಾರ್ಥಿಸುವೆನು ಮತ್ತು ಶಾಂತತೆಯಿಂದ ಕಾಯುವೆನು.[61]

ಇಂದು ನಾಯಕರು ತಮಗಾಗಿ ಪ್ರಾರ್ಥನೆಗಳನ್ನು ಮಾಡುವಂತೆ ಕೇಳಿಕೊಳ್ಳುವರು. ಕೆಲವು ಸಾರಿ ದೇಶದ ಮುಖ್ಯಸ್ಥರು ಸಹ ತಮಗೋಸ್ಕರ ಪ್ರಾರ್ಥನೆ ಮಾಡುವಂತೆ ತಮ್ಮ ದೇಶಗಳ ಪ್ರಜೆಗಳನ್ನು ಕೇಳಿಕೊಳ್ಳುವರು. ನಾವು ಅದಕ್ಕೆ ಸಮ್ಮತಿಯನ್ನು ಸೂಚಿಸಬೇಕು ಎಂದು ಹೇಳುತ್ತಾನೆ: "ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಪ್ರಬೋಧಿಸುತ್ತೇನೆ. . . . ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು" (1 ತಿಮೊಥೆ 2:1, 2). ಹಿರಿಯರು ತಮಗಾಗಿ ಪ್ರಾರ್ಥಿಸುವಂತೆ ಸಭೆಯನ್ನು ಕೇಳಿಕೊಳ್ಳುವರು. ಅಂಥ ಜನರು ದೇವರ ಸಹಾಯವು ತಮಗೆ ಅಗತ್ಯವಿದೆಯೆಂಬುದನ್ನು ಒಪ್ಪಿಕೊಳ್ಳುವಾಗ, ನಾವು ಅವರಿಗೋಸ್ಕರ ಪ್ರಾರ್ಥಿಸುವಂತೆ ಕಡ್ಡಾಯಕ್ಕೊಳಗಾದ ಭಾವನೆಯನ್ನು ಹೊಂದಿರತಕ್ಕದ್ದು.

*ಆತನು ಎರಡು ಆಜ್ಞೆಗಳನ್ನು ಕೊಟ್ಟನು* (ವಚನಗಳು 26, 27). ಮೊದಲನೆಯದಾಗಿ, ಒಬ್ಬರನ್ನೊಬ್ಬರು ಒಂದು "ಪವಿತ್ರವಾದ ಮುದ್ದಿಟ್ಟು" ವಂದಿಸಿರಿ ಎಂದು ಪೌಲನು ಹೇಳಿದನು (ವ. 26). ಹೊಸ ಒಡಂಬಡಿಕೆಯಲ್ಲಿ "ಪವಿತ್ರವಾದ ಮುದ್ದು" ಎಂಬುದು ಹಲವಾರು ಸಾರಿ ಪ್ರಸ್ತಾಪಿಸಲ್ಪಟ್ಟಿದೆ (ರೋಮಾ 16:16; 1 ಕೊರಿಂಥ 16:20; 1 ಪೇತ್ರ 5:14). ಆ ಸಂಸ್ಕೃತಿಯಲ್ಲಿ ಇದು ಒಬ್ಬರನ್ನೊಬ್ಬರು ವಂದಿಸುವ ವಾಡಿಕೆಯಲ್ಲಿದ್ದ ರೀತಿಯಾಗಿತ್ತು. ಅದು ಕ್ರೈಸ್ತತ್ವವು ಸ್ಥಾಪಿಸಲ್ಪಡುವದಕ್ಕೆ ಮುಂಚೆಯೇ ಇದ್ದದ್ದಾಗಿತ್ತು ಮತ್ತು ಈ ದಿನಗಳಲ್ಲಿ ಸಹ ಅನೇಕ ಸಂಸ್ಕೃತಿಗಳನ್ನು ಮುಂದುವರೆದಿರುತ್ತದೆ.

ಈ ರೀತಿಯಾದ ವಂದಿಸುವಿಕೆಗೆ ಕ್ರೈಸ್ತತ್ವದ ಕೊಡುಗೆಯು ಏನೆಂದರೆ ಅದನ್ನು "ಪವಿತ್ರ" ಅಥವಾ "ಒಂದು ಪ್ರೀತಿಯ ಮುದ್ದು" ಆಗಿರುವಂತೆ ಮಾಡಿದ್ದೇ ಆಗಿದೆ. ವ್ಯತ್ಯಾಸವೇನೆಂದರೆ ಅವರ ವಂದಿಸುವಿಕೆಯು ಕೇವಲ ಒಂದು ಪದ್ಧತಿ ಮಾತ್ರವೇ ಆಗಿರದೆ, ಅದೊಂದು ಪ್ರಾಮಾಣಿಕವಾದ ವಂದಿಸುವಿಕೆಯಾಗಿರಬೇಕಿತ್ತು. ಒಂದು ವೇಳೆ ಇಂದು ಪೌಲನು ನಮ್ಮ ಮಧ್ಯದಲ್ಲಿರುವದಾಗಿದ್ದರೆ, ಆತನು ಹೀಗೆ ಹೇಳಿರುತ್ತಿದ್ದನು, "ನಿಮ್ಮ ಸಹೋದರರು ಮತ್ತು ಸಹೋದರಿಯ ಹಸ್ತಲಾಘವ ಮಾಡಿರಿ. ನೀವೇ ಮೊದಲು ಮುಂದಾಗಿರಿ-

ಸ್ನೇಹಮಯಿಯಾಗಿರಿ! ನಿಮ್ಮ ಹಸ್ತಲಾಘವವು ಪ್ರಾಮಾಣಿಕವಾಗಿರುವಂತೆ ಜಾಗ್ರತೆ ವಹಿಸಿರಿ." ನಾವು ವಂದನೆ ಹೇಳುವದಕ್ಕೆ, ಸಂದರ್ಶನ ಮಾಡುವದಕ್ಕೆ, ಮತ್ತು ಒಬ್ಬರೊಂದಿಗೊಬ್ಬರು ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವದಕ್ಕೆ ಸಮಯವನ್ನು ಮಾಡಿಕೊಳ್ಳಬೇಕು.

ಎರಡನೆಯದಾಗಿ, ಪೌಲನು "ತನ್ನ ಪತ್ರಿಕೆಯನ್ನು ಸಹೋದರರೆಲ್ಲರಿಗೂ ಓದಿ ಹೇಳಬೇಕು" ಎಂಬದಾಗಿ ಸಭೆಗೆ ಹೇಳಿದನು (ವ. 27). ಪೌಲನು ಈ ಆಜ್ಞೆಯನ್ನು ಗಂಭೀರವಾಗಿ ತೆಗೆದುಕೊಂಡನು, ತಾನು "ಕರ್ತನ" ಆಣೆಯನ್ನು ಇಡುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ತನ್ನ ಮಾತುಗಳಿಗೆ ದೇವತ್ವದ ಅಧಿಕಾರವಿರುತ್ತದೆಂಬುದನ್ನು ಆತನು ಪರೋಕ್ಷವಾಗಿ ಸೂಚಿಸಿದನು. ಆತನು "ವಿಧಿಸುತ್ತೇನೆ" ಎಂದು ಹೇಳಿದನು. "ವಿಧಿಸುತ್ತೇನೆ" ಎಂಬುದು ಗ್ರೀಕ್ ನ ἐνορκίζω (*enorkizō*) ಎಂಬ ಪದದಿಂದ ಬಂದಿರುತ್ತದೆ. Robertson ಪ್ರಕಾರವಾಗಿ, ಒಬ್ಬನಿಗೆ ಆಣೆ ಇಡುವದನ್ನು ಸೂಚಿಸುವ ಹಳೇ ಪದದಲ್ಲಿ ತನ್ನ ಬೇರುಗಳನ್ನು ಹೊಂದಿರುತ್ತದೆ.[62] ಥೆಸಲೋನಿಕದವರು ವಿಧೇಯರಾಗುವರೋ ಅಥವಾ ಇಲ್ಲವೋ ಎಂಬುದಕ್ಕೆ ಕರ್ತನನ್ನು ಸಾಕ್ಷಿಯಾಗಿ ಕರೆಯುವ ಮೂಲಕ ಈ ಆಣೆಯು ಶಾಸ್ತ್ರೋಕ್ತಗೊಳಿಸಲ್ಪಟ್ಟಿತು. ಸಭೆಯ ಎಲ್ಲಾ ಸದಸ್ಯರಿಗೂ ಸಾರ್ವಜನಿಕವಾಗಿ ತನ್ನ ಪತ್ರಿಕೆಯು ಓದಿ ಹೇಳಲ್ಪಡಬೇಕೆಂಬುದು ಪೌಲನ ಬಯಕೆಯಾಗಿತ್ತು. ಅಂಥ ಓದುವಿಕೆಯು ನಮ್ಮ ಬೈಬಲ್ ಅಧ್ಯಯನದ ಕಾಲಾವಧಿಗಳಿಗೆ ಸಮವಾಗಿರುವದಾಗಿದೆ.

ಪೌಲನ ಮನವಿಯು ಥೆಸಲೋನಿಕದವರು ಒಟ್ಟಾಗಿ ದೇವರ ವಾಕ್ಯವನ್ನು ಅಧ್ಯಯನ ಮಾಡಬೇಕೆಂದಾಗಿತ್ತೆಂದು ಕೆಲವರು ತರ್ಕಿಸಬಹುದು. ಹಾಗಿರುವದಾದಲ್ಲಿ, ಪೌಲನ ಆಜ್ಞೆಯು ಇಂದಿನ ಕ್ರೈಸ್ತರೊಂದಿಗೆ ಮಾತಾಡುವದಾಗಿದೆ. ನಾವು ದೇವರ ವಾಕ್ಯವನ್ನು ಆಲಿಸುವ ಮತ್ತು ಅಧ್ಯಯನ ಮಾಡುವ ಅಗತ್ಯವಿರುತ್ತದೆ. ನಾವು ಅದನ್ನು ಒಂದು ಸಭೆಯಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿರುತ್ತದೆ.

ಥೆಸಲೋನಿಕದವರು ತಮ್ಮ ನಂಬಿಕೆಯಲ್ಲಿ ಹೇಗೆ ಅಭಿವೃದ್ಧಿಗೊಳ್ಳುವರೋ ಎಂಬುದರ ಬಗ್ಗೆ ಪೌಲನಿಗೆ ಬಹಳವಾದ ಕಳಕಳಿಯಿತ್ತು. ಆ ಸಭೆಗೆ ಆತನು ನೀಡಿದ ಸಂದೇಶಗಳು ನಮ್ಮ ಸಭೆಗಳಿಗೆ ಸಹ ಪ್ರಸಕ್ತವಾಗಿರುತ್ತವೆ. ಆತನು ಫಿಲಿಪ್ಪಿಯದವರಿಗೆ ಹೀಗೆ ಬರೆದನು, "ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ; ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು" (ಫಿಲಿಪ್ಪಿ 4:9). ನಾವು ಪೌಲನ ಬುದ್ಧಿವಾದಗಳನ್ನು ಕೇಳಿಸಿಕೊಳ್ಳುವ, ಸ್ವೀಕರಿಸಿಕೊಳ್ಳುವ, ಕಲಿತುಕೊಳ್ಳುವ, ಮತ್ತು ಆಚರಣೆಯಲ್ಲಿ ಕೈಕೊಳ್ಳುವ ಅಗತ್ಯವಿರುತ್ತದೆ. ನಾವು ಬೇರೆ ಕ್ರೈಸ್ತರಿಗಾಗಿ ಪ್ರಾರ್ಥಿಸಬೇಕು, ನಮಗೋಸ್ಕರ ಪ್ರಾರ್ಥಿಸುವಂತೆ ಬೇರೆಯವರನ್ನು ಕೇಳಿಕೊಳ್ಳಬೇಕು, ಇತರ ಕ್ರೈಸ್ತರನ್ನು ಯಥಾರ್ಥತೆಯಿಂದ ವಂದಿಸಬೇಕು, ಮತ್ತು ಶಾಸ್ತ್ರಗಳನ್ನು ಅಧ್ಯಯನ ಮಾಡಬೇಕು. ಇದನ್ನು ಮಾಡುವ ಮೂಲಕ, ಶಾಂತಿದಾಯಕನಾದ ದೇವರು ನಮ್ಮೊಂದಿಗಿರುವನು. EE

## ಎದುರು ನೋಡಿರಿ, ಪ್ರೀತಿಸಿರಿ, ಮತ್ತು ಜೀವಿಸಿರಿ (5:1-25)

ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯ ಈ ಕಡೇ ಅಧ್ಯಾಯವು ಬೆಳಕಿನ ಮಕ್ಕಳಾಗಿ ಜೀವಿಸಬೇಕೆಂಬ ವಿಷಯವನ್ನು ಒತ್ತಿ ಹೇಳುತ್ತದೆ. ಕ್ರೈಸ್ತನು ಸತ್ಯವೆಂಬ ಪ್ರಕಾಶಮಾನವಾದ ಬೆಳಕಿನ ಮಗುವಾಗಿದ್ದಾನೆ. ಭವಿಷ್ಯದ ಕುರಿತು ಆತನಿಗೆ ನಿಶ್ಚಯತ್ವ ಮತ್ತು ದೃಢವಿಶ್ವಾಸವಿರುತ್ತದೆ. ತಾನು ಎಲ್ಲಿಗೆ ಹೋಗುತ್ತಿರುವನೆಂಬುದು ಆತನಿಗೆ ತಿಳಿದಿರುತ್ತದೆ ಯಾಕೆಂದರೆ ಆತನಿಗೆ ಭವಿಷ್ಯವು ಏನಾಗಿದೆಯೆಂಬುದು ಗೊತ್ತಿರುತ್ತದೆ.

*ಎದುರು ನೋಡಿರಿ! ದಿನಕ್ಕಾಗಿ ನೋಡುತ್ತಾರೆ (5:1-11).* ಬೆಳಕಿನ ಮಕ್ಕಳು ಕ್ರಿಸ್ತನ ದಿನಕ್ಕಾಗಿ ಎದುರು ನೋಡುತ್ತಾರೆ. ಪೌಲನು ಹೀಗೆ ಹೇಳಿದನು, "ಸಹೋದರರೇ, ಈ ಸಂಗತಿಗಳು ನಡೆಯಬೇಕಾದ ಕಾಲಗಳನ್ನೂ ಗಳಿಗೆಗಳನ್ನೂ ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ" (ವ. 1). "ಕಾಲಗಳು" ಮತ್ತು "ಗಳಿಗೆಗಳು" ಎಂಬ ಪದಗಳು ಕಡೇ ಸಂಗತಿಗಳೊಂದಿಗೆ ಸಂಬಂಧಿಸಿರುತ್ತವೆ, ಉದಾಹರಣೆಗೆ ಕರ್ತನ ಬರೋಣ ಮತ್ತು ಅಂತಿಮ ನ್ಯಾಯತೀರ್ಪು.

ಆತನು ". . . ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ" ಎಂದು ಹೇಳುತ್ತಾನೆ. 4:9ರಲ್ಲಿ, ಆತನು ಸಹೋದರ ಪ್ರೀತಿಯ ವಿಷಯದಲ್ಲಿ ಇದೇ ಪದವನ್ನು ಬಳಸುವವನಾಗಿ ಹೀಗೆ ಹೇಳುತ್ತಾನೆ, "ಸಹೋದರಸ್ನೇಹದ (ಪ್ರೀತಿಯ) ವಿಷಯದಲ್ಲಿ ನಿಮಗೆ ಬರೆಯುವದು ಅವಶ್ಯವಿಲ್ಲ; ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಉಪದೇಶವನ್ನು ನೀವೇ ದೇವರಿಂದ ಹೊಂದಿದವರಾಗಿದ್ದೀರಿ." ಅವರಿಗೆ ಆ ದಿನವು ಯಾವಾಗ ಬರುವದೆಂಬುದು ತಮಗೆ ಗೊತ್ತಿಲ್ಲವೆಂಬುದನ್ನು ಅವರು ಚೆನ್ನಾಗಿ ತಿಳಿದವರಾಗಿದ್ದರಾದ್ದರಿಂದ ಆತನು ಅವರಿಗೆ ಬರೆಯುವ ಅಗತ್ಯವಿರಲಿಲ್ಲ.

ರಕ್ಷಕನು ರಾತ್ರಿಯಲ್ಲಿ ಕಳ್ಳನು ಬರುವ ರೀತಿಯಲ್ಲಿ ಬರಲಿರುವನು. ಕಳ್ಳನು ಹೇಗೆ ಬರುವನು? ಆತನು ಬರುತ್ತಿದ್ದಾನೆಂಬದಾಗಿ ಅಂಚೆಯ ಮೂಲಕ ನಿಮಗೆ ಒಂದು ಆಮಂತ್ರಣವು ಸಿಕ್ಕುತ್ತದೋ? ಇಲ್ಲ, ಆತನು ಸುದ್ದಿಯಿಲ್ಲದೆ ಮತ್ತು ಮುಂದಾಗಿ ಘೋಷಿಸದೆಯೇ ಫಕ್ಕನೆ ಅಪ್ಪಳಿಸುತ್ತಾನೆ. ಎರಡನೆಯ ಪೇತ್ರ 3:9, 10 ಹೀಗೆ ಹೇಳುತ್ತದೆ, "ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ. ಆದರೂ ಆ ಕರ್ತನ ದಿನವೂ ಕಳ್ಳನು ಬರುವಂತೆ ಬರುತ್ತದೆ."

ಎರಡನೆಯ ಬರೋಣದ ಸಿದ್ಧಾಂತ ಮತ್ತು ಕಾರ್ಯರೂಪದ ನೈತಿಕತೆಯ ನಡುವೆ ಒಂದು ಜೋಡಣೆ, ಒಂದುಗೂಡಿಸುವಿಕೆಯು ಇರುತ್ತದೆ. ಇದು ಕರ್ತನ ದಿನ ಕುರಿತಾಗಿ ಪೇತ್ರನು ಹೇಳಿದ ಮಾತುಗಳಲ್ಲಿ ಕಂಡು ಬರುತ್ತದೆ, ". . . ಆಕಾಶಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು. ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ *ನೀವು ದೇವರ ದಿನದ ಪ್ರತ್ಯಕ್ಷತೆಯನ್ನು*

*ಎದುರುನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ"* (2 ಪೇತ್ರ 3:10, 11; ಒತ್ತಿ ಹೇಳಿದ್ದು ನನ್ನದು).

ಆತನು ಹಿಂದಿರುಗಿ ಬರುತ್ತಿದ್ದಾನೆಂಬ ವಾಸ್ತವಾಂಶವು ನಾವು ಜೀವಿಸುವ ರೀತಿಯ ಮೇಲೆ ಪರಿಣಾಮವನ್ನು ಬೀರತಕ್ಕದ್ದು. ಆತನ ಬರೋಣದ ಸತ್ಯವು ಇಂದು ನಾವು ಹೇಗೆ ಜೀವಿಸುತ್ತಿದ್ದೇವೆಂಬುದರ ಮೇಲೆ ಪ್ರಭಾವವನ್ನು ಬೀರುವ ಹೊರತು, ನಾವು ಈ ವಿಭಾಗದ ಪಾಠವನ್ನು ನಿಜವಾಗಿಯೂ ಹೃದಯದಕ್ಕೆ ತೆಗೆದುಕೊಂಡಿಲ್ಲ ಎಂದಾಗುತ್ತದೆ.

*ಪ್ರೀತಿ! ನಿಮಗಾಗಿ ಪ್ರಯಾಸ ಪಡುವವರನ್ನು ಪ್ರೀತಿಸಿರಿ (5:12, 13).* ಬೆಳಕಿನ ಮಕ್ಕಳು ತಮ್ಮ ಮಧ್ಯದಲ್ಲಿ ಪ್ರಯಾಸ ಪಟ್ಟು ಕೆಲಸ ಮಾಡುವವರನ್ನು ಪ್ರೀತಿಸತಕ್ಕದ್ದು. ಪೌಲನು ಹೀಗೆ ಹೇಳಿದನು, "ಸಹೋದರರೇ, ಯಾರು ನಿಮ್ಮಲ್ಲಿ ಪ್ರಯಾಸಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ" (ವಚನಗಳು 12, 13). ಕೇವಲ ಒಂದೇ ಗುಣವಾಚಿಯನ್ನೊಳಗೊಂಡ ಮೂರು ಕೃದಂತಗಳು ಸೂಚಿಸುವದೇನೆಂದರೆ ಆತನು ಒಬ್ಬರೇ ವ್ಯಕ್ತಿಗಳನ್ನುದ್ದೇಶಿಸಿ ಮಾತಾಡುತ್ತಿದ್ದಾನೆ ಎಂಬದೆ. ಆತನು "ಯಾರು ನಿಮ್ಮಲ್ಲಿ ಪ್ರಯಾಸ ಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ" ಎಂದು ಹೇಳಿದಾಗ, ಆತನು ಅವರ ಮೂರು ವಿಧವಾದ ಕೆಲಸಗಳನ್ನು ತೋರಿಸಿ ಕೊಡುತ್ತಿದ್ದಾನೆ. ಅವರು "ನಿಮ್ಮಲ್ಲಿ ಪ್ರಯಾಸ ಪಡುತ್ತಾರೆ," "ಅವರು ನಿಮ್ಮ ಮೇಲೆ ಮುಖ್ಯಸ್ಥರಾಗಿರುತ್ತಾರೆ," ಮತ್ತು ಕರ್ತನ ವಾಕ್ಯದಲ್ಲಿ "ಅವರು ನಿಮಗೆ ಬುದ್ಧಿ ಹೇಳುತ್ತಾರೆ."

"ನಿಮ್ಮಲ್ಲಿ ಪ್ರಯಾಸ ಪಟ್ಟು ಕೆಲಸ ಮಾಡುವವರನ್ನು ಲಕ್ಷಿಸಿರಿ" ಎಂದು ಆತನು ಹೇಳುತ್ತಾನೆ. "ಪ್ರಯಾಸ" ಎಂಬುದು 1:3ರಲ್ಲಿ "ಪ್ರೀತಿಪೂರ್ವಕವಾದ ಪ್ರಯಾಸ" ಎಂದು ಅನುವಾದಿಸಲ್ಪಟ್ಟಿರುವ ಪದದ ಒಂದು ರೂಪವಾಗಿರುತ್ತದೆ. ಇದು *kopos* ಎಂಬ ಪದದ ಒಂದು ರೂಪವಾಗಿದೆ, ನಿಮಗೆ ಕಂಡು ಬರುವ ಪ್ರಕಾರ, *kopos* ಎಂಬುದು "copout" ಎಂಬದರಿಂದ ಬಹು ದೂರವಾದದ್ದು. ಇದು ಬಳಲಿಕೆಯನ್ನುಂಟು ಮಾಡುವಂತಹ ಪ್ರಯಾಸವಾಗಿರುತ್ತದೆ. ಅದು ಆಯಾಸವನ್ನು ತರುವಂತದ್ದು, ದಣಿಸುವ ಪ್ರಯಾಸವಾಗಿರುವದು. ಪೌಲನು ತಾನು ಗುಡಾರ ತಯಾರಿಸುವ ಕೆಲಸದ ಬಗ್ಗೆ ಮಾತಾಡುವಾಗ ಈ ಪದವನ್ನು ಅನೇಕ ಸಾರಿ ಬಳಸಿದನು. ಇಲ್ಲಿ ಅದು ಆತ್ಮಗಳನ್ನು ಕಾಯುವವರ ಕೆಲಸವನ್ನು ಸೂಚಿಸುತ್ತದೆ. ಎಂಥ ಒಂದು ಪ್ರಯಾಸ ಇದು! ಅದೇ ರೀತಿಯಲ್ಲಿರುವ ಇಬ್ರಿಯ 13:17ರ ವಾಕ್ಯಭಾಗದಲ್ಲಿ, ನಾವು ಹೀಗೆ ಓದುತ್ತೇವೆ, "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ."

ಅಲ್ಲದೆ ನೀವು "ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ

ಸನ್ಮಾನಿಸಬೇಕು" (ವ. 13). ಅವರು ಅತ್ಯಂಥ ಇಷ್ಟವಾಗುವಂತ ವ್ಯಕ್ತಿಗಳಾಗಿರುವದರಿಂದ ಅವರನ್ನು ಸನ್ಮಾನಿಸಬೇಕೆಂದು ಪೌಲನು ಹೇಳಲಿಲ್ಲ. ನಾವು ಅವರ ಕೆಲಸದ ನಿಮಿತ್ತ ಅವರನ್ನು ಸನ್ಮಾನಿಸಬೇಕು. ನಾಯಕನ ಜವಾಬ್ದಾರಿಗಳು ಮೂರು ಯೋಚನೆಗಳಲ್ಲಿ ಸಾರಾಂಶಿಸಲ್ಪಟ್ಟಿರುತ್ತದೆ: "ಪ್ರಯಾಸ," "ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು," "ಬುದ್ಧಿ ಹೇಳುತ್ತಾರೋ." ನಮ್ಮ ಜವಾಬ್ದಾರಿಯು ಮೂರು ಆಜ್ಞೆಗಳಲ್ಲಿ ಸಾರಾಂಶಿಸಲ್ಪಟ್ಟಿದೆ: "ಲಕ್ಷಿಸು," "ಸನ್ಮಾನಿಸು," ಮತ್ತು "ಸಮಾಧಾನ."

*ಜೀವಿಸಿರಿ!* ಸಂತೋಷದಿಂದ ಜೀವಿಸಿರಿ (5:14-25). ಈ ಅಧ್ಯಾಯದ ಅಂತಿಮ ವಿಭಾಗವು ಥೆಸಲೋನಿಕದ ಸಭೆಯು ಯಾವ ವಿಧವಾದ ಸಭೆಯಾಗಿರಬೇಕೆಂದು ಪವಿತ್ರಾತ್ಮನು ಬಯಸುವನೆಂಬದರ ಹಲವಾರು ಚಿಕ್ಕ ಚಿಕ್ಕ ರೇಖೆಗಳಿಂದ ಚಿತ್ರವನ್ನು ಮೂಡಿಸುತ್ತದೆ. ಅದೊಂದು ಪ್ರಾರ್ಥನೆ ಮಾಡುವಂಥ ಸಭೆ, ಸಂತೋಷದಿಂದಿರುವ ಸಭೆ, ಮತ್ತು ಒಂದು ಪ್ರೀತಿಯ ಮನೋವೃತ್ತಿಯುಳ್ಳಂಥ ಸಭೆಯಾಗಿರಬೇಕೆಂಬುದೆ. ಬೆಳಕಿನ ಮಕ್ಕಳು ಸಂತೋಷದಿಂದ ಜೀವಿಸಬೇಕು.

ಪೌಲನು "ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ" ಎಂದು ಹೇಳುತ್ತಾನೆ. "ಮನಗುಂದಿದವರು" ಎಂಬುದಕ್ಕೆ *KJV*ಯಲ್ಲಿ "ದುರ್ಬಲ-ಮನಸ್ಸುಳ್ಳವರು" ಎಂದಿರುತ್ತದೆ. ಇದು ಒಂದು ಉತ್ತಮ ಅನುವಾದವಾಗಿರಲಾರದು. "ಮನಗುಂದಿದವರು" ಎಂಬುದರ ಅಕ್ಷರಶಃ ಅರ್ಥವು "ಹೃದಯದಲ್ಲಿ ಚಿಕ್ಕವರು" ಎಂದಾಗಿರುತ್ತದೆ. ಪೌಲನು "ಹೆದರಿ"ದ್ದವರನ್ನು ಸೂಚಿಸಿ ಹೇಳುತ್ತಿದ್ದಾನೆಂದು ಕಾಣಿಸುತ್ತದೆ. ಸತ್ತವರ ಕಾರಣದಿಂದಾಗಿ ಹೆದರಿಕೆಯುಳ್ಳವರಾಗಿ ಇರಬಹುದಾಗಿದ್ದವರು, ತಮ್ಮ ಸ್ವಂತ ರಕ್ಷಣೆಯ ಕುರಿತು ಹೆದರಿಕೆಯುಳ್ಳವರು, ಚಿಂತನೆಯಲ್ಲಿರುವವರಾಗಿ ಇರಬಹುದಾಗಿದೆ. ಆತನು "ಬಲಹೀನರಿಗೆ ಆಧಾರವಾಗಿರಿ" ಎಂದು ಹೇಳುತ್ತಾನೆ. "ಬಲಹೀನರು" ಎಂಬುದನ್ನು ಬಹಳ ವಿಸ್ತಾರವಾದ ಅರ್ಥದಲ್ಲಿ ಬಳಸಲ್ಪಡಬಹುದಾಗಿದೆ. ಬಲಹೀನರೆಂದರೆ ಸುವಾರ್ತೆ ಮತ್ತು ನೈತಿಕತೆಯ ನಡುವೆ ಸಂಬಂಧವಿರುವದನ್ನು ಇನ್ನೂ ತಿಳಿದುಕೊಳ್ಳದವರೇ ಬಲಹೀನರೆಂದು ಕೆಲವರು ನಂಬುತ್ತಾರೆ. ಅವರಿಗೆ ಸಹಾಯವನ್ನು ಮತ್ತು ಬೆಂಬಲವನ್ನು ಕೊಡತಕ್ಕದ್ದು; ಉಪದೇಶಿಸಲ್ಪಟ್ಟು ಪರಿಪಕ್ವತೆಯೆಡೆಗೆ ಕರೆ ತರಲ್ಪಡತಕ್ಕದ್ದು.

*ಮುಕ್ತಾಯ.* ಪೌಲನು ಏನು ಹೇಳಿದ್ದಾನೆ? ಆತನ ಸಂದೇಶವು ಏನಾಗಿತ್ತು? ಆತನು ಹೀಗೆ ಹೇಳಿದನು, "ಎದುರು ನೋಡಿರಿ"-"ಆ ದಿನವನ್ನು ನೈತಿಕತೆ, ಶುದ್ಧತೆ, ಮತ್ತು ಎಚ್ಚರವಾಗಿರುವದಕ್ಕೆ ಒಂದು ಉತ್ತೇಜಕವೆಂಬಂತೆ ಎದುರು ನೋಡಿರಿ." ಆತನು "ಪ್ರೀತಿಸಿರಿ" ಎಂದು ಹೇಳಿದನು-"ನಿಮ್ಮಲ್ಲಿ ಪ್ರಯಾಸ ಪಡುವವರನ್ನು ಪ್ರೀತಿಸಿರಿ ಮತ್ತು ಅವರನ್ನು ಬಹಳವಾಗಿ ಸನ್ಮಾನಿಸಿರಿ." ಆತನು "ಜೀವಿಸಿರಿ" ಎಂದು ಹೇಳಿದನು-"ಸಂತೋಷವಾಗಿ ಜೀವಿಸಿರಿ."

ನೀವು ಕೆಲಸ ಮಾಡುತ್ತಿರುವಿರೋ? ನೀವು ಎಚ್ಚರದಿಂದಿರುವಿರೋ? ನೀವು ಸಂತೋಷವಾಗಿ ಜೀವಿಸುತ್ತಿರುವಿರೋ? ನಮ್ಮೊಳಗೆ ಒಂದು ದೊಡ್ಡದಾದ ಎದುರು ನೋಡುವಿಕೆಯ ಭಾವನೆಯು ಇರತಕ್ಕದ್ದು. ಅದು ಆದಿ ಸಭೆಯಲ್ಲಿದ್ದ ಮನೋವೃತ್ತಿಯಾಗಿತ್ತು. ಅದು ಥೆಸಲೋನಿಕದ ಸಭೆಯಲ್ಲಿ ಕಂಡು ಬರುವಂತದ್ದಾಗಿತ್ತು.

ನೀವು ಆ ದಿನಕ್ಕಾಗಿ ಸಿದ್ಧರಾಗಿರುವಿರೋ? ಕರ್ತನು ಈ ಕ್ಷಣದಲ್ಲಿ ಆಜ್ಞಾಘೋಷದೊಡನೆ ಇಳಿದು ಬರುವನೆಂದು ಊಹಿಸಿಕೊಳ್ಳಿರಿ. ನಾವು ಸಿದ್ಧರಾಗಿರುತ್ತೇವೋ? ನಾವು ಆತನನ್ನು ಎದುರು ನೋಡುತ್ತಿರುವವರಾಗಿ ಇರುವೆವೋ? AM

---

**ಅಡಿಟಿಪ್ಪಣಿಗಳು**

[1]See Leon Morris, *The First and Second Epistles to the Thessalonians*, The New International Commentary on the New Testament (Grand Rapids, Mich.: Wm. B. Eerdmans Publishing Co., 1959), 149. [2]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 34. [3]See Morris, 151. [4]Robert Jewett, *The Thessalonian Correspondence* (Philadelphia: Fortress Press, 1966), 96–97. [5]I. Howard Marshall, *1 and 2 Thessalonians*, New Century Bible Commentary (Grand Rapids, Mich.: Wm. B. Eerdmans Publishing Co., 1983), 132. [6]ಹೆಚ್ಚಿನ ಅಧ್ಯಯನಕ್ಕಾಗಿ, ನೋಡಿರಿ J. Schneider, "ὄλεθρος," in *Theological Dictionary of the New Testament*, ed. Gerhard Friedrich, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1967), 5:169. [7]David J. Williams, *1 and 2 Thessalonians*, New International Biblical Commentary: New Testament Series, vol. 12 (Peabody, Mass.: Hendrickson Publishers, 1992), 87. [8]C. F. Hogg and W. E. Vine, *The Epistles of Paul the Apostle to the Thessalonians* (Shreveport, La.: Lambert Publishing Co., 1977), 157. [9]J. E. Frame, *A Critical and Exegetical Commentary on the Epistles of St. Paul to the Thessalonians*, The International Critical Commentary (New York: Charles Scribner's Sons, 1912; reprint, Edinburgh: T. & T. Clark, 1988), 184. [10]Morris, 156.

[11]"ಎಚ್ಚರವಾಗಿರಿ ಮತ್ತು ಸ್ವಸ್ಥಚಿತ್ತರಾಗಿರಿ" ಎಂಬುದರ ವಿಷಯದಲ್ಲಿ, Robertsonನು ಹೀಗೆ ಹೇಳುತ್ತಾನೆ, "ನಾವು ಕಾಯುತ್ತಲಿರೋಣ" (*gregōrōmen*). ವರ್ತಮಾನ ಸಕ್ರಿಯ ಸಂಭಾವನಾ ರೂಪ. (volitive) ಪುನಃ, ನಾವು ಜಾಗರಣೆ ಮಾಡೋನ (ತಡವಾದ ಕ್ರಿಯಾದ *grēgoreō,* ಇದು ಪರಿಪೂರ್ಣ *egrēgora ಎಂಬುದರಿಂದ ಬಂದದ್ದು*). ಸ್ವಸ್ಥಚಿತ್ತರಾಗಿರು (*nēphōmen*). ವರ್ತಮಾನ ಕಾಲ ಸಕ್ರಿಯ ಸಂಭಾವನಾ ರೂಪ (volitive). ಹಳೇ ಕ್ರಿಯಾಪದವು ಅಮಲೇರಿವರಾಗಬೇಡಿರಿ. ಹೊಸ ಒಡಂಬಡಿಕೆಯಲ್ಲಿ ಕೇವಕ ಸಾಂಕೇತಿಕ ಅರ್ಥದಲ್ಲಿದ್ದು, ಶಾಂತವಾಗಿರುವದು, ಸ್ವಸ್ಥಚಿತ್ತದ ಮನಸ್ಸುಳ್ಳುವರಾಗಿರುವದು ಆಗಿರುತ್ತದೆ. ಅಲ್ಲದೆ 8ನೇ ವಚನದಲ್ಲಿ ಅಮಲೇರುವದಕ್ಕೆ ವಿರುದ್ಧವಾದ ರೂಪಕವು ಇರುತ್ತದೆ" (Robertson, 35). ಅಲ್ಲದೆ ನೋಡಿರಿ Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 672. [12]Robertson, 35. [13]F. F. Bruce, *1 & 2 Thessalonians*, Word Biblical Commentary, vol. 45 (Waco, Tex.: Word Books, 1982), 112. [14]See Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 112. [15]Bruce, 113–14. [16]Morris, 163. James Hope Moulton and George Milligan confirm this usage in *The Vocabulary of the Greek Testament: Illustrated from the Papyri and Other Non-Literary Sources* (Grand Rapids, Mich: Wm. B. Eerdmans Publishing Co., 1952), 441. [17]Bauer, 870. [18]Morris, 165. [19]Kelcy, 114. [20]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati, Ohio: Standard Publishing Foundation, 1916), 24; and Robertson, 36.

[21]Morris, 167. [22]Williams, 95. [23]Bauer, 679. [24]George Milligan, *St. Paul's Epistles to the Thessalonians* (London: Macmillan & Co., 1908; reprint, Grand Rapids, Mich.: Wm. B.

Eerdmans Publishing Co., 1952), 152. [25]Marshall, 151. [26]Bauer, 87. [27]Frame, 200. [28]Morris, 173n. [29]Ibid., 174n. [30]Robertson, 37.

[31]Bruce, 125. [32]Morris, 177. [33]Bruce, 125. [34]Morris, 177. [35]Henry Alford, *The Greek Testament*, rev. Everett F. Harrison (Chicago: Moody Press, 1958), 3:281. [36]Robertson, 38. [37]Bauer, 9–10. [38]Morris, 181. [39]ನೋಡಿರಿ 1 ಕೊರಿಂಥ 1:8, 9; 10:13; 2 ಥೆಸಲೋನಿಕ 3:3; ಇಬ್ರಿಯ 10:23; 1 ಯೋಹಾನ 1:9. [40]Robertson, 39.

[41]Morris, 183. [42]William Barclay, *The Letters to the Philippians, Colossians, and Thessalonians*, The Daily Study Bible Series (Philadelphia: Westminster Press, 1975), 208. [43]Robertson, 39. [44]Morris, 184. [45]Robertson, 39. [46]Williams, 105. [47]Quoted in Morris, 187n. [48]Elbert Bailey, "Watch and Pray," *Songs of the Church*, comp. and ed. Alton H. Howard (West Monroe, La.: Howard Publishing Co., 1977). [49]Jewett, 96–97. [50]Adam Clarke, *The Holy Bible with a Commentary and Critical Notes,* vol. 4, *Isaiah to Malachi* [New York: Abingdon-Cokesbury Press, n.d.], 79.

[51]Charles Wesley, "Soldiers of Christ, Arise," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [52]"Where Is Life?," in *Out of My Treasure*, ed. Willie W. White (Joplin, Mo.: College Press, 1964), 1:13. [53]Bauer, 870. [54]Abraham Malherbe, *Paul and the Thessalonians* (Philadelphia: Fortress Press, 1987), 91. [55]McGarvey and Pendleton, 26. [56]Kelcy, 121. [57]David Lipscomb, *A Commentary on the New Testament Epistles: I, II Thessalonians, I, II Timothy, Titus, and Philemon*, edited with additional notes by J. W. Shepherd, New Testament Series, vol. 5 (Nashville: Gospel Advocate Co., 1958), 75. [58]W. E. Vine, *Vine's Expository Dictionary of Old and New Testament Words* (Old Tappan, N.J.: Fleming H. Revell Co., 1981), 296. [59]C. G. Wilke and Wilibald Grimm, *A Greek-English Lexicon of the New Testament*, trans. and rev. Joseph H. Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 6. [60]Ibid., 1079.

[61]Elijah M. Hickok, *12,000 Religious Quotations*, ed. Frank Mead (Grand Rapids, Mich.: Baker, 1989), 341. [62]Robertson, 39.